ಗುರುವಾರ, ಮೇ 18, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 137 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾವಾಣಿ
ಭಾರತದಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳು ಎಷ್ಟಿವೆ ಗೊತ್ತಾ?

ಆಳ-ಅಗಲ: ಬಿಜೆಪಿ ಕೈ ಹಿಡಿಯದ ಅಭಿವೃದ್ಧಿ ಯೋಜನೆಗಳ ಜನಪ್ರಿಯತೆ

ಅತಿ ಶ್ರೀಮಂತರ ಸಂಖ್ಯೆ ಶೇ 7.5ರಷ್ಟು ಇಳಿಕೆ 10

ಅದಾನಿ ಸಮೂಹ ವಿರುದ್ಧ ತನಿಖೆ: ಆ. 14ರ ಗಡುವು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,560	18,181	₹62,480 (ಬೆಂಗಳೂರು)	₹73,800 (ಬೆಂಗಳೂರು)	82.38

ವಿಮಾ ಹಗರಣ 12 ಕಡೆ ಸಿಬಿಐ ಶೋಧ

ನವದೆಹಲಿ (ಪಿಟಿಐ): ವಿಮಾ ಹಗರಣ ಪ್ರಕರಣಕ್ಕೆ ಸಂಬಂಧಿಸಿ ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರ ಆಗಿನ ಸಹಾಯಕನ ನಿವಾಸ, ದೆಹಲಿ, ರಾಜಸ್ಥಾನ ಹಾಗೂ ಇತರ ಕಡೆಗಳ 11 ಸ್ಥಳಗಳಲ್ಲಿ ಸಿಬಿಐ ಬುಧವಾರ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಲಿಕ್ ಅವರ ಅಂದಿನ ಸಹಾಯಕ ಸೌನಕ್ ಬಾಲಿ, ಲೆಕ್ಕ ಪರಿಶೋಧಕ ಸಂಜಯ್ ನಾರಂಗ್, ವೀರೇಂದ್ರ ಸಿಂಗ್ ರಾಣಾ, ಕನ್ವರ್ ಸಿಂಗ್ ರಾಣಾ, ಪ್ರಿಯಾಂಕಾ ಚೌಧರಿ ಮತ್ತು ಅನಿತಾ ಅವರ ದೆಹಲಿ ಹಾಗೂ ರಾಜಸ್ಥಾನದ ನಿವಾಸದಲ್ಲಿ ಸಿಬಿಐ ತಂಡಗಳು ಶೋಧ ಕಾರ್ಯಾಚರಣೆ ನಡೆಸಿವೆ.

ತನಿಖಾ ಸಂಸ್ಥೆ ಮಾಹಿತಿ ಪ್ರಕಾರ, ದೆಹಲಿಯ 10 ಸ್ಥಳಗಳಲ್ಲಿ ಮತ್ತು ರಾಜಸ್ಥಾನದ ಎರಡು ಜಿಲ್ಲೆಗಳಲ್ಲಿ ಶೋಧ ನಡೆದಿದೆ.

11ನೇ ಪುಟ ನೋಡಿ

‘ಮೈತ್ರಿ ಸರ್ಕಾರ ಪತನ: ಸಿದ್ದರಾಮಯ್ಯ ಪಾತ್ರವೇನು’

ಬೆಂಗಳೂರು: ‘ಸಮ್ಮಿಶ್ರ ಸರ್ಕಾರದ ಪತನದಲ್ಲಿ ಸಿದ್ದರಾಮಯ್ಯ ಅವರ ಪಾತ್ರ ನಿರಾಕರಿಸಲು ಸಾಧ್ಯವೇ’ ಎಂದು ಡಾ.ಕೆ. ಸುಧಾಕರ್ ಮತ್ತು ಎಸ್.ಟಿ. ಸೋಮಶೇಖರ್ ಟ್ವೀಟ್ ಮಾಡಿದ್ದು, ಇದಕ್ಕೆ ಪ್ರತಿಕ್ರಿಯೆ ನೀಡಿರುವ ಎಂ.ಟಿ.ಬಿ. ನಾಗರಾಜ್ ‘ಸೋಲಿನಿಂದ ಭ್ರಮನಿರಸನಗೊಂಡು ಈ ರೀತಿ ಹೇಳಿಕೆ ನೀಡಿದ್ದಾರೆ’ ಎಂದಿದ್ದಾರೆ. 7

ಒಳ ಪುಟಗಳು

‘ಅಲಕ್ಷ್ಯ’ಕ್ಕೆ ಮದ್ದು ಅರೆದರೆ ಶಿವಕುಮಾರ? 7
‘ಮುಂದಿನ ವಾರ ವಿಪಕ್ಷ ನಾಯಕನ ಆಯ್ಕೆ’ 7
ಹನುಮಾನ್ ಮಂದಿರಕ್ಕೆ ಕುಸ್ತಿಪಟುಗಳ ಪಾದಯಾತ್ರೆ 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಿಫಲವಾದ ರಾಹುಲ್ ಸೂತ್ರ • ಸಿದ್ದರಾಮಯ್ಯಗೆ ಪಟ್ಟ ಬಿಡಲು ಡಿಕೆಶಿ ನಕಾರ • ಎಐಸಿಸಿ ಅಧ್ಯಕ್ಷರಿಂದ ದಿನವಿಡೀ ಸರಣಿ ಸಭೆ

ಸಿ.ಎಂ ಗಾದಿಗೆ ಇನ್ನೂ ಸಿಗದ ‘ಗ್ಯಾರಂಟಿ’

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವವರೆಗೆ ‘ಜೋಡೆತ್ತು’ಗಳಂತೆ ಪದೇ ಪದೇ ಬಿಂಬಿಸಿಕೊಂಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್‌ನ ಹಿರಿಯ ಶಾಸಕ ಸಿದ್ದರಾಮಯ್ಯ ‘ಮುಖ್ಯಮಂತ್ರಿ ಕುರ್ಚಿ’ಗಾಗಿ ನೊಗ ಕಿತ್ತೆಸೆದು ಸಂಘರ್ಷದ ಹಾದಿ ತುಳಿದಿದ್ದಾರೆ. ಮತ ಸೆಳೆಯಲು ಐದು ‘ಗ್ಯಾರಂಟಿ’ಗಳನ್ನು ತಕರಾರಿಲ್ಲದೇ ಪ್ರಕಟಿಸಿದ್ದ ‘ಕೈ’ಪಾಳಯಕ್ಕೆ ಉಭಯ ನಾಯಕರ ಕಚ್ಚಾಟದಿಂದಾಗಿ ಮುಖ್ಯಮಂತ್ರಿ ಗಾದಿಯ ‘ಭರವಸೆ’ ನೀಡಲು ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಬುಧವಾರ ಬೆಳಿಗ್ಗೆ ಚರ್ಚಿಸಿದ ಸಿದ್ದರಾಮಯ್ಯ, ಸಂಜೆ ಕೆ.ಸಿ. ವೇಣುಗೋಪಾಲ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದರು. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಗುರುವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂಬ ಸುದ್ದಿಗಳು ಹರಡಿದ ಕೂಡಲೇ ಶಿವಕುಮಾರ್ ಬಣ ಚುರುಕಾಯಿತು. ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರನ್ನು ಹೈಕಮಾಂಡ್ ಘೋಷಿಸದಂತೆ ತಡೆಯುವಲ್ಲಿ ಅವರ ಬಣ ಯಶಸ್ವಿಯಾಯಿತು. ಇನ್ನಷ್ಟು ಶಾಸಕರ ‘ಬಹಿರಂಗ’ ಬೆಂಬಲ ಗಳಿಸಿತು. ಆ ಮೂಲಕ ಮೇಲುಗೈಯನ್ನೂ ಸಾಧಿಸಿತು. ಈ ನಡುವೆ, ಆದಾಯ ಮೀರಿ ಆಸ್ತಿ ಗಳಿಸಿರುವ ಪ್ರಕರಣದಲ್ಲಿ ಶಿವಕುಮಾರ್ ವಿರುದ್ಧ ತನಿಖೆ ನಡೆಸುವುದಕ್ಕೆ ಮಧ್ಯಂತರ ತಡೆ ನೀಡಿರುವ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿತು. ಈ ಬೆಳವಣಿಗೆ ಸಹ ಶಿವಕುಮಾರ್ ಬಣಕ್ಕೆ ‘ಕುರ್ಚಿಯ ಹೋರಾಟ’ಕ್ಕೆ ಉತ್ಸಾಹ ತಂದುಕೊಟ್ಟಿತು.

ಶಿವಕುಮಾರ್ ಜತೆ ಸುಮಾರು ಒಂದೂವರೆ ಗಂಟೆ ಚರ್ಚಿಸಿದ ರಾಹುಲ್, ಅಧಿಕಾರ ಹಂಚಿಕೆಯ ಸೂತ್ರ (ತಲಾ ಎರಡೂವರೆ ವರ್ಷ ಮುಖ್ಯಮಂತ್ರಿ) ಮುಂದಿಟ್ಟರು. ‘ಪಕ್ಷವನ್ನು ಅಧಿಕಾರಕ್ಕೆ ತರುವ ಹೊಣೆಯನ್ನು ನಮಗೆ ವಹಿಸಲಾಗಿತ್ತು. ನಾವು ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇವೆ. ನಾವು ಈಗ ಕೂಲಿ ಕೇಳುತ್ತಿದ್ದೇವೆ’ ಎಂದು ಶಿವಕುಮಾರ್ ಬಲವಾಗಿ ಪ್ರತಿಪಾದಿಸಿದರು. ಜತೆಗೆ, ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡುವುದನ್ನು ಖಡಾಖಂಡಿತವಾಗಿ ವಿರೋಧಿಸಿದರು. ಅವರು ಬಿಗಿ ಪಟ್ಟು ಸಡಿಲಿಸದೆ ಇದ್ದಾಗ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸುವಂತೆ ರಾಹುಲ್ ಸೂಚಿಸಿದರು.

ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಗುರುವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂಬ ಸುದ್ದಿಗಳು ಹರಿದಾಡಿದವು. ‘ಫೈನಲ್, ಫೈನಲ್, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ’ ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ಈ ಎಲ್ಲ ಬೆಳವಣಿಗೆಗಳಿಂದ ಶಿವಕುಮಾರ್, ಡಿ.ಕೆ. ಸುರೇಶ್ ಮತ್ತಷ್ಟು ಕೆರಳಿದರು. ಖರ್ಗೆ ನಿವಾಸಕ್ಕೆ ಅಸಮಾಧಾನದಿಂದಲೇ ಬಂದ ಸಹೋದರರು, ಬೆಂಗಳೂರಿನಲ್ಲಿ ಆಗುತ್ತಿರುವ ಬೆಳವಣಿಗೆಗಳ ಕುರಿತು ಅವರ ಗಮನಕ್ಕೆ ತಂದರು. ‘ಮುಖ್ಯಮಂತ್ರಿ ಹೆಸರನ್ನು ಹೈಕಮಾಂಡ್ ಪ್ರಕಟಿಸುವ ಮುನ್ನವೇ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸಮಾರಂಭದ ಸಿದ್ಧತೆಗೆ ಸೂಚನೆ ನೀಡಿದವರು ಯಾರು’ ಎಂದು ಪ್ರಶ್ನಿಸಿದರು.

11ನೇ ಪುಟ ನೋಡಿ

ಖರ್ಗೆಗೆ ಧರ್ಮಸಂಕಟ



ಕಳೆದ ಎರಡು ದಶಕಗಳ ಅವಧಿಯಲ್ಲಿ ಮುಖ್ಯಮಂತ್ರಿ ಹಾದಿಯ ಹತ್ತಿರ ನಾಲ್ಕು ಸಲ ಬಂದು ಯಾವುದೇ ಲಾಬಿ ಮಾಡದೆ ಅವಕಾಶ ಸಿಗದವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು.

ಆದರೆ, ಕಳೆದ ಮೂರು ದಿನಗಳಿಂದ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಿಬ್ಬರು ಹಿಡಿದಿರುವ ಪಟ್ಟಿನಿಂದಾಗಿ ಖರ್ಗೆ ಅವರು ‘ಧರ್ಮ ಸಂಕಟ’ಕ್ಕೆ ಸಿಲುಕಿದ್ದಾರೆ.

‘ನೀವೇ ಮುಖ್ಯಮಂತ್ರಿಯಾಗಿ’ ಎಂಬ ಮಾತಿನ ಬಾಣದಿಂದಾಗಿ ಮುಜುಗರಕ್ಕೂ ಒಳಗಾಗಿದ್ದಾರೆ. ಹೈಕಮಾಂಡ್‌ನ ಮುಂದೆ ಯಾವತ್ತೂ ಯಾವುದೇ ಲಾಬಿ ನಡೆಸದ, ಯಾವುದೇ ಬೇಡಿಕೆ ಮುಂದಿಡದ ಅವರಿಗೆ ರಾಜ್ಯ ನಾಯಕರಿಬ್ಬರ ಬೇಡಿಕೆ ಈಡೇರಿಸಲು ಸಾಧ್ಯವಾಗುತ್ತಿಲ್ಲ. ಖರ್ಗೆ ಅವರಿಗೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಇಬ್ಬರೂ ಆಪ್ತರೇ. ಇಬ್ಬರಿಗೂ ಕಟು ಮಾತಿನಲ್ಲಿ ಎಚ್ಚರಿಕೆ ನೀಡಲಾಗದ ಸಂದಿಗ್ಧಕ್ಕೆ ಸಿಲುಕಿದ್ದಾರೆ ಎನ್ನಲಾಗಿದೆ.

‘ತವರು ರಾಜ್ಯದಲ್ಲಿ ಪಕ್ಷ ಅಭೂತಪೂರ್ವ ಸಾಧನೆ ಮಾಡಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಇದೊಂದು ಮುನ್ನುಡಿ. ಆದರೆ, ಇಬ್ಬರು ನಾಯಕರ ಪಟ್ಟಿನಿಂದಾಗಿ ಈ ಕಗ್ಗಂಟನ್ನು ಸುಲಭದಲ್ಲಿ ಬಗೆಹರಿಸಲು ಸಾಧ್ಯವಾಗುತ್ತಿಲ್ಲ. ಪಕ್ಷದ ಕಾರ್ಯಕರ್ತರಿಗೆ ಗೆಲುವನ್ನು ಸಂಭ್ರಮಿಸಲು ಸಾಧ್ಯವಾಗುತ್ತಿಲ್ಲ. ಈ ಎಲ್ಲ ಬೆಳವಣಿಗೆಗಳಿಂದ ತಪ್ಪು ಸಂದೇಶ ರವಾನೆಯಾಗುತ್ತಿದೆ’ ಎಂದು ಖರ್ಗೆ ಅವರು ಆಪ್ತರ ಬಳಿ ಬೇಸರ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

ಕಲೆ: ಪ್ರಕಾಶ್ ಶೆಟ್ಟಿ

ಬುಧವಾರದ ಬೆಳವಣಿಗೆ

- ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಹೆಸರು ಮುಂಚೂಣಿಗೆ
- ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಅವರೊಂದಿಗೆ ಖರ್ಗೆ ಸರಣಿ ಸಭೆ
- ರಾಜ್ಯದ ವೀಕ್ಷಕರಾದ ಸುಶೀಲ್ ಕುಮಾರ್ ಶಿಂದೆ, ಜಿತೇಂದ್ರ ಸಿಂಗ್ ಜತೆಗೆ ಖರ್ಗೆ ಚರ್ಚೆ
- ಮಧ್ಯಾಹ್ನ 12ಕ್ಕೆ ರಾಹುಲ್ ಗಾಂಧಿ ಜತೆಗೆ ಸಿದ್ದರಾಮಯ್ಯ ಮಾತುಕತೆ.
- ಮಧ್ಯಾಹ್ನ 12.30ರಿಂದ ರಾಹುಲ್ ಗಾಂಧಿ ಜತೆಗೆ ಡಿ.ಕೆ. ಶಿವಕುಮಾರ್ ಸಮಾಲೋಚನೆ
- ಮಧ್ಯಾಹ್ನ 2ರಿಂದ 4 ಗಂಟೆ ವರೆಗೆ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಡಿ.ಕೆ. ಶಿವಕುಮಾರ್ ಸಭೆ
- ಸಂಜೆ 5ರಿಂದ ಸಂಸದ ಡಿ.ಕೆ. ಸುರೇಶ್ ನಿವಾಸದಲ್ಲಿ ಆಪ್ತ ಶಾಸಕರೊಂದಿಗೆ ಶಿವಕುಮಾರ್ ರಣತಂತ್ರ
- ರಾತ್ರಿ 7ಕ್ಕೆ ರಣದೀಪ್ ಸಿಂಗ್ ಸುರ್ಜೇವಾಲಾ ಭೇಟಿ ಮಾಡಿದ ಡಿಕೆಶಿ
- ರಾತ್ರಿ 9.45ಕ್ಕೆ ಕೆ.ಸಿ. ವೇಣುಗೋಪಾಲ್ ಜತೆ ಸಿದ್ದರಾಮಯ್ಯ, ಡಿಕೆಶಿ ಪ್ರತ್ಯೇಕ ಮಾತುಕತೆ

ಡಿಕೆಶಿ-ಸೋನಿಯಾ ಚರ್ಚೆ

ಉಪಮುಖ್ಯಮಂತ್ರಿ ಸ್ಥಾನ ನೀಡುವ ಹೈಕಮಾಂಡ್‌ನ ಪ್ರಸ್ತಾಪವನ್ನು ಶಿವಕುಮಾರ್ ತಿರಸ್ಕರಿಸಿದ್ದಾರೆ.

ಭೇಟಿಯ ವೇಳೆ ರಾಹುಲ್ ಈ ಪ್ರಸ್ತಾವ ಮುಂದಿಟ್ಟರು. ಈ ವೇಳೆ, ಸೋನಿಯಾ ಗಾಂಧಿ ಅವರು ಸಹ ಶಿವಕುಮಾರ್ ಅವರೊಂದಿಗೆ ದೂರವಾಣಿ ಮೂಲಕ ಸಮಾಲೋಚಿಸಿದರು. ‘ಈಗ ಉಪಮುಖ್ಯಮಂತ್ರಿ ಸ್ಥಾನ ಒಪ್ಪಿಕೊಳ್ಳಿ. ಎರಡನೇ ಅವಧಿಗೆ ಮುಖ್ಯಮಂತ್ರಿಯನ್ನಾಗಿ ಮಾಡಿ ನಿಮ್ಮ ಸಾಧನೆಯನ್ನು ಪಕ್ಷ ಗುರುತಿಸಲಿದೆ’ ಎಂದು ವಾಗ್ದಾನ ನೀಡಿದರು. ‘ಕೊಡುವುದಾದರೆ ಮೊದಲ ಅವಧಿಗೆ ಮುಖ್ಯಮಂತ್ರಿ ಸ್ಥಾನ ನೀಡಿ’ ಎಂದು ಶಿವಕುಮಾರ್ ಹಟ ಹಿಡಿದರು ಎಂದು ಮೂಲಗಳು ಹೇಳಿವೆ.

ಒಂದು ವೇಳೆ, ಶಿವಕುಮಾರ್ ಅವರು ಸಂಪುಟ ಸೇರಲು ನಿರಾಕರಿಸಿ ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿದರೆ ಮೂರು ಉಪಮುಖ್ಯಮಂತ್ರಿ ಸ್ಥಾನಗಳನ್ನು ಸೃಷ್ಟಿಸುವ ಪ್ರಸ್ತಾಪವೂ ಹೈಕಮಾಂಡ್ ಮುಂದಿದೆ. ಈ ಸ್ಥಾನಗಳಿಗೆ ಎಂ.ಬಿ.ಪಾಟೀಲ (ಲಿಂಗಾಯತ), ಜಿ.ಪರಮೇಶ್ವರ (ದಲಿತ) ಹಾಗೂ ಯು.ಟಿ.ಖಾದರ್ (ಮುಸ್ಲಿಂ) ಅವರನ್ನು ಪರಿಗಣಿಸಲು ಹೈಕಮಾಂಡ್ ಯೋಜಿಸಿದೆ’ ಎಂದು ಮೂಲಗಳು ತಿಳಿಸಿವೆ.

‘ಶೀಘ್ರವೇ ಸಂಪುಟ’

ಶಾಸಕಾಂಗ ಪಕ್ಷದ ನಾಯಕನ ಹೆಸರನ್ನು ಪಕ್ಷ ಇನ್ನೂ ಅಂತಿಮಗೊಳಿಸಿಲ್ಲ. ಮುಂದಿನ 48ರಿಂದ 72 ಗಂಟೆಗಳಲ್ಲಿ ಹೊಸ ಸಚಿವ ಸಂಪುಟ ರಚನೆಯಾಗಲಿದೆ ಎಂದು ರಣದೀಪ್ ಸಿಂಗ್ ಸುರ್ಜೇವಾಲಾ ತಿಳಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಐದು ವರ್ಷಗಳ ಕಾಲ ಕಾಂಗ್ರೆಸ್‌ನ ಸ್ಥಿರ ಸರ್ಕಾರ ಇರುತ್ತದೆ. ಬಿಜೆಪಿ ಹರಡುತ್ತಿರುವ ಸುಳ್ಳು ಸುದ್ದಿಗಳನ್ನು ನಂಬಬಾರದು. ನಾವು ಪಕ್ಷದ ಐದು ಭರವಸೆಗಳನ್ನು ಜಾರಿಗೆ ತರುತ್ತೇವೆ ಎಂದರು.

ಪ್ರಮಾಣವಚನಕ್ಕೆ ಸಿಂಗಾರ!

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯ ಪ್ರಮಾಣವಚನ ಸ್ವೀಕಾರ ಸಮಾರಂಭ ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ (ಮೇ 18) ಮಧ್ಯಾಹ್ನ ನಡೆಯಲಿದೆ ಎಂಬ ಸುದ್ದಿ ಬುಧವಾರ ಬೆಳಿಗ್ಗೆ ಬಿತ್ತರವಾಗುತ್ತಿದ್ದಂತೆ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಹಿರಿಯ ಅಧಿಕಾರಿಗಳು ಕ್ರೀಡಾಂಗಣಕ್ಕೆ ತೆರಳಿದ ಭದ್ರತಾ ವ್ಯವಸ್ಥೆ ಪರಿಶೀಲಿಸಿದರು.

ಆದರೆ, ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಇನ್ನೂ ಖಚಿತವಾಗಿಲ್ಲ ಎಂದು ಗೊತ್ತಾಗುತ್ತಿದ್ದಂತೆ ಸಿದ್ಧತಾ ಕೆಲಸವನ್ನು ಅಧಿಕಾರಿಗಳ ಸೂಚನೆಯಂತೆ ಕಾರ್ಮಿಕರು ಅರ್ಧದಲ್ಲೇ ಸ್ಥಗಿತಗೊಳಿಸಿದರು.

ಯುವಜನ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಡಿಪಿಎಆರ್ ಕಾರ್ಯದರ್ಶಿ ಎಂ.ಎಸ್. ಶ್ರೀಕರ್, ಕೇಂದ್ರೀಯ ವಿಭಾಗದ ಡಿಸಿಪಿ ಶ್ರೀನಿವಾಸ್‌ಗೌಡ, ಸಂಚಾರ ವಿಭಾಗದ ಡಿಸಿಪಿ ಡಾ.ಸುಮನ್ ಡಿ. ಪನ್ನೇಕರ್ ಮತ್ತಿತರರು ಸ್ಥಳ ಪರಿಶೀಲನೆ ನಡೆಸಿದ್ದರು. ಕಾರ್ಮಿಕರು ಕ್ರೀಡಾಂಗಣದ ಗ್ಯಾಲರಿ ಸುತ್ತಲೂ ಕೇಸರಿ, ಬಿಳಿ, ಹಸಿರು ಬಣ್ಣದ ಬಟ್ಟೆ ಅಳವಡಿಸಿದರು. ಬ್ಯಾರಿಕೇಡ್, ಬೆಳಕಿನ ವ್ಯವಸ್ಥೆ, ನೆಲಹಾಸು ಅಳವಡಿಕೆ ಕಾರ್ಯವೂ ನಡೆಯಿತು. ಗ್ಯಾಲರಿಯಲ್ಲಿದ್ದ ಕುರ್ಚಿಗಳನ್ನು ತೆರವುಗೊಳಿಸಿ ವೇದಿಕೆ ನಿರ್ಮಾಣ ಇನ್ನೇನು ಆರಂಭಿಸಬೇಕು ಎನ್ನುವಷ್ಟರಲ್ಲಿ, ದಿಢೀರ್ ಎಲ್ಲ ಕೆಲಸಗಳನ್ನು ಸ್ಥಗಿತಗೊಳಿಸಲಾಯಿತು.

ಹರಿದಾಡಿದ ಆಹ್ವಾನ ಪತ್ರ: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಗುರುವಾರವೇ ಪ್ರಮಾಣವಚನ ಸ್ವೀಕಾರ ಮಾಡಲಿದ್ದಾರೆ ಎಂಬಂತೆ ಬಿಂಬಿಸುವ 2 ಆಹ್ವಾನ ಪತ್ರಿಕೆಗಳನ್ನು ಜಾಲತಾಣಗಳಲ್ಲಿ ಹರಿಬಿಡಲಾಗಿತ್ತು.

ನೀಡಿಕೆ ಬೆಲೆಗಿಂತಲೂ ಶೇ 40ರಷ್ಟು ಕುಸಿದ ಷೇರು ಬೆಲೆ

₹1.93 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್ಐಸಿ) ದೇಶದ ಷೇರುಪೇಟೆಗಳಲ್ಲಿ ವಹಿವಾಟು ಆರಂಭಿಸಿ ಬುಧವಾರಕ್ಕೆ ಒಂದು ವರ್ಷ ಕಳೆದಿದೆ. ಈ ಅವಧಿಯಲ್ಲಿ ಎಲ್ಐಸಿಯ ಷೇರುಗಳ ಬೆಲೆಯು ನೀಡಿಕೆ ಬೆಲೆಗಿಂತಲೂ ಶೇ 40ರವರೆಗೆ ಕುಸಿದಿದ್ದು, ಹೂಡಿಕೆದಾರರ ಸಂಪತ್ತು ₹1.93 ಲಕ್ಷ ಕೋಟಿಯಷ್ಟು ಕರಗಿದೆ.

ಎಲ್ಐಸಿಯು 2022ರಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೂಲಕ ₹20,557 ಕೋಟಿ ಬಂಡವಾಳ ಸಂಗ್ರಹಿಸಿತು. ಆ ಬಳಿಕ ಮೇ 17ರಂದು ಷೇರುಪೇಟೆಗಳಲ್ಲಿ ವಹಿವಾಟು ಆರಂಭಿಸಿತು.

ಮುಂಬೈ ಷೇರುಪೇಟೆಯಲ್ಲಿ (ಬಿಎಸ್ಇ) ಎಲ್ಐಸಿಯ ಷೇರಿನ ಬೆಲೆಯು ನೀಡಿಕೆ ಬೆಲೆಯಾದ ₹949ಕ್ಕೆ ಹೋಲಿಸಿದರೆ ಶೇ 39.92ರಷ್ಟು ಕುಸಿತ ಕಂಡಿದೆ. ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್ಎಸ್ಇ) ಷೇರು ಬೆಲೆಯು ನೀಡಿಕೆ ಬೆಲೆಗೆ ಹೋಲಿಸಿದರೆ ಶೇ 39.93ರಷ್ಟು ಇಳಿಕೆ ಕಂಡಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಬಿಎಸ್ಇನಲ್ಲಿ ಪ್ರತಿ ಷೇರಿನ ಬೆಲೆ ₹570.10 ಮತ್ತು ಎನ್ಎಸ್ಇನಲ್ಲಿ ಪ್ರತಿ ಷೇರಿನ ಬೆಲೆ ₹570ಕ್ಕೆ ತಲುಪಿದೆ.

ಒಂದು ವರ್ಷದ ವಹಿವಾಟಿನಲ್ಲಿ ₹920ಕ್ಕೆ ತಲುಪುವ ಮೂಲಕ 52 ವಾರಗಳ ಗರಿಷ್ಠ ಮತ್ತು ₹530.20ಕ್ಕೆ ತಲುಪುವ ಮೂಲಕ 52 ವಾರಗಳ ಕನಿಷ್ಠ ಮಟ್ಟವನ್ನು ಕಂಡಿದೆ. ಆದರೆ ನೀಡಿಕೆ ಬೆಲೆ ₹949ನ್ನು ದಾಟಲು ಸಾಧ್ಯವಾಗಿಲ್ಲ. ಈ ಅವಧಿಯಲ್ಲಿ ಬಿಎಸ್ಇ ಸೆನ್ಸೆಕ್ಸ್ 7,242 ಅಂಶ (ಶೇ 13.33) ಮತ್ತು ನಿಫ್ಟಿ 1,922 ಅಂಶಗಳಷ್ಟು (ಶೇ 11.82) ಏರಿಕೆ ಕಂಡಿದೆ.

ವಹಿವಾಟು ಆರಂಭಿಸಿದ ದಿನ ₹ 5.54 ಲಕ್ಷ ಕೋಟಿ ಮಾರುಕಟ್ಟೆ ಮೌಲ್ಯದೊಂದಿಗೆ ದೇಶದ ಅತ್ಯಂತ ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ 5ನೇ ಸ್ಥಾನ ಪಡೆದಿತ್ತು. ಸದ್ಯ ಕಂಪನಿಯು 13ನೇ ಸ್ಥಾನದಲ್ಲಿ ವಹಿವಾಟು ನಡೆಸುತ್ತಿದೆ.

ಕಾಂಗ್ರೆಸ್ ಆರೋಪ; ಬಿಜೆಪಿ ನಕಾರ

ಎಲ್ಐಸಿಯ ಮಾರುಕಟ್ಟೆ ಮೌಲ್ಯ ಕುಸಿತ ಕಂಡಿರುವುದಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಿಡಿಕಾರಿದೆ. ಅದಾನಿ ಕಂಪನಿಗಳಲ್ಲಿ ಹೂಡಿಕೆ ಮಾಡಿರುವುದರಿಂದಲೇ ಎಲ್ಐಸಿಯ ಮಾರುಕಟ್ಟೆ ಮೌಲ್ಯ ಕುಸಿಯುವಂತಾಗಿದೆ ಎಂದು ಆರೋಪ ಮಾಡಿದೆ. ಆದರೆ ಬಿಜೆಪಿ ಈ ಆರೋಪವನ್ನು ತಳ್ಳಿಹಾಕಿದೆ. ಎಲ್ಐಸಿಯ ಮಾರುಕಟ್ಟೆ ಬಂಡವಾಳ ಮೌಲ್ಯ ಕುಸಿತ ಕಾಣಲು ಏಕೈಕ ಕಾರಣ ‘ಮೋದಾನಿ’ (ಮೋದಿ ಮತ್ತು ಅದಾನಿ). ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪ ಮಾಡಿದ್ದಾರೆ.

ಅದಾನಿ ಸಮೂಹದ ಕಂಪನಿಗಳಲ್ಲಿ ಎಲ್ಐಸಿಯ ಹೂಡಿಕೆಯು ಶೇ 1ಕ್ಕಿಂತಲೂ ಕಡಿಮೆ ಇದೆ. ಅರ್ಧ ಮಾಹಿತಿ ಕೊಡುವ ಮೂಲಕ ಜನರ ದಿಕ್ಕು ತಪ್ಪಿಸಲಾಗುತ್ತಿದೆ ಎಂದು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವಿಯಾ ಹೇಳಿದ್ದಾರೆ.

ಕುಸಿದ ಮಾರುಕಟ್ಟೆ ಮೌಲ್ಯ

₹5.54 ಲಕ್ಷ ಕೋಟಿ — ವಹಿವಾಟು ಆರಂಭಿಸಿದ ದಿನ ಕಂಪನಿಯ ಮಾರುಕಟ್ಟೆ ಮೌಲ್ಯ

₹3.60 ಲಕ್ಷ ಕೋಟಿ — ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಮಾರುಕಟ್ಟೆ ಮೌಲ್ಯ

ನೋಟರಿ ನೇಮಕದಲ್ಲಿ ಲಂಚ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಟರಿ ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆಸಿರುವ ಆರೋಪದ ಮೇಲೆ ಕೇಂದ್ರ ಕಾನೂನು ಸಚಿವಾಲಯದ ಕಾನೂನು ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಸಲಹೆಗಾರ ಟಿ.ಕೆ. ಮಲಿಕ್ ಮತ್ತು ಇತರರ ವಿರುದ್ಧ ಸಿಬಿಐ ಸೋಮವಾರ ಎಫ್ಐಆರ್ ದಾಖಲಿಸಿದೆ.

‘ನೋಟರಿ ಕೋಶದ ಹೆಚ್ಚುವರಿ ಕಾನೂನು ಸಲಹೆಗಾರರಾಗಿದ್ದ ಮಲಿಕ್ ಅವರನ್ನು ಬೆಂಗಳೂರು ಕೋಶದ ಪ್ರಭಾರ ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ನೋಟರಿ ನೇಮಕಾತಿಗೆ ಅರ್ಜಿ ಸಲ್ಲಿಸಿರುವ ವಕೀಲರಿಂದ ಹಣ ಪಡೆಯುತ್ತಿದ್ದ ಆರೋಪ ಇದೆ’ ಎಂದು ಸಿಬಿಐನ ದೆಹಲಿ ಕೇಂದ್ರ ಕಚೇರಿಯ ಭ್ರಷ್ಟಾಚಾರ ನಿಗ್ರಹ ದಳ ದಾಲಿಸಿರುವ ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಬೆಂಗಳೂರಿನ ವಾಣಿ ಜಿ.ಕೆ. ಎಂಬ ವಕೀಲೆಯ ಜತೆ ಮಲಿಕ್ ನಿರಂತರ ಸಂಪರ್ಕದಲ್ಲಿದ್ದರು. ಐವರು ವಕೀಲರನ್ನು ನೋಟರಿಯನ್ನಾಗಿ ನೇಮಿಸಲು ತಲಾ ₹50,000ದಂತೆ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ವಾಣಿ ಕೂಡ ಲಂಚ ನೀಡಲು ಒಪ್ಪಿಕೊಂಡಿದ್ದರು. ಮೇ 8ರಂದು ಮಲಿಕ್ ಅವರನ್ನು ಭೇಟಿ ಮಾಡಿದ್ದರು’ ಎಂಬ ಮಾಹಿತಿ ಎಫ್ಐಆರ್‌ನಲ್ಲಿದೆ.

324 ಕಡೆ ಎನ್ಐಎ ತಪಾಸಣೆ

ನವದೆಹಲಿ (ಪಿಟಿಐ): ಮಾದಕ ವಸ್ತುಗಳ ಕಳ್ಳಸಾಗಣೆ ಜಾಲ ಹಾಗೂ ಉಗ್ರರು-ಗ್ಯಾಂಗ್‌ಸ್ಟರ್‌ಗಳ ಜತೆಗೆ ನಂಟು ಹೊಂದಿದ ಪ್ರಕರಣಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್ಐಎ) ಅಧಿಕಾರಿಗಳು 9 ರಾಜ್ಯಗಳ 324ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

‘ಆಪರೇಷನ್ ಧ್ವಸ್ತ’ ಅಡಿ ದೆಹಲಿ, ಹರಿಯಾಣ, ಪಂಜಾಬ್, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್ ಹಾಗೂ ಚಂಡೀಗಢದಲ್ಲಿ ಶೋಧ ನಡೆಸಲಾಗಿದೆ. ಪಿಸ್ತೂಲ್‌ಗಳು, 60 ಮೊಬೈಲ್‌ಗಳು, ಐದು ಡಿವಿಆರ್‌ಗಳು, 20 ಸಿಮ್ ಕಾರ್ಡ್, 75 ದಾಖಲೆಪತ್ರಗಳು ಹಾಗೂ ₹ 39 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಕೆಲ ಶಂಕಿತರನ್ನು ವಶಕ್ಕೆಪಡೆಯಲಾಗಿದೆ.

‘ಉಗ್ರ ಅರ್ಷ್ ದಲ್ಲಾ ಹಾಗೂ ಲಾರೆನ್ಸ್ ಬಿಷ್ಣೋಯಿ, ಛೆನ್ನು ಪೆಹಲ್ವಾನ್ ಮತ್ತಿತರ ಪಾತಕಿಗಳ ನಡುವಿನ ನಂಟನ್ನು ನಾಶಪಡಿಸುವುದೇ ಈ ಕಾರ್ಯಾಚರಣೆ ಉದ್ದೇಶವಾಗಿತ್ತು ಎಂದು ಎನ್ಐಎ ತಿಳಿಸಿದೆ.

ಕಲಬುರಗಿಯಲ್ಲಿ ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳಲು ವಿದ್ಯಾರ್ಥಿನಿಯರು ತಲೆಯ ಮೇಲೆ ದುಪಟ್ಟಾ ಹಾಕಿಕೊಂಡು ಪ್ರಯಾಸಪಟ್ಟಿದ್ದು ಹೀಗೆ – ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಯಾದಗಿರಿ: 42.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು

ಬಿರು ಬಿಸಿಲಿಗೆ ಜನ ಹೈರಾಣ

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಗರಿಷ್ಠ ತಾಪಮಾನ 42 ಡಿಗ್ರಿ ಸೆಲ್ಸಿಯಸ್ ದಾಟಿದ್ದು, ಬಿರು ಬಿಸಿಲಿಗೆ ಜನ ಹೈರಾಣಾಗಿದ್ದಾರೆ.

ಕರ್ನಾಟಕ ರಾಜ್ಯ ವಿಪತ್ತು ಮೇಲ್ವಿಚಾರಣಾ ಕೇಂದ್ರದ (ಕೆಸ್ಎನ್‌ಡಿಎಂಸಿ) ಪ್ರಕಾರ, ಕಳೆದ 24 ಗಂಟೆಗಳ ಅವಧಿಯಲ್ಲಿ ಯಾದಗಿರಿಯಲ್ಲಿ ಗರಿಷ್ಠ ಉಷ್ಣಾಂಶ 42.8 ಡಿಗ್ರಿ ಸೆ. ದಾಖಲಾಗಿದೆ.

ಕಲ್ಯಾಣ ಕರ್ನಾಟಕ ವ್ಯಾಪ್ತಿಯ ವಿಜಯನಗರ ಮತ್ತು ಬಳ್ಳಾರಿ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಆರ್ದ್ರತೆ (ಗಾಳಿಯಲ್ಲಿರುವ ಆವಿ) ಪ್ರಮಾಣ ಶೇ 90ಕ್ಕಿಂತ ಕೆಳಗಿದೆ. ಕಲಬುರಗಿಯಲ್ಲಿ ಶೇ 68.5ರಷ್ಟು, ಕೊಪ್ಪಳದಲ್ಲಿ ಶೇ 88.8, ರಾಯಚೂರು 76.4, ಯಾದಗಿರಿ ಶೇ 66.9 ಮತ್ತು ಬೀದರ್‌ನಲ್ಲಿ ಶೇ 66.7ರಷ್ಟು ಆರ್ದ್ರತೆ ಇದೆ.

‘ಮುಂದಿನ ಮೂರು ದಿನ ವಾತಾವರಣದಲ್ಲಿ ಗರಿಷ್ಠ ಉಷ್ಣಾಂಶ ಇರಲಿದೆ. ಹೀಗಾಗಿ, ರೈತರು ಮತ್ತು ಸಾರ್ವಜನಿಕರು ಬೆಳಿಗ್ಗೆ 11.30ರಿಂದ ಮಧ್ಯಾಹ್ನ 3.30ರ ವೇಳೆ ಬಿಸಿಲಿನಲ್ಲಿ ಓಡಾಡುವುದು ಕಡಿಮೆ ಮಾಡಬೇಕು’ ಎಂಬುದು ಕೆಸ್ಎನ್‌ಡಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಕೆಂಡದಂತೆ ಉರಿಯುವ ಸೂರ್ಯನ ಕಿರಣಗಳ ಕಾವು ಸಹಿಸಲು ಆಗುವುದಿಲ್ಲ. ಬೆಳಿಗ್ಗೆ 9ರ ಎಳೆ ಬಿಸಿಲಿಗೆ ಮೈ ಸುಟ್ಟಂತೆ ಅನುಭವ ಆಗುತ್ತದೆ. ಮಧ್ಯಾಹ್ನ 12ರ ಬಳಿಕ ರಸ್ತೆಗಿಳಿದರೆ ಬೆಂಕಿಯ ಕೆನ್ನಾಲಿಗೆಯ ಪಕ್ಕ ಹಾದು ಹೋದಂತೆ ಆಗುತ್ತದೆ. ಮಧ್ಯಾಹ್ನದ ಸುಡು ಬಿಸಿಲಿಗೆ ಮನೆ, ಕಟ್ಟಡಗಳು ಕಾದಿರುತ್ತವೆ. ರಾತ್ರಿ ವೇಳೆ ಸೆಖೆಯಿಂದ ನಿದ್ದೆ ಮಾಡಲು ಆಗುವುದಿಲ್ಲ’ ಎಂದು ನಿವಾಸಿ ಭೀಮಾಶಂಕರ ಅವರು ತಿಳಿಸಿದರು.



ಪಾವೂರು-ಉಳಿಯ: ಮಳೆ ಶುರುವಾಗುತ್ತಲೇ ದ್ವೀಪವಾಸಿಗಳಿಗೆ ಕಳವಳ, ದೋಣಿಯೇ ಗತಿ

ಮಳೆಗಾಲದಲ್ಲಿ ಉಳಿಯದು ಈ ಸೇತುವೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನೇತ್ರಾವತಿ ನದಿಯಲ್ಲಿರುವ ಪಾವೂರು-ಉಳಿಯ ದ್ವೀಪವಾಸಿಗಳಿಗೆ ಮಳೆಗಾಲ ಸಮೀಪಿಸುತ್ತಲೇ ಕಳವಳ ಶುರುವಾಗುತ್ತದೆ. ನದಿಯಲ್ಲಿ ನಿರ್ಮಿಸಿರುವ ತಾತ್ಕಾಲಿಕ ಪಾದಚಾರಿ ಸೇತುವೆಯನ್ನು ನೇತ್ರಾವತಿಯಲ್ಲಿ ನೀರಿನ ಮಟ್ಟ ಹೆಚ್ಚುವ ಮುನ್ನವೇ ಬಿಚ್ಚಿಡಬೇಕು. ಇಲ್ಲದಿದ್ದರೆ, ಪ್ರವಾಹದಲ್ಲಿ ಅದು ಕೊಚ್ಚಿ ಹೋಗುತ್ತದೆ.

ಮಳೆಗಾಲದಲ್ಲಿ ನದಿ ದಾಟಲು ದೋಣಿಯೇ ಗತಿ. ಹಾಗಾಗಿ ಮಳೆಗಾಲ ಇವರಿಗೆ ದುಃಸ್ವಪ್ನವಿದ್ದಂತೆ.

ನಗರದಿಂದ ಕೇವಲ 8 ಕಿ.ಮೀ. ದೂರದಲ್ಲಿದೆ ಪಾವೂರು-ಉಳಿಯ ದ್ವೀಪ. ಇಲ್ಲಿ 52 ಕುಟುಂಬಗಳು ನೆಲೆಸಿವೆ. ಈ ದ್ವೀಪ ನದಿಯ ದಕ್ಷಿಣ ದಿಕ್ಕಿನಲ್ಲಿರುವ ಹರೇಕಳ ಗ್ರಾಮ ಪಂಚಾಯಿತಿಗೆ ಸೇರಿದ್ದರೂ, ಇಲ್ಲಿನ ನಿವಾಸಿಗಳು ದೈನಂದಿನ ವ್ಯವಹಾರಗಳಿಗೆ ಪಶ್ಚಿಮ ದಿಕ್ಕಿನಲ್ಲಿರುವ ಮಂಗಳೂರು ನಗರವನ್ನೇ ನೆಚ್ಚಿಕೊಂಡಿದ್ದಾರೆ.

ಮಂಗಳೂರಿನ ಪಾವೂರು–ಉಳಿಯ ದ್ವೀಪವಾಸಿಗಳು ನಿರ್ಮಿಸಿಕೊಂಡ ತಾತ್ಕಾಲಿಕ ಸೇತುವೆ —ಚಿತ್ರ: ಫಕ್ರುದ್ದೀನ್ ಎಚ್.

ಮಂಗಳೂರಿಗೆ ಹೋಗಲು ಇಲ್ಲಿನ ನಿವಾಸಿಗಳು ದೋಣಿಯನ್ನು ಬಳಸುತ್ತಿದ್ದರು. ದಶಕಗಳ ಹಿಂದೆ ಇಲ್ಲಿನ ನಿವಾಸಿಗಳು ನೇತ್ರಾವತಿಯಲ್ಲಿ ನೀರಿನ ಹರಿವು ಕಡಿಮೆಯಾದ ಬಳಿಕ, ಮರದ ಕಂಬಗಳನ್ನು ಬಳಸಿ ಸೇತುವೆ ನಿರ್ಮಿಸುತ್ತಿದ್ದರು. ಮರಳುಗಾರಿಕೆ ಹೆಚ್ಚಾದಂತೆ ನದಿಪಾತ್ರವೂ ಅಗಲವಾಯಿತು. 450 ಅಡಿ ಉದ್ದದ ಸೇತುವೆ ಬದಲು 900 ಅಡಿ ಉದ್ದದ ಸೇತುವೆ ನಿರ್ಮಿಸಬೇಕಾದ ಸ್ಥಿತಿ ನಿರ್ಮಾಣವಾಯಿತು. ವೆಚ್ಚ ಹೆಚ್ಚಾಗುತ್ತದೆ ಎಂಬ ಕಾರಣಕ್ಕೆ ಸೇತುವೆ ನಿರ್ಮಿಸುವುದನ್ನೇ ಬಿಟ್ಟುಬಿಟ್ಟಿದ್ದರು.

‘ಈ ದ್ವೀಪದ ಇನ್ಫೆಂಟ್ ಜೀಸಸ್ ಚರ್ಚ್‌ನ ಪಾದ್ರಿಯಾಗಿದ್ದ ಫಾ.ಜೆರಾಲ್ಡ್ ಲೋಬೊ ಅವರು, ಊರಿನವರ ಕಷ್ಟ ಕಂಡು ದಾನಿಗಳ ನೆರವಿನಿಂದ ತಾತ್ಕಾಲಿಕ ಸೇತುವೆ ನಿರ್ಮಿಸಲು ಕಬ್ಬಿಣದ ಪೈಪ್‌ಗಳು ಹಾಗೂ ಹಲಗೆಗಳ ವ್ಯವಸ್ಥೆ ಮಾಡಿದ್ದರು. ಸುಮಾರು ₹18 ಲಕ್ಷದಲ್ಲಿ ಐದು ವರ್ಷಗಳ ಹಿಂದೆ ತಾತ್ಕಾಲಿಕ ಸೇತುವೆ ನಿರ್ಮಿಸಿದೆವು’ ಎಂದು ಸ್ಥಳೀಯರಾದ ಗಿಲ್ಬರ್ಟ್ ಡಿಸೋಜ ತಿಳಿಸಿದರು.

ಇನ್ನು ತಾತ್ಕಾಲಿಕ ಸೇತುವೆ ಇರದು?

‘ಪಾವೂರು–ಉಳಿಯ ದ್ವೀಪದ ಪಶ್ಚಿಮ ದಿಕ್ಕಿನಲ್ಲಿ ನೇತ್ರಾವತಿ ನದಿಗೆ ಹೊಸ ಅಣೆಕಟ್ಟು ನಿರ್ಮಿಸಲಾಗಿದೆ. ಅದರ ಕಾಮಗಾರಿ ಅಂತಿಮ ಹಂತದಲ್ಲಿದೆ. ಈ ಅಣೆಕಟ್ಟೆಯಲ್ಲಿ ನೀರು ಸಂಗ್ರಹಿಸಲು ಶುರು ಮಾಡಿದರೆ ನಾವು ದ್ವೀಪಕ್ಕೆ ಸೇತುವೆ ನಿರ್ಮಿಸುವ ಜಾಗದಲ್ಲಿ ನೀರಿನ ಮಟ್ಟ ಈಗಿನದಕ್ಕಿಂತ 3 ಮೀಟರ್‌ಗಳಷ್ಟು ಹೆಚ್ಚಾಗಲಿದೆ. ಆಗ ಇಲ್ಲಿ ತಾತ್ಕಾಲಿಕ ಸೇತುವೆ ನಿರ್ಮಿಸಲು ಸಾಧ್ಯವಾಗದು. ನಮ್ಮ ದ್ವೀಪಕ್ಕೆ ಪ್ರತ್ಯೇಕ ಕಾಂಕ್ರೀಟ್ ಸೇತುವೆ ನಿರ್ಮಿಸಿ ಕೊಡದಿದ್ದರೆ ವರ್ಷಪೂರ್ತಿ ನದಿ ದಾಟಲು ದೋಣಿಯೇ ಗತಿ’ ಎಂದು ಡಿಸೋಜ ತಿಳಿಸಿದರು.

ಮಳೆ ಬಂದರೆ ಪ್ರವಾಹ ಉಂಟಾಗುವ ಭೀತಿ • ಕೆಂಪೇಗೌಡ ಬಡಾವಣೆ ನಿವಾಸಿಗಳ ಆತಂಕ

ದರ ವ್ಯತ್ಯಾಸ: ಕಾಮಗಾರಿ ಸ್ಥಗಿತಗೊಳಿಸಿದ ಕೆಎಂಸಿ

• ಆದಿತ್ಯ ಕೆ.ಎ.

ಬೆಂಗಳೂರು: ರಾಜಧಾನಿಯಲ್ಲಿ ಪ್ರತಿಷ್ಠಿತ ಬಡಾವಣೆಯಾಗಿ ರೂಪುಗೊಳ್ಳಬೇಕಿದ್ದ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ದರ ವ್ಯತ್ಯಾಸದ ನೆಪವೊಡ್ಡಿ ಗುತ್ತಿಗೆ ಪಡೆದಿದ್ದ ಹೈದರಾಬಾದ್‌ನ ಕೆಎಂಸಿ ಕಂಪನಿ ಬಡಾವಣೆ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸಿದೆ.

ಮೊದಲೇ ಕಳಪೆ ಕಾಮಗಾರಿ, ಅರೆಬರೆ ಕಾಮಗಾರಿ, ದೂಳು, ಮಣ್ಣಿನ ರಸ್ತೆಯ ಅಧ್ವಾನದಿಂದ ತೊಂದರೆಗೆ ಒಳಗಾಗಿದ್ದ ನಿವೇಶನ ಖರೀದಿದಾರರಿಗೆ ಮತ್ತೊಂದು ಆತಂಕ ಎದುರಾಗಿದೆ. ರಾಜ್ಯಕ್ಕೆ ಮುಂಗಾರು ಪ್ರವೇಶಿಸಲು ಕೆಲವೇ ದಿನಗಳು ಬಾಕಿಯಿದ್ದು, ಹಲವು ಬ್ಲಾಕ್ ನಿವಾಸಿಗಳು ಆತಂಕದಲ್ಲಿದ್ದಾರೆ. ಮಳೆ ಆರಂಭವಾದರೆ ಬಡಾವಣೆಯ ಹಲವು ಬ್ಲಾಕ್‌ಗಳಲ್ಲಿ ಪ್ರವಾಹ ಎದುರಾಗುವ ಸಾಧ್ಯತೆಯಿದೆ.

ಕೋವಿಡ್ ನಂತರ ಬಡಾವಣೆಯಲ್ಲಿ ಬಾಕಿಯಿದ್ದ ಎಲ್ಲ ಕಾಮಗಾರಿಗಳೂ ಸ್ಥಗಿತಗೊಂಡಿವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಈ ಬಡಾವಣೆ ನಿರ್ಮಿಸಲು ಆರಂಭಿಸಿ ಏಳು ವರ್ಷ ಕಳೆದರೂ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಈ ನಡುವೆ ಬಡಾವಣೆಯ ನಿರ್ಮಾಣ ಕಾಮಗಾರಿ ಗುತ್ತಿಗೆ ಪಡೆದಿದ್ದ ಎರಡು ಕಂಪನಿಗಳಿಗೆ ಹೆಚ್ಚುವರಿ ಹಣ ಬಿಡುಗಡೆ ಮಾಡಿರುವುದೂ ಬಿಡಿಎ ಆಂತರಿಕ ಲೆಕ್ಕಪರಿಶೋಧನೆಯಲ್ಲಿ ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

2010ರಲ್ಲಿ 4,040 ಎಕರೆ ಜಮೀನು ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿತ್ತು. 2015ರಲ್ಲಿ 2,685 ಎಕರೆ ಭೂಸ್ವಾಧೀನ ಪ್ರಕ್ರಿಯೆಗೆ ಬಿಡಿಎ ಚಾಲನೆ ನೀಡಿತ್ತು. 2016ರಲ್ಲಿ 'ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ' (ಆರ್‌ಸಿಸಿ) ಕಾಮಗಾರಿ ವಹಿಸಿಕೊಂಡು ₹ 1,300 ಕೋಟಿ ವೆಚ್ಚದಲ್ಲಿ ಮೂರು ವರ್ಷಗಳ ಕಾಮಗಾರಿ ನಡೆಸಿತ್ತು.

'ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ'ಯು ನಿವೇಶನ ಪರಿವರ್ತನೆ, ರಸ್ತೆ, ಯುಟಿಲಿಟಿ ಚಾನಲ್ ನಿರ್ಮಾಣ, ವಿದ್ಯುತ್ ಸಂಪರ್ಕ, ರಾಜಕಾಲುವೆ ನಿರ್ಮಾಣ, ಕಾಲುವೆ ಮೇಲೆ ಸೇತುವೆ ಕಾಮಗಾರಿಗಳನ್ನು ನಡೆಸಿತ್ತು. ಮಧ್ಯದಲ್ಲಿ ಈ ಕಂಪನಿ ಮೇಲೆ ಆರೋಪ ಕೇಳಿಬಂದಿತ್ತು. ಆಗ ಆ ಕಂಪನಿಯನ್ನು ವಜಾಗೊಳಿಸಲಾಗಿತ್ತು. ಅದಾದ ಮೇಲೆ ಕೆಎಂಸಿಗೆ ಬಡಾವಣೆ ಅಭಿವೃದ್ಧಿಯ ಗುತ್ತಿಗೆ ಕೊಡಲಾಗಿತ್ತು. ಕೆಲವು ದಿನಗಳಷ್ಟೇ ಕಾಮಗಾರಿ ನಡೆಸಿದ್ದ ಕೆಎಂಸಿಯವರು, 'ಸಾಮಗ್ರಿಗಳ ಬೆಲೆ ದುಬಾರಿಯಾಗಿದ್ದು ಹಳೇ ದರಕ್ಕೆ ಕಾಮಗಾರಿ ಮುಂದುವರಿಸಲು ಸಾಧ್ಯವಿಲ್ಲ' ಎಂದು ಬಿಡಿಎಗೆ ತಿಳಿಸಿ ಕೆಲಸ ಸ್ಥಗಿತಗೊಳಿಸಿದೆ. ಇದರಿಂದ ಸಣ್ಣ ಮಳೆಗೂ ಕೆಸರುಮಯ ವಾತಾವರಣ ನಿರ್ಮಾಣವಾಗುತ್ತಿದೆ. ನಿವೇಶನದಾರರಿಗೂ ನಿವೇಶನಗಳು ದೊರೆಯುತ್ತಿಲ್ಲ ಎಂದು ಹಲವರು ಅಳಲು ತೋಡಿಕೊಳ್ಳುತ್ತಾರೆ.

'500 ಎಕರೆ ಪ್ರದೇಶದಲ್ಲಿ ಯಾವುದೇ ಕೆಲಸಗಳು ನಡೆಯುತ್ತಿಲ್ಲ. ಬಡಾವಣೆ ಹಲವು ಬ್ಲಾಕ್‌ಗಳಲ್ಲಿ ಮೋರಿ ನಿರ್ಮಾಣ, ಯುಟಿಲಿಟಿ ಜಾಲ, ಯುಟಿಲಿಟಿ ಚೇಂಬರ್, ಪೈಪ್‌ಗಳನ್ನು ಅಳವಡಿಸುವ ಕಾಮಗಾರಿ ಬಾಕಿ ಉಳಿದಿದೆ. ಬಡಾವಣೆಯಲ್ಲಿ 5 ಕಿ.ಮೀ. ರಾಜಕಾಲುವೆ ನಿರ್ಮಿಸಬೇಕಿದೆ. ಅಲ್ಲದೇ 60, 80 ಹಾಗೂ 100 ಅಡಿ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿ ನಡೆದಿಲ್ಲ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಕ್ತ ವೇದಿಕೆ ವಕ್ತಾರ ಸೂರ್ಯಕಿರಣ್ ದೂರಿದರು.

'ಕಾಮಗಾರಿ ಸ್ಥಗಿತಗೊಂಡಿರುವ ಕಾರಣಕ್ಕೆ ಎಲ್ ಅಂಡ್ ಟಿ ಹಾಗೂ ಎಸ್‌ಪಿಎಂಎಲ್ ಕಂಪನಿಗೆ ಯುಜಿಡಿ, ನೀರು ಸರಬರಾಜು, ವಿದ್ಯುದ್ದೀಕರಣಕಾಮಗಾರಿ ನಡೆಸಲು ಅಡಚಣೆ ಉಂಟಾಗಿದೆ. ಕುಡಿಯುವ ನೀರಿನ ಸಂಪರ್ಕವನ್ನು ಒಂದು ಬ್ಲಾಕ್‌ನಿಂದ ಮತ್ತೊಂದು ಕಡೆಗೆ ಕಲ್ಪಿಸಲೂ ಸಾಧ್ಯವಾಗುತ್ತಿಲ್ಲ. ರಾಜಕಾಲುವೆ ಕಾಮಗಾರಿ ಸ್ಥಗಿತಗೊಂಡಿದ್ದು ಮಳೆಗಾಲದಲ್ಲಿ ಬಡಾವಣೆಯ ಅನೇಕ ಬ್ಲಾಕ್‌ಗಳು ಪ್ರವಾಹ ಎದುರಾಗುತ್ತಿದೆ' ಎಂದು ನಿವೇಶನದಾರರು ಹೇಳಿದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಡಿಎ ಎಂಜಿನಿಯರ್ ಸದಸ್ಯ ಶಾಂತರಾಜನ್ ಅವರು ಲಭ್ಯವಾಗಲಿಲ್ಲ.

ಕೆಂಪೇಗೌಡ ಬಡಾವಣೆಯಲ್ಲಿ ಅರ್ಧಕ್ಕೆ ನಿಂತಿರುವ ಕಾಮಗಾರಿ.

ಕಾಮಗಾರಿ ಸ್ಥಗಿತಗೊಂಡಿರುವ ಕಾರಣ ಬಡಾವಣೆಗೆ ನುಗ್ಗಿತ್ತಿರುವ ನೀರು.

> **ಕೆಲವು ಭಾಗದಲ್ಲಿ ಬಡಾವಣೆ ನಿರ್ಮಾಣವಾಗಿಲ್ಲ. ಶೇ 40ರಷ್ಟು ಕಾಮಗಾರಿ ಬಾಕಿಯಿರುವ ಕಾರಣಕ್ಕೆ ನಿವೇಶನ ಖರೀದಿದಾರರು ಚಾತಕ ಪಕ್ಷಿಯಂತೆ ಕಾದಿದ್ದಾರೆ.**
> **ಸೂರ್ಯಕಿರಣ್,** ವಕ್ತಾರ, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ

ಸುದ್ದಿ 2 ನಿಮಿಷ

ಶೀಘ್ರದಲ್ಲೇ ಸಿಬಿಐ ನಿರ್ದೇಶಕನಾಗಿ ಅಧಿಕಾರ ಸ್ವೀಕಾರ: ಪ್ರವೀಣ್ ಸೂದ್

ಬೆಂಗಳೂರು: 'ಸದ್ಯದಲ್ಲೇ ಮತ್ತೊಬ್ಬರಿಗೆ ಅಧಿಕಾರ ಹಸ್ತಾಂತರಿಸಿ, ಕೇಂದ್ರೀಯ ತನಿಖಾ ದಳದ (ಸಿಬಿಐ) ನೂತನ ನಿರ್ದೇಶಕನಾಗಿ ಅಧಿಕಾರ ಸ್ವೀಕರಿಸುತ್ತೇನೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಪ್ರವೀಣ್ ಸೂದ್ ಟ್ವೀಟ್ ಮಾಡಿದ್ದಾರೆ.

ಸಿಬಿಐ ನೂತನ ನಿರ್ದೇಶಕರಾಗಿ ನೇಮಕಗೊಂಡಿರುವ ಅವರು ಮೂರು ಟ್ವೀಟ್ ಮಾಡಿದ್ದಾರೆ.

'ಕರ್ನಾಟಕ ಡಿಜಿ, ಐಜಿಪಿ ಅಧಿಕೃತ ಟ್ವಿಟರ್ ಖಾತೆ ನಿರ್ವಹಣೆಯಿಂದ ನಾನು ಹೊರ ಬರುತ್ತಿದ್ದೇನೆ. ಇದು ಅಧಿಕೃತ ಟ್ವಿಟರ್ ಖಾತೆಯಲ್ಲಿ ಕೊನೆಯ ಟ್ವೀಟ್ ಆಗಿದೆ' ಎಂದು ಬರೆದುಕೊಂಡಿದ್ದಾರೆ.

'2020ರಲ್ಲಿ ಈ ಖಾತೆಯ ನಿರ್ವಹಣೆ ಪ್ರಾರಂಭಿಸಿದ್ದೆ. ಹಲವು ವಿಚಾರಗಳನ್ನು ಹಂಚಿಕೊಂಡಿದ್ದೇನೆ. ಈ ಖಾತೆಯನ್ನು 1.6 ಲಕ್ಷ ಮಂದಿ ಅನುಸರಿಸುತ್ತಿದ್ದರು. ಇದು ಖುಷಿ ತಂದಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ಮುಂದಿನ ದಿನಗಳಲ್ಲಿ ನನ್ನ ವೈಯಕ್ತಿಕ ಖಾತೆಯಲ್ಲಿ ವಿಚಾರ ಹಂಚಿಕೊಳ್ಳುತ್ತೇನೆ. 2025ರ ವೇಳೆಗೆ ಕರ್ನಾಟಕ ರಾಜ್ಯಕ್ಕೆ ವಾಪಸ್ ಬರುತ್ತೇನೆ' ಎಂದು ಹೇಳಿದ್ದಾರೆ.

ನಿಂಗಮ್ಮ ಹುಚ್ಚೇಗೌಡ ದತ್ತಿ ಪ್ರಶಸ್ತಿ ಪ್ರಕಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ ನಾಲ್ಕು ವರ್ಷಗಳ 'ನಿಂಗಮ್ಮ ಹುಚ್ಚೇಗೌಡ ಕೋಡಿಹೊಸಹಳ್ಳಿ ದತ್ತಿ' ಪ್ರಶಸ್ತಿ ಪ್ರಕಟವಾಗಿದೆ.

'ನಿಂಗಮ್ಮ ಹುಚ್ಚೇಗೌಡ ಕೋಡಿಹೊಸಳ್ಳಿ ದತ್ತಿ ಪ್ರಶಸ್ತಿಯನ್ನು ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿದ್ದಾರೆ. ಓದು ಬರಹ ಬಾರದ ಗ್ರಾಮೀಣ ಭಾಗದ ಜನಪದ ಕಲಾವಿದೆಯರನ್ನು ಗುರುತಿಸಿ ಅವರ ಪ್ರತಿಭೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

2019ನೇ ಸಾಲಿಗೆ ಸೋಬಾನೆ ಪದಗಳನ್ನು ಹಾಡುವ ತುಮಕೂರು ಜಿಲ್ಲೆಯ ಕಲಾವಿದೆ ದೊಡ್ಡನಾಗಮ್ಮ, 2020ನೇ ಸಾಲಿಗೆ ಸೋಬಾನೆ ಪದಗಳನ್ನು ಹಾಡುವ ಚಾಮರಾಜನಗರ ಜಿಲ್ಲೆಯ ಕಲಾವಿದೆ ಚಿನ್ನಮ್ಮ, 2021ನೇ ಸಾಲಿಗೆ ಗರತಿಯ ಹಾಡುಗಳನ್ನು ಹಾಡುವ ಹಾವೇರಿ ಜಿಲ್ಲೆಯ ಕಲಾವಿದೆ ಸಾವಕ್ಕ ಯಲ್ಲಪ್ಪ ಓಲೇಕಾರ್ ಮತ್ತು 2022ನೇ ಸಾಲಿಗೆ ಸೋಬಾನೆ ಪದಗಳನ್ನು ಹಾಡುವ ಬಾಗಲಕೋಟೆ ಜಿಲ್ಲೆಯ ಕಲಾವಿದೆ ಬೋರವ್ವ ಭಾಗನ್ನವರ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆಯರಿಗೆ ಪ್ರತ್ಯೇಕ ಬೋಗಿ

ನವದೆಹಲಿ (ಪಿಟಿಐ): 'ದೇಶದ ಮೊದಲ ಪ್ರಾದೇಶಿಕ ರೈಲು, ರ್‍ಯಾಪಿಡ್–ಎಕ್ಸ್‌ನಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕ ಬೋಗಿಗಳನ್ನು ಮೀಸಲಿಡಲಾಗುತ್ತದೆ. ಮಹಿಳೆಯರ ಸುರಕ್ಷತೆ ಹಾಗೂ ಆರಾಮದಾಯಕ ಪ್ರಯಾಣವನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಬುಧವಾರ ಬಿಡುಗಡೆ ಮಾಡಲಾಗಿರುವ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಮಹಿಳೆಯರಿಗಾಗಿ ಮೀಸಲಿರುವ ಬೋಗಿಗಳು 72 ಆಸನ ಸಾಮರ್ಥ್ಯ ಹೊಂದಿರಲಿವೆ. ಇದರ ಜೊತೆಗೆ ಇತರೆ ಬೋಗಿಗಳಲ್ಲೂ ಮಹಿಳೆಯರಿಗೆ ಹೆಚ್ಚುವರಿಯಾಗಿ 10 ಆಸನಗಳನ್ನು ಮೀಸಲಿಡಲಾಗುತ್ತದೆ. ಮಕ್ಕಳಿಗಾಗಿ ಪ್ರತಿ ನಿಲ್ದಾಣದಲ್ಲೂ ಡಯಾಪರ್ ಬದಲಿಸುವ ಕೇಂದ್ರಗಳನ್ನು ತೆರೆಯಲಾಗುತ್ತದೆ. ಈ ಕುರಿತು ಸೂಚನಾ ಫಲಕ ಇರಲಿದೆ' ಎನ್ನಲಾಗಿದೆ.

ಆಸ್ತಿ ತೆರಿಗೆ: ರಿಯಾಯಿತಿ ವಿಸ್ತರಣೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿಯನ್ನು ಜೂನ್ ಅಂತ್ಯದವರೆಗೆ ನೀಡಬೇಕು ಎಂದು ಬಿಬಿಎಂಪಿ ಮಾಜಿ ಆಡಳಿತ ಪಕ್ಷದ ನಾಯಕ ಎಂ. ಶಿವರಾಜು ಮನವಿ ಮಾಡಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಬುಧವಾರ ಮನವಿ ಸಲ್ಲಿಸಿ, ಈ ಹಿಂದಿನ ವರ್ಷಗಳಂತೆ ಮೇ ತಿಂಗಳಿನಲ್ಲಿ ರಿಯಾಯಿತಿ ಘೋಷಿಸಿರಲಿಲ್ಲ. ಹೀಗಾಗಿ, ಕೂಡಲೇ ರಿಯಾಯಿತಿಯನ್ನು ಘೋಷಿಸಬೇಕು ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತಿತ್ತು. ಆದರೆ, ಈ ಬಾರಿ ಏಪ್ರಿಲ್‌ನಲ್ಲಿ ಮಾತ್ರ ರಿಯಾಯಿತಿ ನೀಡಲಾಗಿದೆ. ವಿಧಾನಸಭಾ ಚುನಾವಣೆ ಪ್ರಕ್ರಿಯೆ ಕೆಲಸಗಳು ಚಾಲ್ತಿಯಲ್ಲಿದ್ದ ಕಾರಣ ಕಂದಾಯ ವಿಭಾಗದ ಎಲ್ಲಾ ಸಿಬ್ಬಂದಿ ಚುನಾವಣಾ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು, ಹಲವಾರು ತೆರಿಗೆದಾರರು ನಿಗದಿತ ಸಮಯದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂದರು.

ಪ್ರಸುತ್ತ ಚುನಾವಣೆ ಕೆಲಸ ಕಾರ್ಯಗಳು ಮುಕ್ತಾಯಗೊಂಡಿರುವುದರಿಂದ ಹಾಗೂ ಸಾರ್ವಜನಿಕರ ಆರ್ಥಿಕ ಹಿತದೃಷ್ಟಿಯಿಂದ ಪ್ರತಿ ವರ್ಷದಂತೆ ಆಸ್ತಿ ತೆರಿಗೆಯನ್ನು ಪಾವತಿಸುವ ತೆರಿಗೆದಾರರಿಗೆ ಶೇ 5ರಷ್ಟು ರಿಯಾಯಿತಿ ಅನ್ನು ಒಂದು ತಿಂಗಳು ವಿಸ್ತರಿಸಬೇಕೆಂದು ಶಿವರಾಜ್ ಮನವಿ ಸಲ್ಲಿಸಿದರು.

ಬಿಬಿಎಂಪಿ ಮಾಜಿ ವಿರೋಧ ಪಕ್ಷದ ನಾಯಕ ಅಬ್ದುಲ್ ವಾಜಿದ್, ಮಾಜಿ ಸದಸ್ಯ ಮೋಹನ್ ಕುಮಾರ್ ಇದ್ದರು.

'ಬಿಬಿಎಂಪಿ ಮುಖ್ಯ ಆಯುಕ್ತರು ರಿಯಾಯಿತಿ ನೀಡಲು ಸಮ್ಮತಿಸಿದ್ದು, ಕೂಡಲೇ ಆದೇಶವಾಗಲಿದೆ. ಮೇ 1ರಿಂದ ಈವರೆಗೆ ರಿಯಾಯಿತಿ ಇಲ್ಲದೆ ತೆರಿಗೆ ಪಾವತಿಸಿರುವವರಿಗೆ ಅದನ್ನು ಮುಂದಿನ ತೆರಿಗೆ ಮೊತ್ತದಲ್ಲಿ ಕಡಿತ ಮಾಡಲಾಗುತ್ತದೆ ಎಂಬ ಭರವಸೆ ನೀಡಿದ್ದಾರೆ' ಎಂದು ಶಿವರಾಜ್ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿಯನ್ನು ಜೂನ್ ಅಂತ್ಯದವರೆಗೆ ನೀಡಬೇಕು ಎಂದು ಬಿಬಿಎಂಪಿ ಮಾಜಿ ಆಡಳಿತ ಪಕ್ಷದ ನಾಯಕ ಎಂ. ಶಿವರಾಜು ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು. ಬಿಬಿಎಂಪಿ ಮಾಜಿ ವಿರೋಧ ಪಕ್ಷದ ನಾಯಕ ಅಬ್ದುಲ್ ವಾಜಿದ್ ಇದ್ದಾರೆ.

ಶೇ 79.6ರಷ್ಟು ಸಾಧನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ 2022–23ನೇ ಸಾಲಿನಲ್ಲಿ ₹4,189 ಕೋಟಿ ಆಸ್ತಿ ತೆರಿಗೆ ಸಂಗ್ರಹದ ಗುರಿ ಹೊಂದಲಾಗಿತ್ತು. ಇದರಲ್ಲಿ ಶೇ 79.6ರಷ್ಟು ದಾಖಲೆಯ ₹3,338.04 ಕೋಟಿ ಸಂಗ್ರಹವಾಗಿದೆ ಎಂದು ಬಿಬಿಎಂಪಿ ರೆವೆನ್ಯೂ ವಿಭಾಗದ ಅಧಿಕಾರಿಗಳು ತಿಳಿಸಿದರು.

2023–24ನೇ ಸಾಲಿನಲ್ಲಿ ಮೇ 16ರವರೆಗೆ ₹1,460.15 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ. ₹4,783 ಕೋಟಿ ಸಂಗ್ರಹದ ಗುರಿ ಹೊಂದಲಾಗಿದೆ.

ಕೇರಳ: ನಾಪತ್ತೆಯಾಗಿದ್ದ ಪಿಎಫ್‌ಐ ಸದಸ್ಯನ ಬಂಧನ

ನವದೆಹಲಿ (ಪಿಟಿಐ): '2022ರಲ್ಲಿ ನಡೆದ ಆರ್‌ಎಸ್‌ಎಸ್ ನಾಯಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಕಾಗಿದ್ದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ಸದಸ್ಯನೊಬ್ಬನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ' ಎಂದು ಎನ್‌ಐಎ ವಕ್ತಾರರೊಬ್ಬರು ಬುಧವಾರ ತಿಳಿಸಿದರು.

ಸಹೀರ್ ಕೆ.ವಿ. ಬಂಧಿತ ವ್ಯಕ್ತಿ. 2022ರ ಏಪ್ರಿಲ್ 16ರಂದು ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ಆರ್‌ಎಸ್‌ಎಸ್ ನಾಯಕನೊಬ್ಬನ ಹತ್ಯೆಯಾದ ಬಳಿಕ ಈತ ನಾಪತ್ತೆಯಾಗಿದ್ದ. 'ಸಹೀರ್ ಬಂಧನ ಪ್ರಕರಣದ ಪ್ರಮುಖ ತಿರುವು' ಎಂದು ತನಿಖಾ ಸಂಸ್ಥೆಯ ಫ್ಯುಜಿಟಿವ್ ಟ್ರ್ಯಾಕಿಂಗ್ ತಂಡ (ಎಫ್‌ಟಿಟಿ) ಪ್ರತಿಪಾದಿಸಿದೆ. ಸಹೀರ್, ಪಾಲಕ್ಕಾಡ್‌ನ ತನ್ನ ಸಂಬಂಧಿಕರ ಮನೆಯಲ್ಲಿ ಇರುವುದನ್ನು ಪತ್ತೆಹಚ್ಚಿದ ಎಫ್‌ಟಿಟಿ ಆತನನ್ನು ಬಂಧಿಸಿದೆ.

ಒಳಮೀಸಲಾತಿ ಶಿಫಾರಸು ತಿರಸ್ಕರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯನ್ನು ಪ್ರಧಾನಿ ನರೇಂದ್ರ ಮೋದಿ ತಿರಸ್ಕರಿಸಬೇಕು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ರವಿ ಎಚ್. ಮಾಕಳಿ, 'ಬಿಜೆಪಿ ಸರ್ಕಾರವು ಅಸಂವಿಧಾನಿಕವಾಗಿ ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಿ ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಪಿಗೆ ವಿರುದ್ಧವಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯನ್ನು ನಾಲ್ಕು ಗುಂಪುಗಳನ್ನಾಗಿ ಮಾಡುವ ಮೂಲಕ ಸಮುದಾಯಕ್ಕೆ ದ್ರೋಹ ಮಾಡಿದೆ' ಎಂದು ಆರೋಪಿಸಿದರು.

'ಈ ಒಳಮೀಸಲಾತಿ ವಿರೋಧಿಸಿ ಬಂಜಾರ, ಬೋವಿ, ಕೊರಚ, ಕೊರಮ, ಅಲೆಮಾರಿ ಜನಾಂಗಗಳು ರಾಜ್ಯದಾದ್ಯಂತ ಹೋರಾಟ ನಡೆಸಿವೆ. ಆದರೆ, ಹೋರಾಟಗಾರರ ಮೇಲೆ ಸುಳ್ಳು ಪ್ರಕರಣ, ಬಂಧನದ ಬೆದರಿಕೆ ಹಾಕಲಾಯಿತು. ಆದ್ದರಿಂದ, ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕೆಂದು ರಾಜ್ಯದ 24 ಜಿಲ್ಲೆಯ 113 ವಿಧಾನಸಭೆ ಕ್ಷೇತ್ರಗಳಲ್ಲಿ ತಾಂಡ ಬಚಾವೊ–ಬಿಜೆಪಿ ಹಟಾವೊ, ಸಂವಿಧಾನದ ಮೀಸಲಾತಿ ಬಚಾವೊ, ಬಿಜೆಪಿ ಹಟಾವೊ ಎಂಬ ಘೋಷಣೆ ಅಡಿಯಲ್ಲಿ ಬಹಿರಂಗ ಸಮಾವೇಶ, ಮೆರವಣಿಗೆ ನಡೆಸಿ ಸಮುದಾಯದಲ್ಲಿ ಜಾಗೃತಿ ಮೂಡಿಸಿ ಬಿಜೆಪಿಯನ್ನು ತಿರಸ್ಕರಿಸಲು ಕರೆ ನೀಡಲಾಗಿತ್ತು' ಎಂದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್. ಅನಂತ್ ನಾಯಕ್ ಮಾತನಾಡಿ, 'ಬಹುಮತದೊಂದಿಗೆ ಆಯ್ಕೆಯಾಗಿರುವ ಕಾಂಗ್ರೆಸ್ ಸರ್ಕಾರ ಸಮುದಾಯವನ್ನು ಹಗುರವಾಗಿ ಪರಿಗಣಿಸದೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ರಾಜ್ಯದಾದ್ಯಂತ ವಿವಿಧ ಪೊಲೀಸ್ ಠಾಣೆಗಳಲ್ಲಿ ಬಂಜಾರ, ಬೋವಿ, ಕೊರಮ, ಕೊರಚ ಸಮುದಾಯಗಳ ಸ್ವಾಮೀಜಿಗಳು, ಹೋರಾಟಗಾರರು, ಮುಖಂಡರ ಮೇಲೆ ಹಾಕಿರುವ ಸುಳ್ಳು ಪ್ರಕರಣಗಳನ್ನು ಕೂಡಲೇ ಕೈಬಿಡಬೇಕು ಎಂದರು.

ಒಕ್ಕೂಟದ ಉಪಾಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್, ಕಾರ್ಯಾಧ್ಯಕ್ಷ ರಾಘವೇಂದ್ರ ನಾಯ್ಕ, ಆದರ್ಶ ಯಲ್ಲಪ್ಪ ಇದ್ದರು.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರ್ ಸೂಚನೆ ಸಂ. CPMGSU-2023-10 ದಿನಾಂಕ: 15.05.2023

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗ: ಅಮೃತ್ ಭಾರತ್ ನಿಲ್ದಾಣದ ಅಡಿಯಲ್ಲಿ (ಸಿವಿಲ್ ಮತ್ತು ಎಲೆಕ್ಟ್ರಿಕಲ್ ಭಾಗಗಳೊಂದಿಗೆ ಸಂಯೋಜಿತ ಟೆಂಡರ್) ಇತರ ಸಂಬಂಧಿತ ಕೆಲಸಗಳೊಂದಿಗೆ ಚಿಕ್ಕಮಗಳೂರಿನ ಅಸ್ತಿತ್ವದಲ್ಲಿರುವ ನಿಲ್ದಾಣದ ಕಟ್ಟಡ, ಪ್ಲಾಟ್‌ಫಾರ್ಮ್, ಪರಿಚಲನೆ ಪ್ರದೇಶವನ್ನು ಸುಧಾರಿಸುವುದು.	ರೂ. 10,42,44,384.88

ಟೆಂಡರ್ ಸೂಚನೆ ಸಂ. CPMGSU-2023-09 ದಿನಾಂಕ: 15.05.2023

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗ: ಅಮೃತ್ ಭಾರತ್ ನಿಲ್ದಾಣದ ಅಡಿಯಲ್ಲಿ ಇತರ ಸಂಬಂಧಿತ ಕೆಲಸಗಳೊಂದಿಗೆ ತಿಪಟೂರಿನ ಅಸ್ತಿತ್ವದಲ್ಲಿರುವ ನಿಲ್ದಾಣದ ಕಟ್ಟಡಗಳು, ಪ್ಲಾಟ್‌ಫಾರ್ಮ್, ಪರಿಚಲನೆ ಪ್ರದೇಶವನ್ನು ಸುಧಾರಿಸುವುದು (ಸಿವಿಲ್ ಮತ್ತು ಎಲೆಕ್ಟ್ರಿಕಲ್‌ನೊಂದಿಗೆ ಸಂಯೋಜಿತ ಟೆಂಡರ್).	ರೂ. 10,55,77,182.84

ಟೆಂಡರ್ ಸೂಚನೆ ಸಂ. CPMGSU-2023-11 ದಿನಾಂಕ: 15.05.2023

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗ: ಅಮೃತ್ ಭಾರತ್ ಸ್ಟೇಷನ್ (ಸಿವಿಲ್ ಮತ್ತು ಎಲೆಕ್ಟ್ರಿಕಲ್ ಭಾಗಗಳೊಂದಿಗೆ ಸಂಯೋಜಿತ ಟೆಂಡರ್) ಅಡಿಯಲ್ಲಿ ಇತರ ಸಂಬಂಧಿತ ಕೆಲಸಗಳೊಂದಿಗೆ ಅರಸೀಕೆರೆ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್‌ಗೆ ಸುಧಾರಣೆ, ಸಂಚಾರ ಪ್ರದೇಶ ಮತ್ತು ಹೊಸ ನಿಲ್ದಾಣದ ಕಟ್ಟಡದ ನಿರ್ಮಾಣ.	ರೂ. 24,49,39,165.19

ಮೇಲಿನ ಎಲ್ಲ ಟೆಂಡರ್‌ಗಳಿಗೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–06–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಯೋಜನಾ ವ್ಯವಸ್ಥಾಪಕರು ಇಂಜಿನಿಯರಿಂಗ್/ಜಿಎಸ್/ಮೈಸೂರು

PUB/98/AAV/PRB/SWR/2023-24

S.W.Railways SWRRLY SWRRLY

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099. ದೂ.: 080–27835122
ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ದಿನಾಂಕ: 17.05.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿ ರೂ. 15.00 ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಂಬಂಧ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ದಿನಾಂಕ: **01.06.2023**ರಂದು ಸಮಯ **ಸಂಜೆ 3:00 ಗಂಟೆ** ಒಳಗೆ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವಿಳಾಸ **https://www.eproc.karnataka.gov.in**ನಲ್ಲಿ ಪರಿಶೀಲಿಸಬಹುದು.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/54/2023–24

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SE01-2023-24

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಹೊಸ ಸಿಡಬ್ಲ್ಯೂಎಂ ಕಚೇರಿ ಕಟ್ಟಡದ ಛಾವಣಿಯ ಮೇಲೆ 15kWp ಆನ್–ಗ್ರಿಡ್ ಎಸ್‌ಆರ್‌ಟಿಪಿವಿ ವಿದ್ಯುತ್ ಸ್ಥಾವರದ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ.	ರೂ. 15,12,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–06–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವಿಭಾಗೀಯ ವಿದ್ಯುತ್ ಎಂಜಿನಿಯರ್/ಕೇಂದ್ರ ಕಾರ್ಯಾಗಾರ ಮೈಸೂರು

PUB/97/AAV/PRB/SWR/2023-24

S.W.Railways SWRRLY SWRRLY

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 560 094.
ದೂ: (080)22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಐಟಂ ದರ ಟೆಂಡರ್‌ಗಳನ್ನು ಇ–ಟೆಂಡರಿಂಗ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಬೆಂಗಳೂರಿನ ಮಾರತಹಳ್ಳಿಯಲ್ಲಿರುವ ಟಿಎಫ್, ಹೆಚ್‌ಎಸ್‌ಎಫ್‌ಸಿ ಕಟ್ಟಡದಲ್ಲಿ ಎರಡು ವರ್ಷಗಳಿಗೆ ಸಿವಿಲ್, ಪಿಹೆಚ್, ಎಲೆಕ್ಟ್ರಿಕಲ್, ಎಸಿ, ತೋಟಗಾರಿಕೆ ಮತ್ತು ಹೌಸ್‌ಕೀಪಿಂಗ್ ಕಾರ್ಯಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ನಿರ್ವಹಣಾ ಗುತ್ತಿಗೆ. **HSFC/CMG/MM/C/73/2023-24 &** ದಿನಾಂಕ: 17.05.2023	137.26 ಲಕ್ಷಗಳು	24 ತಿಂಗಳು	18.05.2023 ರ (11.00 ಗಂಟೆ) ಇಂದ 23.05.2023 (23.30 ಗಂಟೆ)ವರೆಗೆ	26.05.2023 11.00 ಗಂಟೆವರೆಗೆ	26.05.2023 11.30 ಗಂಟೆಗೆ	2,74,520/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕ ಪಾವತಿಸಿ ಟೆಂಡರ್ ವೆಬ್‌ಸೈಟ್: **www.tenderwizard.com/ISRO**ಮೂಲಕ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್: **www.isro.gov.in**ನಲ್ಲಿ ಟೆಂಡರ್ ಆಹ್ವಾನ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಪರಿವೀಕ್ಷಿಸಬಹುದು ಮತ್ತು ಟೆಂಡರ್ ಹೆಚ್ಚಿನ ವಿವರಗಳಿಗೆ ಹಾಗೂ ಟೆಂಡರ್ ದಸ್ತಾವೇಜು ಖರೀದಿಗೆ **www.tenderwizard.com/ISRO**ಗೆ ಭೇಟಿ ನೀಡಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಕೇಂದ್ರ, ರಾಜ್ಯ ಸರ್ಕಾರದಿಂದ ದೊರೆಯದ ಅನುದಾನ

ಅಂಗನವಾಡಿ ಕೇಂದ್ರಗಳಿಗೆ ಬಿಡುಗಡೆಯಾಗದ ಬಾಡಿಗೆ!

• ಖಲೀಲಅಹ್ಮದ ಶೇಖ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡದಿರುವುದರಿಂದ ಅಂಗನವಾಡಿ ಕೇಂದ್ರಗಳಿಗೆ ಆರು ತಿಂಗಳಿನಿಂದ ಬಾಡಿಗೆ ಪಾವತಿಯಾಗಿಲ್ಲ.

‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ 66,361 ಅಂಗನವಾಡಿ ಕೇಂದ್ರಗಳ ಪೈಕಿ 10,638 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಬಾಡಿಗೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇ 60:40 ಅನುಪಾತದಲ್ಲಿ ಪಾವತಿ ಮಾಡಬೇಕಾಗಿದೆ. ಆದರೆ, ಕೇಂದ್ರ ಸರ್ಕಾರ ಆರು ತಿಂಗಳಿನಿಂದ ಅನುದಾನ ಬಿಡುಗಡೆ ಮಾಡಿಲ್ಲ. ರಾಜ್ಯದಲ್ಲಿ ಚುನಾವಣೆ ಇದ್ದ ಕಾರಣ ರಾಜ್ಯ ಸರ್ಕಾರವು ಅನುದಾನ ಬಿಡುಗಡೆಮಾಡಿಲ್ಲ. ಇದರಿಂದ ಬಾಡಿಗೆ ಪಾವತಿ ವಿಳಂಬವಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

> **ಹಣ ಬಿಡುಗಡೆ ಮಾಡು ವಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಹಣ ಬಂದ ತಕ್ಷಣ ಪಾವತಿಸುತ್ತೇವೆ. ಚುನಾವಣೆಯಿಂದಾಗಿ ಬಾಡಿಗೆ ಪಾವತಿ ವಿಳಂಬವಾಗಿದೆ.**
> **ಡಾ. ಅನುರಾಧ,** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕಿ

> **ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಸರ್ಕಾರ ಸ್ವಂತ ಕಟ್ಟಡ ನಿರ್ಮಿಸಬೇಕು. ಬಾಡಿಗೆ ಹಣ ಕೂಡಲೇ ಪಾವತಿಸಬೇಕು.**
> **ಬಿ. ಅಮ್ಜದ್,** ರಾಜ್ಯ ಘಟಕದ ಅಧ್ಯಕ್ಷರು, ಎಐಟಿಯುಸಿ

‘ಬಾಡಿಗೆ ಕಟ್ಟಡಗಳಿಗೆ ಅಂಗನವಾಡಿ ಕಾರ್ಯಕರ್ತೆಯರು ಮುಂಗಡ ಹಣವನ್ನು ಪಾವತಿಸಿದ್ದಾರೆ. ಜತೆಗೆ, ಪ್ರತಿ ತಿಂಗಳು ಬಾಡಿಗೆಯನ್ನು ಮಾಲೀಕರಿಗೆ ನೀಡುತ್ತಿದ್ದಾರೆ. ಆರು ತಿಂಗಳಿನಿಂದ ಬಾಡಿಗೆ ಹಣ ಬಿಡುಗಡೆಯಾಗದ ಕಾರಣ ಕಾರ್ಯಕರ್ತೆಯರಿಗೆ ಆರ್ಥಿಕ ಹೊರೆ ಹೆಚ್ಚಾಗಿದೆ. ಕಾರ್ಯಕರ್ತೆಯರು ಅಧಿಕಾರಿಗಳಿಗೆ ಕೇಳಿದರೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ ಎಂಬ ಉತ್ತರ ನೀಡುತ್ತಿದ್ದಾರೆ. ಇದರಿಂದ ಮಾಲೀಕರು ಕೇಂದ್ರವನ್ನು ಖಾಲಿ ಮಾಡುವಂತೆ ಒತ್ತಾಯಿಸುತ್ತಿದ್ದಾರೆ’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್‌ನ (ಎಐಟಿಯುಸಿ) ರಾಜ್ಯ ಘಟಕದ ಅಧ್ಯಕ್ಷ ಬಿ. ಅಮ್ಜದ್ ಹೇಳಿದರು.

‘ಸರ್ಕಾರ ಒಂದು ಅಂಗನವಾಡಿ ಕೇಂದ್ರಕ್ಕೆ ₹4 ಸಾವಿರ ಬಾಡಿಗೆ ನೀಡುತ್ತದೆ. ಆದರೆ, ಈ ಹಣದಲ್ಲಿ ನಗರಪ್ರದೇಶದಲ್ಲಿ ಸುಸಜ್ಜಿತ ಕಟ್ಟಡ ಸಿಗುವುದಿಲ್ಲ. ಇದರಿಂದ ಮಕ್ಕಳ ಬಾಲ್ಯದ ಬೆಳವಣಿಗೆ ಮೇಲೆ ದುಷ್ಪರಿಣಾಮ ಬೀರುತ್ತದೆ’ ಎಂದರು.

‘ಬೀದರ್ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ 2022ರ ಏಪ್ರಿಲ್ 1ರಿಂದ ಇದುವರೆಗೂ ಬಾಡಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಆದ್ದರಿಂದ ಕಟ್ಟಡಗಳ ಮಾಲೀಕರು ತೊಂದರೆ ನೀಡುತ್ತಿದ್ದಾರೆ. ಈ ಕುರಿತು ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ’ ಎಂದು ಎಐಟಿಯುಸಿಯ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ತಿಳಿಸಿದರು.

‘ಅಂಗನವಾಡಿ ಕಾರ್ಯಕರ್ತೆಯರೇ ಬಾಡಿಗೆ ಹಣವನ್ನು ತಮ್ಮ ಕೈಯಿಂದ ನೀಡಿ ಕೇಂದ್ರ ನಡೆಸುತ್ತಿದ್ದಾರೆ. ಆದರೆ, ಇಲಾಖೆ ಒಟ್ಟಿಗೆ ಹಣವನ್ನು ಬಾಡಿಗೆದಾರರ ಖಾತೆಗೆ ಹಾಕುವುದರಿಂದ ಕಾರ್ಯಕರ್ತೆಯರು ಕೈಯಿಂದ ನೀಡಿದ ಹಣ ಮರಳಿ ಪಡೆಯಲು ಹೆಣಗಾಡುವ ಪರಿಸ್ಥಿತಿ ಇದೆ. ಆದ್ದರಿಂದ, ಬಾಲವಿಕಾಸ ಸಮಿತಿಯ ಖಾತೆಗೆ ಬಾಡಿಗೆ ಹಣವನ್ನು ಪಾವತಿಸಬೇಕು’ ಎಂದು ಆಗ್ರಹಿಸಿದರು.

1. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಮಾಡುವಂತೆ ಒತ್ತಾಯಿಸಿ ನಗರದಲ್ಲಿ ಬುಧವಾರ ಬೆಂಬಲಿಗರು ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ
2. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ಮುಖ್ಯಮಂತ್ರಿಗಳ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಿದ್ಧತೆಯಲ್ಲಿ ತೊಡಗಿದ್ದ ಕಾರ್ಮಿಕರು

– ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಸಿದ್ದರಾಮಯ್ಯ ಮನೆ ಮುಂದೆ ಬೆಳಿಗ್ಗೆ ಸಂಭ್ರಮ, ಸಂಜೆ ನೀರವ ಮೌನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಿದ್ದಾರೆ ಎಂಬ ಸುದ್ದಿ ಹಬ್ಬಿದ್ದರಿಂದ ಅಭಿಮಾನಿಗಳು ಬುಧವಾರ ಭಾರಿ ಸಂಖ್ಯೆಯಲ್ಲಿ ಅವರ ಮನೆಯ ಮುಂದೆ ಸೇರಿ ಸಂಭ್ರಮಿಸಿದರು.

ಸಿದ್ದರಾಮಯ್ಯ ಮನೆಯ ಮುಂದಿನ ರಸ್ತೆಯ ಉದ್ದಕ್ಕೂ ಪಟಾಕಿ ಸಿಡಿಸಿ, ಘೋಷಣೆಗಳನ್ನು ಕೂಗಿ ಕುಣಿದು ಕುಪ್ಪಳಿಸಿದರು. ಮುಖ್ಯಮಂತ್ರಿ ಸ್ಥಾನ ಇನ್ನೂ ಖಚಿತವಾಗಿಲ್ಲ ಎಂಬ ಸಂದೇಶ ಸಿಗುತ್ತಿದ್ದಂತೆ ಜನಸಂದಣಿ ನಿಧಾನವಾಗಿ ಕರಗಿತು. ಕೆಲವರು ಬೇಸರ ತೋಡಿಕೊಳ್ಳುತ್ತಾ ಜಾಗ ಖಾಲಿ ಮಾಡಿದರೆ, ಕತ್ತಲಾಗುವವರೆಗೂ ಕೆಲವರು ಮನೆಯ ಮುಂದೆಯೇ ಬೀಡುಬಿಟ್ಟಿದ್ದರು.

ಶಿವಕುಮಾರ್ ಒಬ್ಬರಿಂದಲೇ ಹೆಚ್ಚು ಸ್ಥಾನ ಬಂದಿಲ್ಲ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷವನ್ನು ಅಧಿಕಾರಕ್ಕೆ ತರಲು ಡಿ.ಕೆ. ಶಿವಕುಮಾರ್ ಶ್ರಮ ಹಾಕಿದ್ದಾರೆ. ಅವರು ಮುಖ್ಯಮಂತ್ರಿ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಆದರೆ, ಅವರೊಬ್ಬರಿಂದಲೇ ಪಕ್ಷಕ್ಕೆ ಹೆಚ್ಚಿನ ಸ್ಥಾನಗಳು ಬಂದಿಲ್ಲ. ದಲಿತ ಸಮುದಾಯದ ಮತಗಳೂ ಹೆಚ್ಚಾಗಿ ಪಕ್ಷಕ್ಕೆ ಬಂದಿವೆ. ಲಿಂಗಾಯತ, ಅಲ್ಪಸಂಖ್ಯಾತ, ದಲಿತ ಸಮುದಾಯದ ಮತಗಳೆಲ್ಲವೂ ಬಂದಿವೆ’ ಎಂದು ಕಾಂಗ್ರೆಸ್ ಶಾಸಕ ಎಚ್‌.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡುವುದೇ ಸೂಕ್ತ. ಐದು ವರ್ಷ ಒಬ್ಬರೇ ರಾಜ್ಯದ ಮುಖ್ಯಮಂತ್ರಿ ಆಗಿರಬೇಕು. ಡಿ.ಕೆ. ಶಿವಕುಮಾರ್ ಅವರಿಗೆ ತಾಳ್ಮೆ ಇರಬೇಕು. ಅವರಿಗೆ ಮುಂದೆ ಒಳ್ಳೆಯ ಅವಕಾಶ ಸಿಗಲಿದೆ’ ಎಂದರು.

‘ಸಿದ್ದರಾಮಯ್ಯ ಅತ್ಯಂತ ದೊಡ್ಡಮಟ್ಟದ ಜನಪ್ರಿಯತೆ ಹೊಂದಿರುವ ನಾಯಕ. ಅವರು ಈ ಹಿಂದೆ ಉತ್ತಮ ಆಡಳಿತ ನೀಡಿದ್ದರು. ಆರ್ಥಿಕ ಶಿಸ್ತು ಕಾಪಾಡಿಕೊಂಡು ಹೋಗಿದ್ದರು. ಪ್ರಣಾಳಿಕೆಯಲ್ಲಿದ್ದ ಬಹುತೇಕ ಭರವಸೆಗಳನ್ನು ಈಡೇರಿಸಿದ್ದರು’ ಎಂದರು.

‘ಉಪ ಮುಖ್ಯಮಂತ್ರಿ (ಡಿಸಿಎಂ) ಸ್ಥಾನದ ಅಗತ್ಯವೇ ಇಲ್ಲ. ಅದು ಸಂವಿಧಾನಾತ್ಮಕ ಹುದ್ದೆಯೇ ಅಲ್ಲ. ಐದು ವರ್ಷಗಳ ಕಾಲ ಒಬ್ಬರೇ ರಾಜ್ಯದ ಮುಖ್ಯಮಂತ್ರಿ ಆಗಿರಬೇಕು. ಆಗ ಮಾತ್ರ ಸುಭದ್ರ ಆಡಳಿತ ನೀಡಲು ಸಾಧ್ಯ’ ಎಂದೂ ಹೇಳಿದರು.

ಬ್ಯಾನರ್ ವಿವಾದ: ಆರೋಪಿಗಳ ಮೇಲೆ ಪೊಲೀಸ್ ದೌರ್ಜನ್ಯ?

ಪ್ರಜಾವಾಣಿ ವಾರ್ತೆ

ಮಂಗಳೂರು: ಪುತ್ತೂರಿನಲ್ಲಿ ಇತ್ತೀಚೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಸದ ಸದಾನಂದ ಗೌಡ ಅವರ ಭಾವಚಿತ್ರ ಇರುವ ಬ್ಯಾನರ್ ಅಳವಡಿಸಿ ಅದಕ್ಕೆ, ಚಪ್ಪಲಿ ಹಾರ ಹಾಕಿದ ಪ್ರಕರಣದ ಆರೋಪಿಗಳ ಮೇಲೆ ಪೊಲೀಸ್ ದೌರ್ಜನ್ಯ ನಡೆದಿದೆ ಎಂದು ಆರೋಪಿಸಿ ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರಗಳನ್ನು ಹರಿಯಬಿಡಲಾಗಿದೆ.

ಈ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ್ ಅಮಟೆ ಅವರು ಪುತ್ತೂರಿನ ಡಿವೈಎಸ್‌ಪಿ ವೀರಯ್ಯ ಹಿರೇಮಠ ಅವರಿಗೆ ಸೂಚಿಸಿದ್ದಾರೆ.

‘ಪುತ್ತೂರಿನ ಬ್ಯಾನರ್ ವಿವಾದಕ್ಕೆ ಸಂಬಂಧಿಸಿ ಪುತ್ತೂರು ನಗರ ಠಾಣೆಯ ಪೊಲೀಸ್ ಅಧಿಕಾರಿಗಳು ದಸ್ತಗಿರಿ ಮಾಡಲಾಗಿದ್ದ ಆರೋಪಿಗಳ ಮೇಲೆ ಪೊಲೀಸರು ಹಲ್ಲೆ ಮಾಡಿರುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶ ಹರಿದಾಡುತ್ತಿದೆ. ಈ ಬಗ್ಗೆ ನಮಗೆ ಯಾರೂ ದೂರು ನೀಡಿಲ್ಲ. ಆದರೂ ಈ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಡಿವೈಎಸ್‌ಪಿ ಅವರಿಗೆ ಸೂಚನೆ ನೀಡಿದ್ದೇನೆ. ಆರೋಪದಲ್ಲಿ ನಿಜಾಂಶ ಇದ್ದರೆ ಡಿವೈಎಸ್‌ಪಿ ನೀಡುವ ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲಿದ್ದೇವೆ’ ಎಂದು ವಿಕ್ರಂ ಅಮಟೆ ‘ಪ್ರಜಾವಾಣಿ’ಗೆ ತಿಳಿಸಿದರು.

ನಳಿನ್ ಖಂಡನೆ: ‘ಹಿಂದೂ ಯುವಕರ ಮೇಲೆ ಪುತ್ತೂರಿನಲ್ಲಿ ದಾಖಲಾದ ಪ್ರಕರಣದಲ್ಲಿ ಪೊಲೀಸರ ವರ್ತನೆ ಪೊಲೀಸ್ ಇಲಾಖೆಗೆ ಕಪ್ಪುಚುಕ್ಕೆ. ದೂರು ಪರಿಶೀಲಿಸಿ ತನಿಖೆ ನಡೆಸುವ ಬದಲು ಚಿತ್ರಹಿಂಸೆ ನೀಡಿರುವುದನ್ನು ಖಂಡಿಸುತ್ತೇನೆ. ಉನ್ನತ ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕು’ ಎಂದು ನಳಿನ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ನವೀನ ಬೇಕರಿ ಉತ್ಪನ್ನಗಳ ಪ್ರದರ್ಶನ

ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಕೆವಿಕೆಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ ನವೀನ ಬೇಕರಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ ಮಂಗಳವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ಇತ್ತೀಚೆಗೆ ಬೇಕರಿ ಪದಾರ್ಥಗಳನ್ನು ಉಪಯೋಗಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬೇಕರಿ ಪದಾರ್ಥಗಳ ತಯಾರಿಕೆ ಮತ್ತು ಮಾರಾಟ ಒಂದು ಉದ್ದಿಮೆಯಾಗಿ ಬೆಳೆದಿದೆ. ಹಿಂದಿನ ಕುರುಕುಲು ತಿಂಡಿಗಳ ಜಾಗವನ್ನು ಈ ಪದಾರ್ಥಗಳು ಆಕ್ರಮಿಸಿಕೊಂಡಿವೆ’ ಎಂದು ಹೇಳಿದರು.

ಜಿಕೆವಿಕೆ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಬೇಕರಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ ವೀಕ್ಷಿಸಿದರು

‘ಬೆಂಗಳೂರಿನ ಬೇಕರಿ ಮತ್ತು ಮೌಲ್ಯವರ್ಧನೆ ವಿಭಾಗವು ನಿರಂತರವಾಗಿ ಗೃಹಿಣಿಯರಿಗೆ ಮತ್ತು ಯುವ ಉದ್ಯಮಿಗಳಿಗೆ ಒತ್ತು ನೀಡಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇದರ ಪ್ರತಿಫಲ ಯುವ ಉದ್ಯಮಿಗಳು ಬೇಕರಿ ಉದ್ಯಮದಿಂದ ಆದಾಯ ಗಳಿಸುತ್ತಿದ್ದಾರೆ. ಆರೋಗ್ಯದ ಮಹತ್ವವನ್ನು ಮನಗಂಡು ವಿವಿಧ ಪೌಷ್ಟಿಕ ಸಿರಿಧಾನ್ಯ ಉತ್ಪನ್ನಗಳಾದ ಬಿಸ್ಕತ್ತು, ಕೇಕು, ಪೌಷ್ಟಿಕ ಲಡ್ಡು, ಬ್ರೆಡ್ ಪದಾರ್ಥಗಳನ್ನು ಜಿಕೆವಿಕೆ ಆವರಣದಲ್ಲಿ ತಯಾರಿಸಿ ಮಾರಾಟ ಮಾಡಲಾಗುತ್ತಿರುವುದು ಶ್ಲಾಘನೀಯ’ ಎಂದರು.

ಬೀಟ್‌ರೂಟ್ ಬ್ರೌನಿ, ಚಾಕಲೇಟ್ ಬ್ರೌನಿ, ಮಲ್ಟಿಗ್ರೇನ್ ಬಿಸ್ಕತ್ತು, ಹೈ ಬ್ರಾನ್, ಕ್ಯಾರೆಟ್ ಕೇಕ್, ಮಿನಿ ಪಿಜ್ಜಾ, ಚೀಸ್ ರೋಲ್ ಸೇರಿ 100ಕ್ಕೂ ಹೆಚ್ಚು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ನಡೆಯಿತು. ಬೇಕರಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಲೋಕೇಶ್ ಉಚ್ಚಾಟನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಪಕ್ಷಕ್ಕೆ ದ್ರೋಹ ಎಸಗಿ ಜೆಡಿಎಸ್ ಪರ ಪ್ರಚಾರ ಮಾಡಿರುವ ದಾಸರಹಳ್ಳಿ ಮಂಡಲ ಅಧ್ಯಕ್ಷ ಎನ್. ಲೋಕೇಶ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು’ ಎಂದು ಶಾಸಕ ಎಸ್. ಮುನಿರಾಜು ಆಗ್ರಹಿಸಿದರು. ಬಾಗಲಗುಂಟೆಯ ಬಿಜೆಪಿ ಕಚೇರಿ ಯಲ್ಲಿ ಅವರು ಮಾತನಾಡಿದರು.

‘ಸಾಮಾನ್ಯ ಕಾರ್ಯಕರ್ತನಾಗಿದ್ದ ಲೋಕೇಶ್ ಅವರನ್ನು ಮಲ್ಲಸಂದ್ರ ವಾರ್ಡ್ ಅಧ್ಯಕ್ಷ, ಪಾಲಿಕೆ ಸದಸ್ಯ, ಕ್ಷೇತ್ರದ ಬಿಜೆಪಿ ಅಧ್ಯಕ್ಷನನ್ನಾಗಿ ಮಾಡಲಾಯಿತು. ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿಯಿಂದ ಟಿಕೆಟ್ ನೀಡಿದ್ದು ಬಿಜೆಪಿ ಪಕ್ಷ’ ಎಂದು ವಿವರಿಸಿದರು.

‘ಇಷ್ಟೆಲ್ಲ ಅಧಿಕಾರದ ಅವಕಾಶ ನೀಡಿದ್ದರೂ ದಾಸರಹಳ್ಳಿ ಕ್ಷೇತ್ರದಲ್ಲಿ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ತಾನು ಸಿದ್ಧ ಮಾಡಿಕೊಂಡಿದ್ದ ಪ್ರಚಾರದ ವಾಹನವನ್ನು ಜೆಡಿಎಸ್ ಅಭ್ಯರ್ಥಿ ಮಂಜುನಾಥ್‌ಗೆ ನೀಡಿ ತನ್ನ ಬೆಂಬಲಿಗರನ್ನು ಸಹ ಪ್ರಚಾರಕ್ಕೆ ಕಳುಹಿಸಿದ್ದ ಮಾಹಿತಿ ಇದೆ’ ಎಂದರು.

AIR FORCE SCHOOL ASTE,
GV Camp, Bengaluru - 560 017
Ph:080-25276920/ 25203358
Invites applications for the posts of

	Post	Nature of Appointment
1	PGT (Chemistry)	Regular - Panel
2	TGT (HWT)	Regular - Panel
3	TGT (Music)	Regular
4	Special Educator	Contractual
5	Junior Librarian	Regular
6	Computer Lab Attendant	Contractual
7	Stem Lab Co-ordinator	Part time
8	Helpers (Male & Female) (GV/ AV Camp)	Regular

Details of qualifications and documents required to be checked on www.afsaste.edu.in. Hard copies of resume/CV, along with relevant documents, two passport size photographs and covering letter stating the post applied for with complete contact details (i.e. present address, mobile nos, email id) should be submitted/posted to **Air Force School, ASTE, GV Camp, Murugeshpalya, Bengaluru - 560 017. Last date of receipt is 31 May 2023 upto 1200 hrs.** Soft copies will not be accepted.

Russian Education Fair 2023 Bengaluru
19 MAY 11 AM
Venue: Hotel Taj Yeshwantpur, Tumkur road Bangalore
MBBS
GOVERNMENT UNIVERSITIES PARTICIPATING
MEET REPRESENTATIVES OF UNIVERSITIES
☑ SCHOLARSHIP SEATS AVAILABLE
☑ DISCOUNTS
☑ EDUCATION LOAN INFORMATION
☑ ON SPOT REGISTRATION
☑ NMC RECOGNIZED UNIVERSITIES
☑ INTERACTION WITH ALUMNI
☑ INDIVIDUAL COUNSELING SESSION TO CLEAR ALL THE DOUBTS
ref 7406764411 7406764422

ಹಾಜರಾತಿ ಕೊರತೆ: ಪೂರಕ ಪರೀಕ್ಷೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಜರಾತಿ ಕೊರತೆಯಿಂದ 2022–23ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ ವಂಚಿತರಾಗಿದ್ದ ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿ ಪೂರಕ ಪರೀಕ್ಷೆ ಬರೆಯಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅವಕಾಶ ಕಲ್ಪಿಸಿದೆ.

ಕಲಾ ವಿಭಾಗದ 7,985 ಹಾಗೂ ವಾಣಿಜ್ಯ ವಿಭಾಗದ 4,400 ವಿದ್ಯಾರ್ಥಿಗಳು ಸೇರಿ 12,385 ವಿದ್ಯಾರ್ಥಿಗಳು ಶೇ 75ರಷ್ಟು ಹಾಜರಾತಿ ಪಡೆಯದ ಕಾರಣ ಪರೀಕ್ಷೆ ಬರೆಯಲು ಸಾಧ್ಯವಾಗಿರಲಿಲ್ಲ. ಹಾಗಾಗಿ, ಪೂರಕ ಪರೀಕ್ಷೆಗೆ ಖಾಸಗಿ ವಿದ್ಯಾರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ₹ 1,960 ಹಾಗೂ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳು ₹ 1,560 ಶುಲ್ಕಪಾವತಿಸಿ, ಮೇ 20ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬಹುದು.

ಕೆನರಾ ಬ್ಯಾಂಕ್ केनरा बैंक Canara Bank

Premises & Estate Section, G A Wing,
Head Office, No. 112, J C Road, Bangalore - 560002

NOTICE INVITING TENDERS

Canara Bank invites sealed tenders in two-bid system for the proposed **“COMPREHENSIVE RENOVATION WORKS FOR 17 FLATS IN BLOCK 20 (6 FLATS) AND BLOCK 21 (11 FLATS) AND EXTERNAL CIVIL RENOVATION OF BLOCK 20 & 21 AT BTM LAYOUT APARTMENTS, BANGALORE”**

For further details and other terms and conditions, please visit Bank's website https://canarabank.com/tenders.aspx. For any clarifications contact 080-22238819/22297695 extn 219/214. Last date for submission of tender form is **07/06/2023,** 3:00 PM.

Further, all addendum/corrigendum including modification if any, will be hosted at the Bank's website only.

Place : Bengaluru, Date : 18.05.2023 Sd/- Asst. General Manager

ಉಪನಗರ ರೈಲು: ಬೋಗಿ ಪೂರೈಸಲು ಬಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಗೆ (ಬಿಎಸ್‌ಆರ್‌ಪಿ) ಬೋಗಿಗಳನ್ನು ಪೂರೈಸಲು ಮೂರು ಕಂಪನಿಗಳು ಬಿಡ್ ಮಾಡಿವೆ.

ಕೆ-ರೈಡ್ (ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ) ಈ ಬಗ್ಗೆ ಕಂಪನಿಗಳಿಂದ ಬಿಡ್ ಆಹ್ವಾನಿಸಿತ್ತು. ಮೂರು ಆಸಕ್ತ ಬಿಡ್ದರ್‌ಗಳು ಸ್ಪಂದಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಎಎಫ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್ ಮತ್ತು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಕಂಪನಿಗಳು ಆಸಕ್ತಿಯನ್ನು ವ್ಯಕ್ತಪಡಿಸಿವೆ. ಮೇ 16ರಂದು ಬಿಡ್‌ದಾರರ ಸಮಕ್ಷಮದಲ್ಲಿ ಟೆಂಡರ್ ತೆರೆಯಲಾಗಿದೆ ಎಂದು ತಿಳಿಸಿದ್ದಾರೆ.

ಮುಳುಗುತ್ತಿದ್ದ ಮೊಮ್ಮಗನ ರಕ್ಷಿಸಿ ಗ್ರಾ.ಪಂ ಸದಸ್ಯೆ ಸಾವು

ಮುಳಬಾಗಿಲು: ಗೋಕುಂಟೆಯಲ್ಲಿ ನೀರು ಕುಡಿವಾಗ ಕಾಲುಜಾರಿ ಬಿದ್ದು ಮುಳುಗುತ್ತಿದ್ದ ಮೊಮ್ಮಗನನ್ನು ರಕ್ಷಿಸಲು ಹೋದ ಗ್ರಾ. ಪಂ ಸದಸ್ಯೆಯೊಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಬಲ್ಲ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಹಾಗೂ ಹಾಲಿ ಸದಸ್ಯೆ ಗಂಗುಲಮ್ಮ (40) ಮೃತರು.

ಬಲ್ಲ ಕೆರೆಯಲ್ಲಿರುವ ಗೊಕುಂಟೆಯಲ್ಲಿ ಹಸುಗಳಿಗೆ ನೀರು ಕುಡಿಸಲು ಗಂಗುಲಮ್ಮ ಬುಧವಾರ ನಾಲ್ಕು ವರ್ಷದ ಮೊಮ್ಮಗನ ಜತೆ ಹೋದಾಗ ಈ ದುರ್ಘಟನೆ ನಡೆದಿದೆ.

‘ಹಸುಗಳಿಗೆ ನೀರು ಕುಡಿಸಲೆಂದು ಕಂಕುಳದಲ್ಲಿದ್ದ ಮೊಮ್ಮಗನನ್ನು ಗಂಗುಲಮ್ಮ ಕೆಳಗೆ ಇಳಿಸಿದ್ದರು. ಆಗ ನೀರು ಕುಡಿಯಲು ಗೋಕುಂಟೆಗೆ ಇಳಿದ ಬಾಲಕ ನೀರಿಗೆ ಬಿದ್ದಿದ್ದಾನೆ. ನೀರಿಗಿಳಿದ ಗಂಗುಲಮ್ಮ ಮೊಮ್ಮಗನನ್ನು ರಕ್ಷಿಸಿದ್ದಾರೆ. ಆದರೆ, ಹೂಳಿನಲ್ಲಿ ಸಿಲುಕಿ ಹೊರಬರಲಾರದೆ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.



‘ಕುಲಪತಿಗಳ ನೇಮಕ ಸ್ವಜನಪಕ್ಷಪಾತಕ್ಕೆ ಉದಾಹರಣೆ’

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳಲ್ಲಿ ಆರ್‌ಎಸ್‌ಎಸ್ ಹಿನ್ನೆಲೆ, ಚಿಂತನೆ ಹೊಂದಿರುವ ಕುಲಪತಿ ಮತ್ತು ಶಿಕ್ಷಕರ ನೇಮಕಾತಿ ಮಾಡಿಕೊಂಡಿರುವುದು ಸ್ವಜನಪಕ್ಷಪಾತಕ್ಕೆ ತಾಜಾ ಉದಾಹರಣೆ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಬುಧವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಕಪಿಲ್ ಸಿಬಲ್

ಈ ಮೂಲಕ, ‘ನಮ್ಮ ಸರ್ಕಾರದಲ್ಲಿ ತಂದ ಆಮೂಲಾಗ್ರ ಬದಲಾವಣೆಗಳಿಂದ ನೇಮಕಾತಿ ವ್ಯವಸ್ಥೆಯಲ್ಲಿದ್ದ ಸ್ವಜನಪಕ್ಷಪಾತ ಕೊನೆಯಾಗಿದೆ’ ಎಂದಿದ್ದ ಪ್ರಧಾನಿ ಮೋದಿ ಅವರ ಹೇಳಿಕೆಗೆ ತಿರುಗೇಟು ನೀಡಿದರು. ‘ಮೋದಿ ಅವರು ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತ ಕೊನೆಯಾಗಿದೆ ಎಂದಿದ್ದಾರೆ. ಅಭಿನಂದನೆಗಳು. ಆದರೆ, ವಿಶ್ವವಿದ್ಯಾಲಯಗಳಲ್ಲಿ ಆರ್‌ಎಸ್‌ಎಸ್ ಹಿನ್ನೆಲೆಯ ಕುಲಪತಿಗಳ ಮತ್ತು ಶಿಕ್ಷಕರ ನೇಮಕಾತಿಯು ಸ್ವಜನಪಕ್ಷಪಾತಕ್ಕೆ ತಾಜಾ ಉದಾಹರಣೆ. ಇದಕ್ಕೆ ಏನು ಹೇಳುತ್ತೀರಿ’ ಎಂದು ಸಿಬಲ್ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

ಹೊಸ ಸರ್ಕಾರದ ನೆಪ: ಬಿಬಿಎಂಪಿ ಗುತ್ತಿಗೆದಾರರಿಗೆ ಪಾವತಿಯಾಗದ ಹಣ

₹650 ಕೋಟಿ ಬಿಡುಗಡೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಎರಡು ವರ್ಷದ ಹಿಂದೆ ಪೂರ್ಣಗೊಳಿಸಿರುವ ಕಾಮಗಾರಿಯ ಗುತ್ತಿಗೆದಾರರಿಗೆ ₹650 ಕೋಟಿ ಬಿಡುಗಡೆಯನ್ನು ಮುಖ್ಯ ಆಯುಕ್ತರ ಸೂಚನೆ ಮೇರೆಗೆ ತಡೆಹಿಡಿಯಲಾಗಿದೆ.

ಗುತ್ತಿಗೆದಾರರು ಕಾಮಗಾರಿಗಳನ್ನು ಪೂರೈಸಿ ಹಲವು ತಿಂಗಳು ಕಳೆದಿದ್ದು, ಅದಕ್ಕೆ ಬಿಲ್, ಪರಿಶೀಲನೆ ಎಲ್ಲವೂ ಮುಗಿದು, ಸರ್ಕಾರದಿಂದ ಹಣವೂ ಬಿಡುಗಡೆಯಾಗಿದೆ. ಸಂಬಂಧಿತ ಗುತ್ತಿಗೆದಾರರಿಗೆ ಹಣ ಬಿಡುಗಡೆಯ ಪ್ರಕ್ರಿಯೆಗಳೂ ಮುಗಿದಿವೆ. ಆದರೆ, ‘ಹೊಸ ಸರ್ಕಾರ ಬಂದರೆ ಆಕ್ಷೇಪ ಮಾಡಬಹುದು. ಸದ್ಯಕ್ಕೆ ಹಣ ಬಿಡುಗಡೆ ಮಾಡದೆ ತಡೆ ಹಿಡಿಯಿರಿ’ ಎಂದು ತುಷಾರ್ ಗಿರಿನಾಥ್ ಸೂಚಿಸಿದ್ದಾರೆ ಎಂದು ಹಣಕಾಸು ವಿಭಾಗದ ಹಿರಿಯ ಅಧಿಕಾರಿಗಳೇ ತಿಳಿಸಿದರು.

‘ಸರ್ಕಾರಕ್ಕೂ ಬಿಲ್ ಬಿಡುಗಡೆಗೂ ಯಾವುದೇ ಸಂಬಂಧ ಇಲ್ಲ. ಆದರೆ, ಹೊಸ ಸದಸ್ಯರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ ತಡೆ ಹಿಡಿಯಿರಿ ಎಂದು ಮುಖ್ಯ ಆಯುಕ್ತರು ಹೇಳಿದ್ದಾರೆ’ ಎಂದು ಹೆಸರು ಹೇಳಲು ಇಚ್ಛಿಸದ ಹಣಕಾಸು ಅಧಿಕಾರಿಗಳು ಹೇಳಿದರು.

‘ನಮ್ಮದೆಲ್ಲ ಆರರಿಂದ ಎರಡು ವರ್ಷದ ಹಿಂದೆ ಮುಗಿದಿರುವ ಕಾಮಗಾರಿಗಳು. ಅವುಗಳ ಹಣ ಪಾವತಿಗೆ ಎಲ್ಲ ರೀತಿಯ ಪ್ರಕ್ರಿಯೆಗಳು ಮುಗಿದಿದ್ದರೂ ಹೊಸ ಸರ್ಕಾರದ ನೆಪ ಹೇಳಿ ಬಿಲ್ ಪಾವತಿ ಮಾಡಲಾಗುತ್ತಿಲ್ಲ. ಈ ಬಗ್ಗೆ ಆಯುಕ್ತರನ್ನು ಕೇಳಿದರೆ, ‘ಹೊಸ ಸರ್ಕಾರ ಬಂದ ಮೇಲೆ ನೋಡೋಣ’ ಎನ್ನುತ್ತಿದ್ದಾರೆ. ಇದರಿಂದ ಮತ್ತೆ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಅಳಲು ತೋಡಿಕೊಂಡರು.

‘ಹಳೆಯ ಕಾಮಗಾರಿಗಳ ಬಿಲ್ ಪಾವತಿಗೆ ಈಗ ತಡೆ ಹಾಕುವುದು ಸರಿಯಲ್ಲ. ಎಲ್ಲ ಪಕ್ಷಗಳ ಶಾಸಕರ ಕ್ಷೇತ್ರದಲ್ಲೂ ನಾವು ಕಾಮಗಾರಿ ಮಾಡಿದ್ದೇವೆ. ಹೊಸದಾಗಿ ಕಾಮಗಾರಿ ಬೇಡ, ಬಿಲ್ ಕೊಡಬೇಡಿ, ಕಾರ್ಯಾದೇಶ ನೀಡುವುದಿಲ್ಲ ಎಂದರೆ ಸರಿ. ಆದರೆ, ಹಳೆಯ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡದೆ ಸತಾಯಿಸುವುದು ಸರಿಯಲ್ಲ’ ಎಂದು ಗುತ್ತಿಗೆದಾರರು ದೂರಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಈ ಬಗ್ಗೆ ಮಾಹಿತಿ ಪಡೆಯಲು ಸಂಪರ್ಕಿಸಿದಾಗ, ಅವರು ಪ್ರತಿಕ್ರಿಯಿಸಲಿಲ್ಲ.

ಆಕ್ಷೇಪ ಇರುವುದಿಲ್ಲ: ‘ಹೊಸ ಸರ್ಕಾರಕ್ಕೂ ಹಲವು ತಿಂಗಳ ಹಿಂದೆ ಮಾಡಿರುವ ಕಾಮಗಾರಿಗಳ ಬಿಲ್‌ಗಳಿಗೂ ಸಂಬಂಧ ಇರುವುದಿಲ್ಲ. ಈ ಸಮಯದಲ್ಲಿ ಹೊಸದಾಗಿ ಯಾವುದೇ ಬಿಲ್ ಮಾಡುವುದು ಅಥವಾ ಕಾರ್ಯಾದೇಶ ನೀಡುವಂತಿಲ್ಲ. ಆದರೆ, ಹತ್ತಾರು ತಿಂಗಳ ಹಿಂದಿನ ಕಾಮಗಾರಿಗೆ ಹಣ ಬಿಡುಗಡೆ ಮಾಡುವುದಕ್ಕೆ ಆಕ್ಷೇಪ ಇರುವುದಿಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ಜೂನ್‌ನಲ್ಲಿ ಅಮೆರಿಕಕ್ಕೆ ರಾಹುಲ್ ಭೇಟಿ

ನವದೆಹಲಿ (ಪಿಟಿಐ): ಜೂನ್ ಮೊದಲ ವಾರ ಅಮೆರಿಕಕ್ಕೆ ಭೇಟಿ ನೀಡಲಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ನ್ಯೂಯಾರ್ಕ್‌ನಲ್ಲಿ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಅಮೆರಿಕದಲ್ಲಿ ವಾರಕ್ಕೂ ಹೆಚ್ಚು ಕಾಲ ತಂಗುವ ರಾಹುಲ್, ವಾಷಿಂಗ್ಟನ್ ಡಿಸಿ ಮತ್ತು ಲಾಸ್ ಏಂಜಲೀಸ್ ಗೆ ಭೇಟಿ ನೀಡುವ ಸಾಧ್ಯತೆಯಿದೆ.

ಜೂನ್ 4 ರಂದು ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡುವರು. ಆದರೆ, ಸ್ಥಳವನ್ನು ಅಂತಿಮಗೊಳಿಸಲಾಗಿಲ್ಲ. ಈ ವಾರದಲ್ಲಿ ನಿರ್ಧರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಅಮೆರಿಕ ಭೇಟಿ ವೇಳೆ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸುವ ಸಾಧ್ಯತೆ ಇದೆ. ಕಳೆದ ಮಾರ್ಚ್‌ನಲ್ಲಿ ಲಂಡನ್‌ನಲ್ಲಿ ಭಾಷಣ ಮಾಡುವ ವೇಳೆ ರಾಹುಲ್, ‘ಭಾರತದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ. ದೇಶದ ಪ್ರಜಾಪ್ರಭುತ್ವ ಉಳಿಸಲು ವಿದೇಶಿ ಶಕ್ತಿಗಳು ಮಧ್ಯಪ್ರವೇಶಿಸಬೇಕು’ ಎಂಬ ಹೇಳಿಕೆ ಸ್ವದೇಶದಲ್ಲಿ ಕೋಲಾಹಲ ಸೃಷ್ಟಿಸಿತ್ತು.

ನಾಟಕ ಪ್ರದರ್ಶನ ನಗರದ ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯಲ್ಲಿ ಬುಧವಾರ ಜಾನಪದ ಕಲಾವಿದೆ ಮಂಜಮ್ಮ ಬಿ. ಜೋಗತಿ ಅವರ ಜೀವನಾಧಾರಿತ ‘ಮಾತಾ’ ಏಕವ್ಯಕ್ತಿ ನಾಟಕವನ್ನು ಕಲಾವಿದ ಅರುಣ್ ಕುಮಾರ್ ಪ್ರಸ್ತುತಿಪಡಿಸಿದರು. –ಪ್ರಜಾವಾಣಿ ಚಿತ್ರ

ಉತ್ತರಪ್ರದೇಶ • ಲೈಂಗಿಕ ಕಿರುಕುಳಕ್ಕೆ ವಿರೋಧ

ಬಾಲಕಿಯ ಸುಟ್ಟು ಹಾಕಿದ ನೆರೆಮನೆಯಾತ: ಬಂಧನ

ಪ್ರಜಾವಾಣಿ ವಾರ್ತೆ

ಲಖನೌ: ಲೈಂಗಿಕ ಕಿರುಕುಳ ವಿರೋಧಿಸಿದ ಬಾಲಕಿಯೊಬ್ಬಳನ್ನು ನೆರೆಮನೆಯಾತ ಬೆಂಕಿ ಹಚ್ಚಿ ಸುಟ್ಟು ಹಾಕಿದ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಮೇನ್‌ಪುರಿ ಜಿಲ್ಲೆಯಲ್ಲಿ ನಡೆದಿದೆ.

ಕಳೆದ ಕೆಲವು ತಿಂಗಳುಗಳಿಂದ ಬಾಲಕಿಯನ್ನು ನೆರೆಮನೆಯಾತ ಅಬ್ಕಿತ್‌ಕುಮಾರ್ ಎಂಬುವವನು ಹಿಂಬಾಲಿಸುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಂಗಳವಾರ ಸಂಜೆ ಬಾಲಕಿ ಮತ್ತು ಆಕೆಯ ಇಬ್ಬರು ಕಿರಿಯ ಸಹೋದರರನ್ನು ಬಿಟ್ಟು ಆಕೆಯ ತಂದೆತಾಯಿ ಕೆಲಸದ ನಿಮಿತ್ತ ಹೊರಗೆ ಹೋಗಿದ್ದರು. ಈ ಸಮಯದಲ್ಲಿ ಅಬ್ಕಿತ್, ಬಾಲಕಿಯ ಮನೆಗೆ ನುಗ್ಗಿ ಆಕೆಗೆ ಕಿರುಕುಳ ನೀಡಲು ಯತ್ನಿಸಿದ್ದಾನೆ. ಕಿರುಕುಳವನ್ನು ವಿರೋಧಿಸಿದ ಬಾಲಕಿ ಸಹಾಯಕ್ಕಾಗಿ ಕೂಗಿಕೊಂಡಿದ್ದಾಳೆ. ಪ್ರತಿರೋಧದಿಂದ ಕುಪಿತಗೊಂಡ ಆರೋಪಿ ಬಾಲಕಿಯ ಮೇಲೆ ಡೀಸೆಲ್ ಸುರಿದು ಬೆಂಕಿ ಹಚ್ಚಿದ್ದಾನೆ.

‘ಸುಟ್ಟಗಾಯಗಳಿಂದ ಬಳಲುತ್ತಿದ್ದ ಬಾಲಕಿಯನ್ನು ಸ್ಥಳೀಯರು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು. ಆರೋಗ್ಯ ಸ್ಥಿತಿ ಹದಗೆಟ್ಟ ಬಳಿಕ ವಿಶೇಷ ವೈದ್ಯಕೀಯ ಕೇಂದ್ರಕ್ಕೆ ಆಕೆಯನ್ನು ಸ್ಥಳಾಂತರಿಸಲಾಯಿತು. ತೀವ್ರ ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಬಾಲಕಿಯು ಬುಧವಾರ ಬೆಳಿಗ್ಗೆ ಮೃತಪಟ್ಟಿದ್ದಾಳೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೃತ್ಯ ಎಸಗಿ, ಸ್ಥಳದಿಂದ ಪರಾರಿಯಾಗಿದ್ದ ಆರೋಪಿಯನ್ನು ಬಳಿಕ ಪೊಲೀಸರು ಬಂಧಿಸಿದ್ದಾರೆ. ‘ಬಾಲಕಿಯ ಕಿರಿಯ ಸಹೋದರರಿಬ್ಬರ ಹೇಳಿಕೆಯ ಆಧಾರದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಬಗ್ಗೆ ಪ್ರತಿಕ್ರಿಯಿಸಿರುವ ವಿರೋಧಪಕ್ಷಗಳ ನಾಯಕರು ‘ಉತ್ತರಪ್ರದೇಶದಲ್ಲಿ ಮಹಿಳೆಯರು ಸುರಕ್ಷಿತವಾಗಿಲ್ಲ’ ಎಂದು ಆರೋಪಿಸಿದ್ದಾರೆ.

‘ಈ ಸರ್ಕಾರವು ನಕಲಿ ಎನ್‌ಕೌಂಟರ್‌ಗಳನ್ನು ಮಾಡುವುದರಲ್ಲೇ ನಿರತವಾಗಿದೆ. ಸಾಮಾನ್ಯ ಜನರು ಇಲ್ಲಿ ಸುರಕ್ಷಿತವಾಗಿಲ್ಲ’ ಎಂದು ಸಮಾಜವಾದಿ ಪಕ್ಷದ ಮುಖಂಡರು ದೂರಿದ್ದಾರೆ.

ನಾಗರಹೊಳೆ: ರಾಷ್ಟ್ರೀಯ ಆನೆ ಗಣತಿಗೆ ಚಾಲನೆ

ಹುಣಸೂರು (ಮೈಸೂರು): ‘648 ಚದರ ಕಿ.ಮೀ. ವ್ಯಾಪ್ತಿಯಲ್ಲಿರುವ ನಾಗರಹೊಳೆ ಅರಣ್ಯದಲ್ಲಿ ರಾಷ್ಟ್ರೀಯ ಆನೆ ಗಣತಿ ಬುಧವಾರ ಆರಂಭವಾಗಿದ್ದು, ಮೂರು ದಿನ 500 ಚದರ ಕಿ.ಮೀ ವ್ಯಾಪ್ತಿಯಲ್ಲಿ ಗಣತಿ ನಡೆಯಲಿದೆ’ ಎಂದು ಹುಲಿ ಯೋಜನೆ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ತಿಳಿಸಿದರು.

‘ನಾಗರಹೊಳೆ ಅರಣ್ಯ ಸೇರಿ ಬಂಡೀಪುರ, ಬಿ.ಆರ್.ಹಿಲ್ಸ್ ಸೇರಿ ಪ್ರತಿ ರಾಷ್ಟ್ರೀಯ ಉದ್ಯಾನದಲ್ಲಿ 5 ವರ್ಷಕ್ಕೊಮ್ಮೆ ಆನೆ ಗಣತಿ ನಡೆಯುತ್ತದೆ. 2017ರಲ್ಲಿ ನಡೆದ ಗಣತಿಯಲ್ಲಿ ರಾಜ್ಯ ದಲ್ಲಿ 6,049 ಆನೆಗಳಿರುವುದು ದಾಖಲಾಗಿತ್ತು’ ಎಂದರು.

‘ನಾಗರಹೊಳೆಯ 91 ಗಸ್ತುಗಳಲ್ಲಿ ನಡೆಯುವ ಗಣತಿ ಕಾರ್ಯದಲ್ಲಿ ಹುಲಿ ಯೋಜನೆಗೆ ಸೇರಿದ ಇಲಾಖೆಯ 300 ಸಿಬ್ಬಂದಿ ಭಾಗವಹಿಸುತ್ತಿದ್ದು, ತರಬೇತಿ ನೀಡಲಾಗಿದೆ. ಈ ಬಾರಿ ಸ್ವಯಂ ಸೇವಕರನ್ನು ನಿಯೋಜಿಸಿಲ್ಲ’ ಎಂದು ಹೇಳಿದರು.

‘ಖಾಸಗಿ ಜಮೀನು ಸ್ವಾಧೀನಕ್ಕೆ ಕೋರ್ಟ್ ಆದೇಶಿಸಲಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿಯವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಂತೆ ಕೋರ್ಟ್ ಭೂಸ್ವಾಧೀನ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು ಆಗದು’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬೆಳಗಾವಿ ಜಿಲ್ಲೆ ಹುಕ್ಕೇರಿಯ ಐವರು ಕೃಷಿಕರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಆರ್. ದೇವದಾಸ್ ಮತ್ತು ಕೆ.ರಾಜೇಶ್ ರೈ ಅವರಿದ್ದ ವಿಭಾಗೀಯ ನ್ಯಾಯಪೀಠವು ಈ ಕುರಿತಂತೆ ಸ್ಪಷ್ಟಪಡಿಸಿದೆ.

ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗುತ್ತಿರುವ ತಮ್ಮ ಜಮೀನು ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ರೈತರು ಈ ಹಿಂದೆ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ರೈತರ ಮನವಿಗೆ ಸಂಬಂಧಿಸಿದಂತೆ ಸೂಕ್ತಕ್ರಮ ಜರುಗಿಸಬೇಕು. ಈ ಕುರಿತು ನಾಲ್ಕು ವಾರಗಳಲ್ಲಿ ಸೂಕ್ತ ಆದೇಶ ಹೊರಡಿಸಬೇಕು ಎಂದು ಕಾವೇರಿ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಮತ್ತು ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ನಿರ್ದೇಶಿಸಿತ್ತು.

ಸರ್ಕಾರಿ ಪ್ರಾಧಿಕಾರಗಳು ಹೈಕೋರ್ಟ್‌ನ ಆದೇಶ ಪಾಲಿಸಿಲ್ಲ ಎಂದು ಆಕ್ಷೇಪಿಸಿದ್ದ ಅರ್ಜಿದಾರ ರೈತರು ಹೈಕೋರ್ಟ್‌ಗೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ವಿಭಾಗೀಯ ನ್ಯಾಯಪೀಠ, ‘ಜಮೀನು ಸ್ವಾಧೀನ ಪಡಿಸಿಕೊಳ್ಳುವಂತೆ ನ್ಯಾಯಾಲಯಗಳು ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್‌ನ ಸ್ಪಷ್ಟ ತೀರ್ಪುಗಳಿವೆ’ ಎಂದು ಅರ್ಜಿ ವಿಲೇವಾರಿ ಮಾಡಿದೆ.

ಹೆಲ್ಮೆಟ್ ಇಲ್ಲದೆ ಅಮಿತಾಬ್, ಅನುಷ್ಕಾ ಜತೆ ಸಂಚಾರ: ದಂಡ

ಮುಂಬೈ (ಪಿಟಿಐ): ನಟ ಅಮಿತಾಬ್ ಬಚ್ಚನ್ ಹಾಗೂ ನಟಿ ಅನುಷ್ಕಾ ಶರ್ಮಾ ಅವರು ಹೆಲ್ಮೆಟ್ ಧರಿಸದೇ ಬೈಕ್‌ನಲ್ಲಿ ಸಂಚಾರ ಮಾಡಿದ್ದು ಇತ್ತೀಚೆಗೆ ಹೆಚ್ಚು ಸದ್ದು ಮಾಡಿತ್ತು. ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕಾಗಿ ನಟರನ್ನು ಕೂರಿಸಿಕೊಂಡಿದ್ದ ವಾಹನ ಸವಾರರಿಗೆ ಈಗ ಮುಂಬೈ ಪೊಲೀಸರು ದಂಡ ವಿಧಿಸಿದ್ದಾರೆ.

ಈ ಸಂಬಂಧ ಇಬ್ಬರೂ ನಟರ ಫೋಟೊ, ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ನಟರ ಈ ಕ್ರಮವನ್ನು ಟೀಕಿಸಿದ್ದ ನೆಟ್ಟಿಗರು, ಅವರ ಫೋಟೊ, ವಿಡಿಯೊಗಳನ್ನು ಮುಂಬೈ ಪೊಲೀಸರ ಟ್ವಿಟ್ಟರ್ ಖಾತೆಗೆ ಟ್ಯಾಗ್ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಕ್ರಮ ಕೈಗೊಂಡಿರುವ ಪೊಲೀಸರು ಕಾನೂನು ಪಾಲಿಸದಿದ್ದಕ್ಕೆ, ನಟರನ್ನು ಕೂರಿಸಿಕೊಂಡಿದ್ದ ಸವಾರರಿಗೆ ದಂಡ ವಿಧಿಸಿದ್ದಾರೆ. ದಂಡ ವಿಧಿಸಿದ ಚಲನ್ ಅನ್ನೂ ಪೊಲೀಸರು ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಮೋಟಾರು ವಾಹನ ಕಾಯ್ದೆ ಅಡಿ ಸೆಕ್ಷನ್ 129/194 (ಡಿ), ಸೆಕ್ಷನ್ 5/180 ಹಾಗೂ ಸೆಕ್ಷನ್ 3(1)181 ಅಡಿಯಲ್ಲಿ ಅನುಷ್ಕಾ ಶರ್ಮಾ ಅವರನ್ನು ಕೂರಿಸಿಕೊಂಡಿದ್ದ ಸವಾರನಿಗೆ ₹10,500 ದಂಡವನ್ನು ವಿಧಿಸಲಾಗಿದೆ. ಸವಾರನು ಈ ದಂಡವನ್ನು ಪಾವತಿ ಮಾಡಿದ್ದು, ಈ ಕುರಿತೂ ಪೊಲೀಸರು ಮಾಹಿತಿ ಹಂಚಿಕೊಂಡಿದ್ದಾರೆ. ‘ಅಮಿತಾಬ್ ಅವರನ್ನು ಕೂರಿಸಿಕೊಂಡಿದ್ದ ಸವಾರನಿಗೆ ಮೋಟಾರು ವಾಹನ ಕಾಯ್ದೆಯ ಸೆಕ್ಷನ್ 129/194 (ಡಿ) ಅಡಿಯಲ್ಲಿ ₹1,000 ದಂಡ ವಿಧಿಸಲಾಗಿತ್ತು. ಈ ಹಣವನ್ನು ಸವಾರ ಪಾವತಿಸಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಎಲ್ ನಿನೊ’ ಪರಿಣಾಮ: ವಿಶ್ವ ಹವಾಮಾನ ಸಂಸ್ಥೆಯ ಹೇಳಿಕೆ

ಮುಂದಿನ 5 ವರ್ಷಗಳಲ್ಲಿ ತಾಪಮಾನ ಹೆಚ್ಚಳ

ಜಿನಿವಾ (ಎಎಫ್‌ಪಿ): ಮುಂದಿನ ಐದು ವರ್ಷಗಳು ಬಹುತೇಕ ಹೆಚ್ಚು ತಾಪಮಾನದಿಂದ ಕೂಡಿರಲಿವೆ ಇದೆ ಎಂದು ವಿಶ್ವ ಸಂಸ್ಥೆ ಬುಧವಾರ ಎಚ್ಚರಿಸಿದೆ.

‘ಎಲ್ ನಿನೊ’ ಹಾಗೂ ಹಸಿರುಮನೆ ಅನಿಲಗಳು ವಾತಾವರಣದ ತಾಪಮಾನ ಹೆಚ್ಚಳವಾಗಲು ಕಾರಣವಾಗಲಿವೆ ಎಂದು ವಿಶ್ವಸಂಸ್ಥೆಯ ವಿಶ್ವ ಹವಾಮಾನ ಸಂಸ್ಥೆ ಹೇಳಿದೆ.

2015ರಿಂದ 2022ರ ವರೆಗಿನ 8 ವರ್ಷಗಳು ಅಧಿಕ ಉಷ್ಣಾಂಶದಿಂದ ಕೂಡಿದ್ದವು ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಈಗ, ಹವಾಮಾನ ಬದಲಾವಣೆಯೂ ತೀವ್ರಗೊಳ್ಳುತ್ತಿರುವ ಕಾರಣ ಬರುವ ದಿನಗಳಲ್ಲಿ ಜಾಗತಿಕ ತಾಪಮಾನ ಹೆಚ್ಚಾಗಲಿದೆ ಎಂದು ಸಂಸ್ಥೆ ಹೇಳಿದೆ.

‘ಪ್ಯಾರಿಸ್ ಹವಾಮಾನ ಒಪ್ಪಂದ’ದಲ್ಲಿ ನಿಗದಿಪಡಿಸಿರುವ ಗುರಿಯನ್ನು ಮೀರಿ ಜಾಗತಿಕ ತಾಪಮಾನ ಹೆಚ್ಚಲಿದೆ. ಅಲ್ಲದೇ, ಮುಂದಿನ ಐದು ವರ್ಷಗಳ ಪೈಕಿ ಯಾವುದಾದರು ಒಂದು ವರ್ಷದಲ್ಲಿ ಉಷ್ಣಾಂಶವು ಅಧಿಕವಾಗಿರುವ ಸಾಧ್ಯತೆ ಹೆಚ್ಚಾಗಿದೆ ಎಂದು ಹೇಳಿದೆ.

2015ರ ‘ಪ್ಯಾರಿಸ್ ಒಪ್ಪಂದ’ದಲ್ಲಿ ಹೇಳಿರುವಂತೆ ಜಾಗತಿಕ ತಾಪಮಾನವನ್ನು 1850ರಿಂದ 1900ರವರೆಗಿನ ಅವಧಿಯಲ್ಲಿ ದಾಖಲಾದ ತಾಪಮಾನದ ಸರಾಸರಿಗಿಂತ ಎರಡು ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಮಾಡುವ ಗುರಿ ನಿಗದಿಪಡಿಸಲಾಗಿದೆ. ಇಷ್ಟಾಗದಿದ್ದರೂ, ಕನಿಷ್ಠ ಪಕ್ಷ 1.5 ಡಿಗ್ರಿ ಸೆಲ್ಸಿಯಸ್‌ನಷ್ಟಾದರೂ ಕಡಿಮೆ ಮಾಡಬೇಕು ಎಂಬ ಆಶಯ ಹೊಂದಿದೆ. ಆದರೆ, ದತ್ತಾಂಶಗಳ ಪ್ರಕಾರ, ಕಳೆದ ವರ್ಷ ಜಾಗತಿಕ ತಾಪಮಾನವು 1850–1900 ಅವಧಿಯ ಸರಾಸರಿಗಿಂತ 1.15 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ದಾಖಲಾಗಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Farm House/ Land/ Resorts

Multiple Locations

NANDI HILLS rd ready2occupy 1/2 acre 20k builtup furnished 15 AC rooms resto cafe 9Cr Ph 7019346409

PUBLIC NOTICE

PUBLIC NOTICE
My clients Viz, **Veeranagowda Rudragowda Patil** and **Sharanagowda Rudragowda Patil** are intending to purchase the Schedule Property from legal heirs of Late K.H. Vishalamma Viz, 1) Smt. V.C. Champa W/o. Late D.P. Raghunath, 2)Smt. D.P. Indira3) Smt. Lokeshwari W/o. Late D.P. Ramesh, Legal heirs of late K.H. Susheelamma Viz., 1) Smt. Shobha Natarajan W/o. Late V.S. Natarajan and 2) Smt. V.S. Chandrika, and Smt. K.H. Kathyayini, and Legal heirs of Smt. Late K. H. Vijayabharathi 1) Sri. S. Jayanna, 2) Smt. J.Shilpa, 3) Mr. Sharath Kumar Jayanna, to be the owners of the Schedule Property are agreed to sell the same in favour of my clients. Therefore, any person/s, Financial Institutions, Co-Parcener of the owners, L.Rs., or any other person/s interested in the Schedule Property or opposing the sale of the Schedule Property to my clients in any manner whatsoever shall submit their written objections to the undersigned along with the supporting documents within 15 days from the date of publication hereof. Any objections received subsequently shall not consider and my clients will proceed with the sale.
SCHEDULE PROPERTY
All that piece and parcel of residential site No. 30 bearing (a) PID No. 77-88-94 (Old No. 30) E-Property registered No. 1642701 measuring 5340 Sq.ft., with a building on the ground floor having plinth area of 2150 sq.ft, and (b) building on the first floor having PID No. 77-88-95 (Old No.30/A) E-Property registered No. 1642702 measuring super built up area of 1200 sq.ft, situated at 9th Cross, Railway Parallel Road, First Block, Kumara Park West, Bengaluru-560020 and bounded by:
East by :Railway Parallel Road
West by :Property Sharath KumarJayanna
North by :9th Cross Road
South by :Property Tallam Nanjundaiah Shetty
Sd/- **Yashvanth Sajjanagoudar**
Advocate
#522, 1st Floor, 10th Main, M.C. Layout, Vijayanagar, Bengaluru-44
Mob: 9916291794
Email: yashu309@gmail.com

ನೋಟಿಸ್
ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ಟ್ರಿಬ್ಯೂನಲ್
ಹೈದರಾಬಾದ್ ಬೆಂಚ್–1 ಹೈದರಾಬಾದ್.
ಸಿ.ಪಿ. (IB) ಸಂ. 87/95/HDB/2023 (U/s. IBC ಯ 95, 2016)
ಈ ವಿಷಯದಲ್ಲಿ:–
ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (ನಬಾರ್ಡ್), ನಬಾರ್ಡ್ ಟವರ್, 46 ರಲ್ಲಿ ಅದರ ಕರ್ನಾಟಕ ಪ್ರಾದೇಶಿಕ ಕಚೇರಿಯನ್ನು ಹೊಂದಿದೆ, ಕೆಂಪೇಗೌಡ ರಸ್ತೆ, P.B ನಂ.9944, ಬೆಂಗಳೂರು–560 009
...ಹಣಕಾಸು ಸಾಲಗಾರ/ಅರ್ಜಿದಾರ
ಮತ್ತು
ಶ್ರೀಮತಿಎಂ.ಎನ್.ಜಯಲಕ್ಷ್ಮಿ, W/o ದಿವಂಗತ ಶ್ರೀ. ಎಂ.ಡಿ.ರಾಮ ಶೆಟ್ಟಿ, R/o. 1102, 4ನೇ ಕ್ರಾಸ್, 4ನೇ ಮುಖ್ಯ, 4ನೇ ಹಂತ, BEML ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು–560098 ಕರ್ನಾಟಕ ರಾಜ್ಯ.
(M/s. ಸ್ಮಾರ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವಿಷಯದಲ್ಲಿ)
...ವೈಯಕ್ತಿಕ ಖಾತರಿದಾರ/ಪ್ರತಿವಾದಿ
ಗೆ, ಶ್ರೀಮತಿ. ಎಂ.ಎನ್.ಜಯಲಕ್ಷ್ಮೀ, W/o ದಿವಂಗತ ಶ್ರೀ. ಎಂ.ಡಿ. ರಾಮ ಶೆಟ್ಟಿ, R/o. 1102, 4 ನೇ ಕ್ರಾಸ್, 4 ನೇ ಮುಖ್ಯ, 4 ನೇ ಹಂತ, BEML ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು–560098 ಕರ್ನಾಟಕ ರಾಜ್ಯ.
ಮೇಲೆ ಹೆಸರಿಸಲಾದ ಹಣಕಾಸು ಸಾಲಗಾರರು/ಅರ್ಜಿದಾರರು ಅಂದರೆ NABARD, ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ, ಹೈದರಾಬಾದ್ ಬೆಂಚ್ -I, ಹೈದರಾಬಾದ್, ಸೆಕ್ಷನ್ 95ರ ದಿವಾಳಿ ಮತ್ತು ದಿವಾಳಿತನ ನೀತಿ 2016 ಪ್ರಕಾರ (ನೀವು M/s. ಸ್ಮಾರ್ಟ್ ಇಂಡಿಯ ಪ್ರೈವೇಟ್ ಲಿಮಿಟಡ್ ಪಡೆದ ಸಾಲದ ಮೊತ್ತಕ್ಕೆ ವೈಯಕ್ತಿಕ ಖಾತರಿದಾರರಾಗಿ ನಿಂತಿರುವುದರಿಂದ) ನಿಮ್ಮ ವಿರುದ್ಧ ಮೇಲೆ ತಿಳಿಸಿದ ಕಂಪನಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂಬುದನ್ನು ದಯವಿಟ್ಟು ಗಮನಿಸಿ. ದಿನಾಂಕ 06–03–2023 ರಂದು ಗೌರವಾನ್ವಿತ ನ್ಯಾಯ ಮಂಡಳಿಯ ನಿರ್ದೇಶನಗಳ ಪ್ರಕಾರ, ನಿಮಗೆ ಕಳುಹಿಸಲಾದ ನೋಟಿಸ್ ಯಾವುದೇ ರೀತಿಯ ಸಹಕಾರ ಪೂರೈಸದೆ ಹಿಂತಿರುಗಿಸಲಾಗಿದೆ, ಅದರಂತೆ 27–03–2023 ರಂದು ಗೌರವಾನ್ವಿತ ನ್ಯಾಯ ಮಂಡಳಿಯು ಹಣಕಾಸಿನ ಸಾಲಗಾರ/ ಅರ್ಜಿದಾರರಿಗೆ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಣೆಯ ವಿಧಾನ ಕೈಗೊಂಡು ಆ ಮೂಲಕ ನಿಮಗೆ ನೋಟಿಸ್ ಕೊಡುವಂತೆ ನಿರ್ದೇಶಿಸಿತು ಮತ್ತು ನೀವು ಮೇಲೆ ಹೇಳಿದ ಗೌರವಾನ್ವಿತ ನ್ಯಾಯ ಮಂಡಳಿಯ ಮುಂದೆ ಹಾಜರಾಗಲು ಸದರಿ ವಿಷಯವನ್ನು 22–05–2023 ಕ್ಕೆ ಮುಂದೂಡಿದೆ.
ಆದ್ದರಿಂದ ನೀವು ಈ ಮೂಲಕ 22–05–2023 ರಂದು ಬೆಳಿಗ್ಗೆ 10.30 ಗಂಟೆಗೆ ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕ ಸದರಿ ಗೌರವಾನ್ವಿತ ನ್ಯಾಯಮಂಡಳಿಯ ಮುಂದೆ ಹಾಜರಾಗಬೇಕಾಗುತ್ತದೆ ಇಲ್ಲದಿದ್ದರೆ ಕಾನೂನಿನ ಪ್ರಕಾರ ನಿಮ್ಮ ಅನುಪಸ್ಥಿತಿಯಲ್ಲಿ ವಿಷಯವನ್ನು ನಿರ್ಧರಿಸಲಾಗುತ್ತದೆ.
(ಟ್ರಿಬ್ಯೂನಲ್‌ನ ಆದೇಶದ ಮೇರೆಗೆ)
ಸಹಿ/––ಬಿ.ಹರಿನಾಥ ರಾವ್, ಎನ್.ಶ್ರೀದೇವಿ ವಕೀಲರು,
ಫ್ಲಾಟ್ ಸಂಖ್ಯೆ 620, H. ನಂ. 16–11–22/A,ಜ್ಞಾನದೀಪ್ ಟವರ್ಸ್, ಮೋರ್ ಸೂಪರ್ ಮಾರ್ಕೆಟ್,ಮೂಸರಂಗ ಬಾಗ್, ಮಲಕ್‌ಪೇಟ್, ಹೈದರಾಬಾದ್–500 036 (T S.)
ಮೊಬೈಲ್. ಸಂ. 9849888058

PUBLIC NOTICE
Public are hereby notified that my client negotiating to purchase all that property described in the Schedule herein from **Sri. K.N. Subba Reddy S/o. Late Nanja Reddy and Sri. Vivek S Reddy S/o. Sri. K.N. Subba Reddy,** who claims to be the owners of the **Schedule Property.**
ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of said Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien, attachment, development rights, right of way, lispendens, reservation, agreement, FSI consumption, development rights, or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at **LEXSITUS**, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bengaluru – 560102 or call to: 080-22583563, 080-25723339 or Email: info@lexsitus.com within a period of **7 (Seven) days** from the date of publication of this notice, failing which, the claim or claims, if any, of such person or persons shall be considered to have been waived and/or abandoned.
SCHEDULE PROPERTY
ALL THAT PIECE AND PARCEL OF THE land bearing Sy.No.49/1 measuring 3 Acres 18 Guntas, situated at Hullukasavanahalli Village, Jigani Hobli, Anekal Taluk, Bengaluru Urban District and bounded on the;
East by : Land bearing Survey No.45; **West by :** Land bearing Survey No.49/2; **North by**: Land bearing Survey No.44; and **South by**: Road.
ROOPA SHETTY
Advocate
Lex Situs, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bengaluru - 560102. Phone: 080-22583563, 080-25723339, 9902026199; Email:info@lexsitus.com

EDUCATION CORNER
ಕ್ಲಾಸಿಫೈಡ್ಸ್

BHARATH EDUCATION SOCIETY ®
B.E.S. DEGREE COLLEGE
IV Block, Jayanagar, Bengaluru - 560011
✆ 080 - 2663 7295 / 96862 33913
Affiliated to Bengaluru City University - NAAC Accredited



Sri B.L. Lakkegowda
Founder,
B.E.S. Institutions

SHAPE YOUR CAREER WITH INTEGRATED SKILL ENHANCEMENT PROGRAMMES

Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

ADMISSION OPEN FOR DEGREE COURSE-2023-24
B.Com | B.B.A. | B.C.A.
B.A.: HEP | HES | HEK
Languages: English, Kannada, Hindi & Sanskrit
As per Bengaluru City University Syllabus

Nirmal Kumar K.R., President, Bharath Education Society
Prof N.S. Vijaya, Vice President, Bharath Education Society
Sri M. Krishna Das, Secretary, Bharath Education Society
Dr. Nishath Nahida Khanum, Principal, BES Degree College

Website: www.besinstitutions.edu.in Email : besddcol@yahoo.co.in
GIRLS HOSTEL FACILITIES AVAILABLE
BES-23404

BUSINESS

WANTED BUSINESS PARTNERS GREEN HERBAL AYURVEDIC PRODUCTS, 10 LAKHS INVESTMENT ATTRACTIVE INCOME CONTACT: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

JOB OPPORTUNITIES

Teachers/ Professors

BRIGHT WAY SCHOOL TEACHERS REQUIRED: MATHS- (B.Sc/M.Sc,B.Ed), ENGLISH- (B.A/M.A, B.Ed), COMPUTER- (BCA/MCA) & YOGA TRAINED TEACHER Ph:9241204762/ 26396720 brightways.school @yahoo.in BRIGHT WAY PU COLLEGE HISTORY- M.A/B.Ed. Ph:9483494468/ 26665388 bwpucas559 @yahoo.in. Interview on:19.05.2023 at 10.00 am

WANTED EXPERIENCED HM and Academic co-ordinator,High School Social and English Teacher.SRI SHANTINIKETAN SCHOOL,Uttarahalli. Contact:9008709749

ASTRO YATRA

ಓಂ ಶ್ರೀ ಸಾಯಿದುರ್ಗಾ ಜ್ಯೋತಿಷ್ಯ ಕೇಂದ್ರ
ಪಂಡಿತ್
ಶ್ರೀ ರಾಮ್ ಭಟ್

ವಿದ್ಯೆ-ಉದ್ಯೋಗ,ಪ್ರೀತಿ-ಪ್ರೇಮ, ವ್ಯಾಪಾರ ಲಾಭ-ನಷ್ಟ, ಶತ್ರುಕಾಟ, ರಾಜಕೀಯ, ಆರೋಗ್ಯ, ಶಿಕ್ಷಣ, ವಿಚ್ಛೇದನ, ವಿದೇಶ ಪ್ರಯಾಣ, ಹಣಕಾಸು, ಮಕ್ಕಳ ಸಮಸ್ಯೆ, ಕೋರ್ಟ್ ಕೇಸ್, ಪ್ರಾಪರ್ಟಿ, ಮನೆಫ್ಯಾಕ್ಟರಿಗೆ ವಾಸ್ತು ದೋಷ, ಮಾನಸಿಕ ಸಮಸ್ಯೆ, ಮದುವೆ, ಸಂತಾನದಲ್ಲಿ ವಿಳಂಬ, ಸ್ತ್ರೀಪ್ರೇಮ, ಸ್ತ್ರೀ-ಪುರುಷ ವಶೀಕರಣ, ಸ್ತ್ರೀ-ಪುರುಷ ಗುಪ್ತ ಸಮಸ್ಯೆ, ಶತ್ರುಕಾಟ, ಮಾಟ-ಮಂತ್ರ ವಶೀಕರಣ, ದುಷ್ಟಶಕ್ತಿ, ಭೂತಚೇಷ್ಟೆ ನಿವಾರಣೆ ಹಾಗು ನಿಮ್ಮ ಯಾವುದೇ ಸಮಸ್ಯೆ ಇದ್ದರೂ ಯಂತ್ರ-ಮಂತ್ರ ಹಾಗೂ ಕೇರಳದ ಗುಪ್ತ ವಿದ್ಯೆಯಿಂದ 11 ದಿನದಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ. ಫೋನಿನ ಮೂಲಕ ಉತ್ತಮ ಸಲಹೆ ಶಾಶ್ವತ ಪರಿಹಾರ.
ವಿಳಾಸ: ನಂ.747, ಚಿನ್ಮಯ್ ಆಸ್ಪತ್ರೆ ಹತ್ತಿರ, ಕೃಷ್ಣ ದೇವಸ್ಥಾನದ ಹಿಂಭಾಗ ಇಂದಿರಾನಗರ, ಬೆಂಗಳೂರು-560038 ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ
ಸಮಯ: ಬೆಳಿಗ್ಗೆ 9 ರಿಂದ ರಾತ್ರಿ 8 ರವರೆಗೆ ಸಂಪರ್ಕಿಸಿ: 9880403406

General

BOOKING EXECUTIVE required to manage corporate cab bookings. WhatsApp CV to 9019043325. Work from Home/ KR Puram. Salary: 16k- 24k. Good English communication.

Marketing & Sales

WANTED SALES Executive for Mumbai Based Solvent Cement Company.Salary 40-50 thousand .Call 7498911130

Wanted

WANTED STAFF For Sales/ Service. Freshers are Welcome walk in Interview Raj & Roy Agencies 26, Padma Nivas Lazar Layout Frazer Town B-5

PERSONAL

Change of Name

CHANGE OF NAME
I, **SHREE KULKARNI** Residing at No. 200, Lakshmeesha, 2nd Main, AMS Layout, Vidyaranyapura, Bengaluru- 560097, have changed my name to **MADHU YALAGURESH JORAPUR** vide affidavit dated 17.05.2023, before S.R.Ravikumar, Bengaluru. Henceforth I shall be called **MADHU YALAGURESH JORAPUR** only.

I, **ROOPA** MAHESH W/o M.A Mahesh, R/o at No. 71, 16th A Main, Koramangala 4th B-Block, Bangalore- 560034, have Changed my name from ROOPA MAHESH to ROOPA EADALA CHANDRASHEKAR vide affidavit dated: 17/05/2023 sworn before notary B.M Chandrashekar, Bangalore.

WE, **SYED** IMTIYAZ and AYESHA BEGUM have changed our Daughter Name From ARSHYA FATHIMA IMTHIAZ to ARSHIYA FATHIMA vide affidavit dated: 17/5/2023 Before Notary Manohar Jeerige Bangalore.

CHANGE OF NAME
I, **THEJAS PANTHARAPALYA VENKATESH** Residing at, No. 115, Basaveshware Layout, Rajarajeshwari Nagar, Bengaluru-560098 have changed my name to **TEJAS PANTHARAPALYA VENKATESH** vide affidavit dated 16th May 2023 before notary S.R. Thulasikrishna, Bengaluru

I, **SAMBHAV** Vora, S/o. Dharmesh Vora have changed my name to Sambhav D Vora vide Affidavit dated 17.05.2023 Sworn before Notary L Veena

CHANGE OF NAME
I, **KAMALJEET SINGH JAGGI** S/o. Balbir Singh R/at. No-A-707, Ananda Bairavi Aprt. Hennur Main Road, Blr-84. have changed my name from **KAMALJEET SINGH** to **KAMALJEET SINGH JAGGI** vide affidavit dated 17/05/2023 before notary Uday Kumar. K., Bengaluru.

WE, 1)SARATH Mohan S/o.Mohanan Kadumayil, 2)Deepthi K.B W/o.Sarath Mohan Both are R/at #02, Deccan Pride-01 RPC Layout Service Road Vijayanagar Bengaluru-560104 Have Changed Our Minor Daughter's Name From Saanvi.S to Saanvi Sarath Vide Affidavit Dated 16-05-2023 Before Notary Deepa.M Bengaluru

I, **VENNELA** R.M. residing at Medical Store Building, 4th 'A' Cross, College Road, M.V.Extension, Hoskote, Bangalore Rural, have change my name from VENNELA R.M. to DHANYASHREE THILAKARAJAN vide affidavit dated 17.05.2023 before Notary Aravind Patil, Bangalore. Henceforth I shall be called as DHANYASHREE THILAKARAJAN only.

I, **DINESH.** V, Residing at No. 51, 9th Cross, Someshwarnagar, Jayanagar 1st Block, Bangalore-560011, have changed my son's name from BRIJESH ACHAR to BRIJESH D ACHARYA vide affidavit dated 12/04/2023 before notary C.R. Seetharam Mysore City Karnataka.

I, **DINESH.** V, Residing at No. 51, 9th Cross, Someshwarnagar, Jayanagar 1st Block, Bangalore-560011, have changed my son's name from MAYUR ACHAR D to MAYUR D ACHARYA vide affidavit dated 12/04/2023 before notary C.R. Seetharam Mysore City Karnataka.

ಮಣ್ಣಿನ ಮಗ, ನೀರಾವರಿ ಹರಿಕಾರ
ಮಾಜಿ ಪ್ರಧಾನ ಮಂತ್ರಿ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೆಗೌಡರಿಗೆ
ಹುಟ್ಟುಹಬ್ಬದ ಶುಭಾಷಯಗಳು
ಕರ್ನಾಟಕದ ನಾಡ ದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಮತ್ತು ಅವರು ನಂಬಿರುವ ದೇವರ
ಹಾಗೂ ಕರ್ನಾಟಕ ಜನತೆಯ ಆಶೀರ್ವಾದದಿಂದ ಶತಾಯುಷಿಯಾಗಿ
ಈ ದೇಶದ ಮತ್ತು ನಾಡಿನ ಒಳಿತಿಗಾಗಿ ಇನ್ನು ಹೆಚ್ಚಿನ ಮಾರ್ಗದರ್ಶನ
ನೀಡಲು ಈ ದಂಪತಿಗಳು ಶತಾಯುಷಿಗಳಾಗಿ ಬಾಳಿ
ಬದುಕಬೇಕೆಂದು ಕರ್ನಾಟಕದ ಜನತೆ ಶುಭಕೋರೋಣ
91ನೇ ಜನ್ಮದಿನದ ಶುಭಾಷಯಗಳು
ದಿನಾಂಕ :
18-05-2023
ಗುರುವಾರ
ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್.
ಶ್ರೀ ಬಿ. ಎನ್. ಕುಮಾರ್
ಬಸವನಪುರ
ಶುಭಕೋರುವವರು :
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿ.ಬಿ.ಎಂ.ಪಿ, ಮಾಜಿ ಗ್ರಾ. ಪಂ. ಮತ್ತು
ತಾ॥ ಪಂ. ಸದಸ್ಯರು ಉತ್ತರಹಳ್ಳಿ
ವಿಧಾನ ಸಭಾ ಕ್ಷೇತ್ರ
ಮೊ: 9845198845

ಕೆಂಗೇರಿ ಟಿಟಿಎಂಸಿ ಬಸ್ ನಿಲ್ದಾಣ: ಅಪಾಯಕ್ಕೆ ಆಹ್ವಾನ • ಬಿಬಿಎಂಪಿ ನಿರ್ಲಕ್ಷ್ಯ

ಸ್ಕೈವಾಕ್ ಅಪೂರ್ಣ: ಆತಂಕದಲ್ಲೇ ಸಂಚಾರ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಇಲ್ಲಿನ ಟಿಟಿಎಂಸಿ ಬಸ್ ನಿಲ್ದಾಣದ ಬಳಿ ನಿರ್ಮಾಣವಾಗುತ್ತಿರುವ ಸ್ಕೈವಾಕ್ ಕಾಮಗಾರಿ ವಿಳಂಬದಿಂದ ಪಾದಚಾರಿಗಳು ಪ್ರತಿನಿತ್ಯ ಆತಂಕದಲ್ಲೇ ರಸ್ತೆ ದಾಟುವಂತಾಗಿದೆ.

ಬೆಂಗಳೂರು- ಮೈಸೂರು ರಸ್ತೆಯಲ್ಲಿರುವ ಕೆಂಗೇರಿ ಟಿಟಿಎಂಸಿ ಬಸ್ ನಿಲ್ದಾಣ ಹಾಗೂ ಸುತ್ತಮುತ್ತ ಪ್ರದೇಶವು ಬಹುತೇಕ ಜನ ಜಂಗುಳಿಯಿಂದ ಕೂಡಿದೆ.

ಮೆಟ್ರೊ ಸ್ಟೇಷನ್ ಕೂಡ ಇಲ್ಲಿಯೇ ಇದೆ. ರಾತ್ರಿ 10ರವರೆಗೂ ಜನರ ಓಡಾಟ ನಿರಂತರವಾಗಿರುತ್ತದೆ. ಸಾವಿರಾರು ಜನರು ರಸ್ತೆಯ ಒಂದು ಬದಿಯಿಂದ ಮತ್ತೊಂದು ಕಡೆಗೆ ಸಾಗುವುದು ಸಾಮಾನ್ಯವಾಗಿದೆ.

ಎರಡು ವರ್ಷಗಳ ಹಿಂದೆ ಪಾದಚಾರಿಗಳ ಸುರಕ್ಷತೆಗಾಗಿ ಬಿಬಿಎಂಪಿಯ ಟ್ರಾಫಿಕ್ ಎಂಜಿನಿಯರಿಂಗ್ ವಿಭಾಗದ(ಟಿಇಸಿ) ವತಿಯಿಂದ ಸ್ಕೈವಾಕ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. ಆದರೆ, ಇದುವರೆಗೂ ಸ್ಕೈವಾಕ್ ಕಾಮಗಾರಿ ಪೂರ್ಣಗೊಂಡಿಲ್ಲ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅದರಂತೆ ಬೆಂಗಳೂರು ಮೈಸೂರು ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆಯಲ್ಲೂ ಗಣನೀಯ ಹೆಚ್ಚಳವಾಗುತ್ತಿದೆ. ಈ ಒತ್ತಡದ ನಡುವೆ ಪಾದಚಾರಿಗಳು ಜೀವ ಕೈ ಹಿಡಿದು ರಸ್ತೆ ದಾಟುವ ಪರಿಸ್ಥಿತಿ ಸೃಷ್ಟಿಯಾಗಿದೆ.

ಲಿಫ್ಟ್ ಕಾಮಗಾರಿ ಅಪೂರ್ಣ: ಮೈಸೂರಿನಿಂದ ಬೆಂಗಳೂರು ಕಡೆಗೆ ಸಾಗುವ ದಿಕ್ಕಿನಲ್ಲಿ ನಿರ್ಮಿಸುತ್ತಿರುವ ಸ್ಕೈವಾಕ್ ಅಪೂರ್ಣವಾಗಿದ್ದರೂ ಬಳಸಬಹುದಾಗಿದೆ. ಮೆಟ್ಟಿಲುಗಳ ಮೂಲಕ ರಸ್ತೆ ದಾಟಲು ಅನುಕೂಲ ಕಲ್ಪಿಸಲಾಗಿದೆ. ಆದರೆ, ಲಿಫ್ಟ್ ಕಾಮಗಾರಿ ಸ್ಥಗಿತಗೊಂಡಿದೆ. 'ಮೆಟ್ಟಿಲು ಹತ್ತಲು ಸಾಧ್ಯವಾಗದೆ ಮುಖ್ಯರಸ್ತೆ ಮುಖಾಂತರ ರಸ್ತೆ ದಾಟುವಂತಾಗಿದೆ' ಎಂದು ಹಿರಿಯ ನಾಗರಿಕ ಕಾಂತರಾಜು ಬೇಸರ ವ್ಯಕ್ತಪಡಿಸಿದರು.

'ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿದರೆ ವೃದ್ಧರು, ಹೆಂಗಸರು ರಸ್ತೆ ದಾಟಲು ಸಹಾಯಕವಾಗಲಿದೆ' ಎಂದು ವಯೋವೃದ್ಧ ರಾಮಣ್ಣ ಹೇಳಿದರು. ಇನ್ನು ಬೆಂಗಳೂರಿನಿಂದ ಮೈಸೂರಿನ ಕಡೆ ತೆರಳುವ ಮೆಟ್ರೊ ಸ್ಟೇಷನ್ ಬದಿಯ ಸ್ಕೈವಾಕ್ ಕಾಮಗಾರಿ ಅಪೂರ್ಣವಾಗಿದೆ. ಕಾಮಗಾರಿಗೆ ಬೇಕಾದ ವಸ್ತುಗಳನ್ನು ರಸ್ತೆ ಬದಿಯಲ್ಲೇ ಹಾಕಲಾಗಿದೆ. ಗುತ್ತಿಗೆದಾರರಿಗೆ ಸಂದಾಯವಾಗಬೇಕಿದ್ದ ಹಣ ಬಿಬಿಎಂಪಿಯಿಂದ ಇನ್ನೂ ಬಿಡುಗಡೆಯಾಗದಿರುವುದೇ ಕಾಮಗಾರಿ ವಿಳಂಬಕ್ಕೆ ಕಾರಣ ಎನ್ನಲಾಗುತ್ತಿದೆ. ಈ ಸಂಬಂಧ ಟಿಇಸಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ (ಎಇಇ) ಹಲವು ಬಾರಿ ಕರೆ ಮಾಡಿದರೂ ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಪೊಲೀಸ್ ನಿಯೋಜನೆಗೊಂಡರೆ ಒಳಿತು: ಟಿಟಿಎಂಸಿ ಬಸ್ ನಿಲ್ದಾಣ ಬಳಿ, ಮುಖ್ಯರಸ್ತೆ ಮೂಲಕವೇ ರಸ್ತೆ ದಾಟುವುದು ಸಾಮಾನ್ಯವಾಗಿದೆ. ವಾಹನ ಚಾಲಕರಿಗೂ ಇದರಿಂದ ಪ್ರತಿನಿತ್ಯ ಕಿರಿಕಿರಿಯಾಗುತ್ತಿದೆ. ಹಲವು ಸಣ್ಣ ಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಜನರ ಜೀವಕ್ಕೆ ಹಾನಿಯಾಗುವ ಮೊದಲೇ ಸ್ಕೈವಾಕ್ ನಿರ್ಮಾಣ ಮಾಡಿದರೆ ಒಳಿತು. ಅಲ್ಲಿಯವರೆಗೆ ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಕೆಂಗೇರಿಯ ಟಿಟಿಎಂಸಿ ಬಸ್ ನಿಲ್ದಾಣದ ಬಳಿಯ ಮುಖ್ಯ ರಸ್ತೆಯಲ್ಲಿ ವಿದ್ಯಾರ್ಥಿಗಳು ದಾಟುತ್ತಿರುವುದು (ಎಡಚಿತ್ರ). ಮುಖ್ಯ ರಸ್ತೆಯಲ್ಲಿ ನಾಗರಿಕರು ದಾಟುತ್ತಿರುವುದು. – ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಈಜಲು ತೆರಳಿದ್ದ ವಿದ್ಯಾರ್ಥಿ ಸಾವು

ಬೆಂಗಳೂರು: ಕೆಂಗೇರಿಯ ಹೊಸಕೆರೆ ಗ್ರಾಮದ ಕೆರೆಯಲ್ಲಿ ಈಜಲು ಹೋಗಿದ್ದ ನಗರದ ನಂದಿನಿ ಲೇಔಟ್ ನಿವಾಸಿ, ಐಟಿಐ ವಿದ್ಯಾರ್ಥಿ ಜಿತೇಂದ್ರ (17) ಮೃತಪಟ್ಟಿದ್ದಾರೆ.

ಸ್ನೇಹಿತರಾದ ಸ್ವರಾಜ್, ವೇಣು, ಸೋಮಶೇಖರ್ ಅವರೊಂದಿಗೆ ಜಿತೇಂದ್ರ ಈಜಲು ತೆರಳಿದ್ದರು. ಆಗ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರ ತಾಲ್ಲೂಕಿನ ವೀರಾಪುರದ ನಾಗಭೂಷಣ್ ಅವರು 9 ವರ್ಷಗಳ ಹಿಂದೆ ನಗರಕ್ಕೆ ಬಂದು ನಂದಿನಿ ಲೇಔಟ್‌ನಲ್ಲಿ ನೆಲೆಸಿದ್ದರು. ಇವರು ಕೂಲಿ ಕೆಲಸ ಮಾಡುತ್ತಿದ್ದರು. ಅವರ ಪುತ್ರ ಜಿತೇಂದ್ರ ನಗರದ ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ವರ್ಷದ ಐಟಿಐ ವ್ಯಾಸಂಗ ಮಾಡುತ್ತಿದ್ದರು. ಕಾಲೇಜಿಗೆ ತೆರಳುವುದಾಗಿ ಹೇಳಿ ಹೊಸಕೆರೆ ಗ್ರಾಮದ ಕೆರೆಯಲ್ಲಿ ಈಜಲು ತೆರಳಿದ್ದರು. ಆಗ ದುರ್ಘಟನೆ ನಡೆದಿದೆ.

ಮಂಗಳವಾರ ಸಂಜೆ ಅಗ್ನಿಶಾಮಕ ಹಾಗೂ ತುರ್ತು ಸೇವಾ ಸಿಬ್ಬಂದಿಗಳು ಮೃತದೇಹಕ್ಕೆ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಬುಧವಾರ ಮತ್ತೆ ಕಾರ್ಯಾಚರಣೆ ನಡೆಸಿ ಮೃತದೇಹವನ್ನು ಹೊರಕ್ಕೆ ತೆಗೆಯಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದರು.

'ಯುವಕರ ದೈಹಿಕ, ಮಾನಸಿಕ ಸದೃಢತೆಗೆ ಕ್ರೀಡೆ ಅಗತ್ಯ'

ಕೆ.ಆರ್.ಪುರ: ಯುವಕರು ಕ್ರೀಡೆಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವುದರಿಂದ ದೇಹದ ಸದೃಢತೆ ಹಾಗೂ ಮನಸ್ಸಿನ ಮೇಲೆ ಒತ್ತಡ ಕಡಿಮೆ ಮಾಡಿಕೊಳ್ಳಬಹುದು ಎಂದು ಗೋಪಾಲನ್ ಸಮೂಹ ವಿದ್ಯಾಸಂಸ್ಥೆಯ ಅಧ್ಯಕ್ಷೆ ಸುನೀತಾ ಪ್ರಭಾಕರ್ ಹೇಳಿದರು.

ಸಮೀಪದ ಹೂಡಿಯ ಗೋಪಾಲನ್ ಸ್ಕೂಲ್ ಆಫ್ ಪ್ಲಾನಿಂಗ್ ಆರ್ಕಿಟೆಕ್ಚರ್ ಕಾಲೇಜಿನಲ್ಲಿ ಉದ್ಯಥಮ್ ಕ್ರೀಡಾ ಉತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸ್ತುತ ವಿದ್ಯಾರ್ಥಿಗಳು ಮೊಬೈಲ್‌ಗೆ ಅವಲಂಬಿತರಾಗಿ ಕ್ರೀಡೆ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಕ್ರೀಡಾ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಬುದ್ಧಿಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು. ಕ್ರೀಡೆ ಆಡುವುದರಿಂದ ದೇಹ, ಮನಸ್ಸು ಸದೃಢಗೊಳ್ಳುವುದರ ಜೊತೆಗೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಹೆಚ್ಚೆಚ್ಚು ಕ್ರೀಡೆಯಲ್ಲಿ ತೊಡಗಿಕೊಳ್ಳಿ ಎಂದು ಹೇಳಿದರು.

ಪ್ರಾಂಶುಪಾಲ ಡಾ.ವಿಮಲಸ್ವಾಮಿ ಇದ್ದರು. ನಗರದ ಹದಿನೆಂಟಕ್ಕೂ ಹೆಚ್ಚು ವಾಸ್ತುಶಿಲ್ಪ ಕಾಲೇಜು ವಿದ್ಯಾರ್ಥಿಗಳು ಕ್ರೀಡಾ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಕ್ರಿಕೆಟ್, ಥ್ರೋಬಾಲ್, ಫುಟ್‌ಬಾಲ್, ಚೆಸ್ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

ಚಿತ್ರಾವಳಿ

ನೆಲಮಂಗಲ ಸಮೀಪದ ಪಿಳ್ಳಹಳ್ಳಿಯಲ್ಲಿರುವ ರೇಣುಕಾ ಯಲ್ಲಮ್ಮ ಹಾಗೂ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪುನರ್‌ನಿರ್ಮಾಣಗೊಂಡಿರುವ ಗೋಪುರ ಹಾಗೂ ಕುಂಭ ಕಳಶಕ್ಕೆ ಆದಿಚುಂಚನಗಿರಿ ಶಾಖಾ ಮಠದ ಸೌಮ್ಯನಾಥಸ್ವಾಮೀಜಿ ಅಭಿಷೇಕ ಮಾಡಿದರು. ಮಠಪತಿ ಪಿ.ಸಿದ್ಧರಾಜು ಇದ್ದಾರೆ.

ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ಡಾ. ಅನುಪಮಾ ನಿರಂಜನ ಜನ್ಮದಿನದ ಕಾರ್ಯಕ್ರಮದಲ್ಲಿ ನಿರ್ಮಲಾ ಸಿ. ಎಲಿಗಾರ್ ಅವರಿಗೆ 'ಡಾ. ಅನುಪಮ ನಿರಂಜನ' ಪ್ರಶಸ್ತಿ ಪ್ರದಾನ ಮಾಡಲಾಯಿತು. (ಎಡದಿಂದ) ತಾ.ಸಿ. ತಿಮ್ಮಯ್ಯ, ಇಂದಿರಾ ಶರಣ್ ಜಮ್ಮಲದಿನ್ನಿ, ಗಾಯತ್ರಿ ರಾಮಣ್ಣ, ಡಾ. ಕೆ. ಆರ್ ಸಂಧ್ಯಾರೆಡ್ಡಿ, ಎ.ಎಸ್ ನಾಗರಾಜಸ್ವಾಮಿ, ಡಾ. ವಸುಂಧರಾ ಭೂಪತಿ ಹಾಗೂ ಗೀತಾ ಶಿಂದೆ ಇದ್ದಾರೆ.

ರಾಜರಾಜೇಶ್ವರಿನಗರದಲ್ಲಿ ಹಿಂದೂ ಜಾಗೃತಿ ಸೇನೆ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಹೆಸರಿನಲ್ಲಿ 101 ತೆಂಗಿನಕಾಯಿ ಒಡೆದು ನಾಡಿನ ಜನತೆಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿದರು.

ವಿಮಾನ ಹಾರಾಟ ಸಮಯ ಬದಲು

ಪ್ರಜಾವಾಣಿ ವಾರ್ತೆ

ಬೀದರ್: ಪ್ರಯಾಣಿಕರ ಬೇಡಿಕೆಯಂತೆ ಬೀದರ್- ಬೆಂಗಳೂರು ಮಧ್ಯೆ ಹಾರಾಟ ನಡೆಸುವ ವಿಮಾನದ ಸಮಯ ಬದಲಿಸಲಾಗಿದೆ ಎಂದು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.

ಸದ್ಯ ವಿಮಾನ ಸೋಮವಾರ, ಬುಧವಾರ ಮತ್ತು ಶುಕ್ರವಾರ ಬೆಳಿಗ್ಗೆ 8.05ಕ್ಕೆ ಬೆಂಗಳೂರಿನಿಂದ ಹೊರಟು ಬೆಳಿಗ್ಗೆ 9.15ಕ್ಕೆ ಬೀದರ್ ತಲುಪಲಿದೆ. ಬೆಳಿಗ್ಗೆ 9.40ಕ್ಕೆ ಬೀದರ್‌ನಿಂದ ಹೊರಟು ಬೆಳಿಗ್ಗೆ 10.45ಕ್ಕೆ ಬೆಂಗಳೂರು ತಲುಪಲಿದೆ. ಮಂಗಳವಾರ, ಗುರುವಾರ, ಶನಿವಾರ ಹಾಗೂ ಭಾನುವಾರ ಎಂದಿನಂತೆ ಸಂಜೆ 4.20ಕ್ಕೆ ಬೆಂಗಳೂರಿನಿಂದ ಬೀದರ್‌ಗೆ ಬರಲಿದೆ. ಸಂಜೆ 4.45ಕ್ಕೆ ಬೀದರ್‌ನಿಂದ ಹೊರಟು ಸಂಜೆ 5.50ಕ್ಕೆ ಬೆಂಗಳೂರು ತಲುಪಲಿದೆ ಎಂದಿದ್ದಾರೆ.

ರೈಲು ಸೌಲಭ್ಯ: ಬೇಸಿಗೆ ನಿಮಿತ್ತ ಪ್ರಯಾಣಿಕರ ಅನುಕೂಲಕ್ಕೆ ವಿಶೇಷ ರೈಲು ಸೌಲಭ್ಯ ಕಲ್ಪಿಸಲಾಗಿದೆ. ರೈಲು ಸಂಖ್ಯೆ 07187 ಮೇ 18 ರಂದು ಸಂಜೆ 3.50ಕ್ಕೆ ಕಾಚಿಗೂಡದಿಂದ ಹೊರಟು ಸಿಕಂದರಾಬಾದ್, ಬೇಗಂಪೇಟ, ವಿಕರಾಬಾದ್, ಜಹೀರಾಬಾದ್ ಮಾರ್ಗವಾಗಿ ಸಂಜೆ 7.25ಕ್ಕೆ ಬೀದರ್, ರಾತ್ರಿ 8ಕ್ಕೆ ಭಾಲ್ಕಿ, ಉದಗಿರ, ಲಾತೂರ ಮಾರ್ಗವಾಗಿ ಮೇ 19 ರಂದು ಬೆಳಿಗ್ಗೆ 7ಕ್ಕೆ ನಗರಸೋಲ್‌ಗೆ ತಲುಪಲಿದೆ ಎಂದು ಸಚಿವರು ಹೇಳಿದ್ದಾರೆ.

ಅದೇ ದಿನ ರಾತ್ರಿ 8ಕ್ಕೆ ನಗರಸೋಲ್‌ನಿಂದ ಹೊರಟು ಬಂದ ಮಾರ್ಗವಾಗಿ ಮೇ 20 ರಂದು ಬೆಳಿಗ್ಗೆ 6.20ಕ್ಕೆ ಭಾಲ್ಕಿ, ಬೆಳಿಗ್ಗೆ 7ಕ್ಕೆ ಬೀದರ್ ಹಾಗೂ ಬೆಳಿಗ್ಗೆ 11.35ಕ್ಕೆ ಕಾಚಿಗೂಡ ತಲುಪಲಿದೆ ಎಂದು ತಿಳಿಸಿದ್ದಾರೆ.

ಬಿಸಿಲಿನಿಂದ ರಕ್ಷಣೆ

ಬೆಂಗಳೂರಿನಲ್ಲಿ ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಸವಾರರೊಬ್ಬರು ದ್ವಿಚಕ್ರ ವಾಹನ ಮಾರ್ಪಾಡಿಸಿರುವುದು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಭಾಷೆ ರಕ್ಷಣೆಯಲ್ಲೇ ಜನರ ಉಳಿವು: ಭಾಷಾ ವಿಜ್ಞಾನಿ ಪ್ರೊ.ಅನ್ವಿತಾ ಅಬ್ಬಿ ಪ್ರತಿಪಾದನೆ

'ಸುನಾಮಿ ಪರಿಣಾಮ' ತಪ್ಪಿಸಿದ ಭಾಷಾ ಜ್ಞಾನ!

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರಕೃತಿಯ ಅನೂಹ್ಯ ಮಾಹಿತಿ ಬುಡಕಟ್ಟು ಭಾಷಿಕರಲ್ಲಿದೆ. ಭಾಷಾ ಜ್ಞಾನದಿಂದಲ ಅಂಡಮಾನಿಗಳು ಸುನಾಮಿಯಿಂದ ತಪ್ಪಿಸಿಕೊಂಡರು. ಜ್ಞಾನದ ದಾಖಲೀಕರಣ ಆಗದಿದ್ದರೆ ಬೆಲೆ ಕಟ್ಟಲಾಗದ ಸಂಪತ್ತು ಮರೆಯಾಗಲಿದೆ' ಎಂದು ಭಾಷಾ ವಿಜ್ಞಾನಿ ಪ್ರೊ.ಅನ್ವಿತಾ ಅಬ್ಬಿ ಪ್ರತಿಪಾದಿಸಿದರು.

ನಗರದ ಭಾರತೀಯ ಭಾಷಾ ಸಂಸ್ಥಾನದಲ್ಲಿ ಬುಧವಾರದಿಂದ ಆರಂಭವಾದ 'ಭಾಷಾ ದಾಖಲೀಕರಣ' ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'2004ರಲ್ಲಿ ಭಾರತದ ಕಡಲ ತೀರಕ್ಕೆ ಸುನಾಮಿ ಅಪ್ಪಳಿಸಿದಾಗ ಲಕ್ಷಾಂತರ ಮಂದಿ ಜೀವ ಕಳೆದುಕೊಂಡರು. ಆದರೆ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಬುಡಕಟ್ಟುಗಳಾದ ಓಂಗೇ, ಜರವಾ ಹಾಗೂ ಅಂಡಮಾನಿಗಳು ಪಾರಾದ ಬಗೆಯೂ ಕೌತುಕವನ್ನು ಮೂಡಿಸುತ್ತದೆ' ಎಂದರು.

'ಆಳ ಕಡಲಿನ ಮೀನುಗಳು ತೀರದಲ್ಲಿದ್ದುದ್ದನ್ನು ನೋಡಿದ 'ಓಂಗೇ', ಅಲೆಗಳ ಬದಲಾವಣೆ ಕಂಡ 'ಜರವಾ' ಬುಡಕಟ್ಟು ಸಮುದಾಯದವರು ಎತ್ತರ ಪ್ರದೇಶಗಳಿಗೆ ನಾಲ್ಕು ಗಂಟೆ ಮುಂಚಿತವಾಗಿ ತಲುಪಿ ರಕ್ಷಣೆ ಪಡೆದರು.

ಮುಖ್ಯಾಂಶಗಳು

- ದಾಖಲೀಕರಣಕ್ಕೆ ತಂತ್ರಜ್ಞಾನ ಬಳಕೆ ಅಗತ್ಯ
- ಕುಳಿತು ಸಂಶೋಧನೆ ನಡೆಸದೇ, ಸ್ಥಳಕ್ಕೆ ತೆರಳಿ
- ಶಿಬಿರಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳ ಸಲಹೆ

ಭಾರತದಲ್ಲಿ ವಿವಿಧ ಭಾಷಿಕರನ್ನು ಗೌರವಿಸುವ ಸಹಿಷ್ಣುತಾ ಭಾವವಿದೆ. ಆದರೆ, ರಾಜಕೀಯ ಕಾರಣಕ್ಕಾಗಿ ಭಾಷಾ ಜಗಳಗಳು ನಡೆಯುತ್ತಿವೆ

ಅನ್ವಿತಾ ಅಬ್ಬಿ, ಭಾಷಾ ವಿಜ್ಞಾನಿ

ಇಂಥ ನೆಲಮೂಲದಿಂದ ಬಂದ ಜ್ಞಾನ ದೇಶದ ಎಲ್ಲ ಭಾಷೆಗಳಲ್ಲಿಯೂ ಇದ್ದು, ಅದನ್ನು ರಕ್ಷಿಸಬೇಕು. ಭಾಷೆ ಉಳಿಸಿದರೆ, ಅದು ನಮ್ಮನ್ನು ಉಳಿಸುತ್ತದೆ' ಎಂದು ಉದಾಹರಿಸಿದರು.

'ದೇಶದಲ್ಲಿ 6 ಭಾಷಾ ಕುಟುಂಬಗಳಿದ್ದು, ಅಂಡಮಾನ್ ದ್ವೀಪ ಸಮೂಹದಲ್ಲಿ 7ನೇ ಭಾಷಾ ಕುಟುಂಬವಿದೆ. ಪ್ರಕೃತಿ ಹಾಗೂ ಕಡಲ ಜ್ಞಾನದ ಊಹಾತೀತ ಸಂಗತಿಗಳು ಆ ಭಾಷಾ ಸಮೂಹದಲ್ಲಿ ಅಡಕವಾಗಿವೆ' ಎಂದರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಬುಧವಾರದಿಂದ ಆರಂಭವಾದ 'ಭಾಷಾ ದಾಖಲೀಕರಣ' ಕಾರ್ಯಾಗಾರಕ್ಕೆ ಭಾಷಾ ವಿಜ್ಞಾನಿ ಪ್ರೊ.ಅನ್ವಿತಾ ಅಬ್ಬಿ ಚಾಲನೆ ನೀಡಿದರು. ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಉಪ ನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ, ಡಾ.ಸುಜೋಯ್ ಸರ್ಕಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಈಶಾನ್ಯ ಭಾರತದ ಬುಡಕಟ್ಟು ಸಮುದಾಯಗಳಾದ ಚೊಕ್ರಿ, ಖೇಝಾ, ಸಾಂಗ್ತಮ್ ಭಾಷೆಗಳು ಅಳಿಯುತ್ತಿವೆ. ಸಾಯುತ್ತಿರುವ ಭಾಷೆಯ ಸೌಂದರ್ಯವನ್ನು ಹುಡುಕುವ ಪರಿಸ್ಥಿತಿ ನಮ್ಮದಾಗಿದೆ. ಈಗಾಗಲೇ ಅಳಿದ ಭಾಷೆಗಳ ದಾಖಲೀಕರಿಸುವುದು ಸವಾಲಾಗಿದೆ' ಎಂದು ಅಭಿಪ್ರಾಯಪಟ್ಟರು.

'ಒಡಿಶಾದ ಕೊರಾಪುಟ್‌ನಲ್ಲಿ ವಿವಿಧ ರುಚಿ ನೀಡುವ 1,500 ಭತ್ತದ ತಳಿಗಳು 'ಹಸಿರು ಕ್ರಾಂತಿ'ಯಿಂದ, ನೀಲಗಿರಿ ಬೆಟ್ಟಗಳ ಮುರುಕುರುಂಬ ಸಮುದಾಯಕ್ಕೆ ಗೊತ್ತಿದ್ದ ಅಣಬೆ ತಳಿಗಳು ಟೀ ಬೆಳೆಯಿಂದ ನಾಶವಾದವು. ಆಧುನಿಕತೆ ಜ್ಞಾನವನ್ನು ನಾಶಗೊಳಿಸುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಭಾಷೆಯ ದಾಖಲೀಕರಣಕ್ಕೆ ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಅದರಿಂದ ನಮ್ಮ ಭಾರತೀಯ ಭಾಷೆಗಳಲ್ಲಿನ ಶ್ರೀಮಂತ ಪರಂಪರೆಯನ್ನು ರಕ್ಷಿಸಬಹುದು. ಕಚೇರಿಯಲ್ಲಿ ಕುಳಿತು ಸಂಶೋಧನೆ ನಡೆಸಬೇಡಿ, ಸ್ಥಳ ಭೇಟಿ ನೀಡಬೇಕು' ಎಂದು ಸಲಹೆ ನೀಡಿದರು.

ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಎಸ್‌ಪಿಪಿಇಎಲ್ ಪ್ರಭಾರ ಅಧಿಕಾರಿ ಡಾ.ಸುಜೋಯ್ ಸರ್ಕಾರ್ ಇದ್ದರು.

'ಅಳಿವಿನಂಚಿನಲ್ಲಿ 197 ಭಾಷೆ'

'ದೇಶದಲ್ಲಿ 1,635 ಭಾಷೆಗಳಿದ್ದು, ಬಹುತೇಕ ಭಾಷೆಗಳ ದಾಖಲೀಕರಣವಾಗಿಲ್ಲ. ದೇಶದಲ್ಲಿ ಅಳಿವಿನಂಚಿನ 197 ಭಾಷೆಗಳನ್ನು ಯುನೆಸ್ಕೊ ಗುರುತಿಸಿದೆ' ಎಂದು ಭಾರತೀಯ ಭಾಷಾ ಸಂಸ್ಥಾನದ ಉಪನಿರ್ದೇಶಕಿ ಪ್ರೊ.ಉಮಾರಾಣಿ ಪಪ್ಪುಸ್ವಾಮಿ ತಿಳಿಸಿದರು.

'ಜಾಗತೀಕರಣ, ನಗರೀಕರಣ ಸೇರಿದಂತೆ ವಿವಿಧ ಕಾರಣಗಳಿಂದ ವೇಗವಾಗಿ ಭಾಷೆಗಳು ಅಳಿಯುತ್ತಾ ಸಾಗಿವೆ. ದಾಖಲೀಕರಣ ಪ್ರಕ್ರಿಯೆಯನ್ನು ವೈಜ್ಞಾನಿಕವಾಗಿ ನಡೆಸುವುದು ಇಂದಿನ ತುರ್ತಾಗಿದೆ. ಭಾಷೆಯನ್ನು ಉಳಿಸಿದರೆ ನಮ್ಮ ಔಷಧ ಜ್ಞಾನ, ಜೀವ ವೈವಿಧ್ಯ, ಪಾರಂಪರಿಕ ಜ್ಞಾನ ಸಂಪತ್ತನ್ನು ರಕ್ಷಿಸಿದಂತಾಗುತ್ತದೆ' ಎಂದರು.

ಸಂಕ್ಷಿಪ್ತ ಸುದ್ದಿ

ಕಳ್ಳನನ್ನು ಹಿಡಿದ ವಿದ್ಯಾರ್ಥಿಗಳು

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ವಿದ್ಯಾರ್ಥಿಗಳ ಮೊಬೈಲ್ ಕಳವು ಮಾಡಿ ಪರಾರಿಯಾಗಲು ಯತ್ನಿಸಿದ್ದ ಆರೋಪಿಯನ್ನು ವಿದ್ಯಾರ್ಥಿಗಳೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಪಶ್ಚಿಮ ಬಂಗಾಳದ ಜೈವುಲ್ ಮಲ್ಲಿಕ್(32) ಬಂಧಿತ ಆರೋಪಿ. ಆರೋಪಿಯಿಂದ ₹60 ಸಾವಿರ ಬೆಲೆಯ ನಾಲ್ಕು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಸದಾಶಿವನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಕಲಿ ಗುರುತಿನ ಚೀಟಿ ತೋರಿಸಿ ಆರೋಪಿ ಸಂಸ್ಥೆಯ ಆವರಣ ಪ್ರವೇಶಿಸಿದ್ದ. ಕೊಠಡಿಯಲ್ಲಿಟ್ಟಿದ್ದ ಇಬ್ಬರು ವಿದ್ಯಾರ್ಥಿಗಳ ಮೊಬೈಲ್‌ಗಳು, ಪರ್ಸ್ ಕಳವು ಮಾಡಿದ್ದ. ಗಾಬರಿಯಿಂದ ಹೊರಗೆ ಓಡಿ ಬರುತ್ತಿದ್ದ. ಆಗ ವಿದ್ಯಾರ್ಥಿಗಳೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೇತನ ಹೆಚ್ಚಳಕ್ಕೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ

ಕೋಲಾರ: ತೈವಾನ್ ಮೂಲದ ಬಹುರಾಷ್ಟ್ರೀಯ ಐ-ಫೋನ್ ತಯಾರಿಕಾ ಕಂಪನಿ ವಿಸ್ಟ್ರಾನ್‌ನಲ್ಲಿ ಮತ್ತೆ ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ.

ತಾಲ್ಲೂಕಿನ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ಘಟಕದ ಮುಂದೆ ಬುಧವಾರ ಸೇರಿದ ಸಾವಿರಾರು ಕಾರ್ಮಿಕರು ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿದ್ದಾರೆ.

ಗುತ್ತಿಗೆ ನೌಕರರಿಗಿಂತ ಕಂಪನಿ ಕಾರ್ಮಿಕರಿಗೆ ವೇತನ ಕಡಿಮೆಯಿದ್ದು, ಅದರಂತೆ ವೇತನ ಹೆಚ್ಚಿಸುವಂತೆ ಮನವಿ ಮಾಡಿದ್ದಾರೆ.

ಪ್ರತಿಭಟನೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಸ್ಥಳಕ್ಕೆ ತೆರಳಿ ಬಂದೋಬಸ್ತ್ ವಹಿಸಿದ್ದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಶಬನಾ ಆಜ್ಮಿ ಸ್ಥಳಕ್ಕೆ ತೆರಳಿ ಸಂಧಾನ ನಡೆಸಿದರು.

'ವೇತನ ಹೆಚ್ಚಿಸುವಂತೆ ಕೋರಿ ಕಾರ್ಮಿಕರು ಆಡಳಿತ ಮಂಡಳಿ, ಕಾರ್ಮಿಕ ಇಲಾಖೆಗೆ ಪತ್ರ ಬರೆದಿದ್ದಾರೆ. ಆಡಳಿತ ಮಂಡಳಿ ಜೊತೆಗೆ ಮಾತನಾಡಿದ್ದೇವೆ. ವೇತನ ಹೆಚ್ಚಳ ಸಂಬಂಧ ಜೂನ್ 2ರವರೆಗೆ ಸಮಯಾವಕಾಶ ಕೋರಿದ್ದಾರೆ. ಕಾರ್ಮಿಕರು ಪ್ರತಿಭಟನೆ ಕೈಬಿಟ್ಟಿದ್ದಾರೆ' ಎಂದು ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಬುಧವಾರ ನಡೆದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಆರ್‌.ಕೆ. ಜಯಗೋಪಾಲ್ ವಿದ್ಯಾರ್ಥಿನಿಯೊಬ್ಬರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

'ವೃತ್ತಿ ಪರತೆಯಲ್ಲಿ ಉನ್ನತ ಗುರಿ ಇರಲಿ'

ಬೆಂಗಳೂರು: 'ವಿದ್ಯಾರ್ಥಿಗಳು ಕಲಿಕೆಯ ನಂತರ ವೃತ್ತಿ ಪರತೆಯಲ್ಲಿ ಉನ್ನತ್ತ ಗುರಿಗಳನ್ನು ಇಟ್ಟುಕೊಂಡು ಸಾಧಿಸಲು ಮುಂದಾಗಬೇಕು' ಎಂದು ಸ್ಟ್ರಾಕ್ಟ್ ಜಿಯೋ ಟೆಕ್ ಲ್ಯಾಬೋರೆಟರೀಸ್‌ನ ವ್ಯವಸ್ಥಾಪಕ ನಿರ್ದೇಶಕ ಆರ್. ಕೆ. ಜಯಗೋಪಾಲ್ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬುಧವಾರ ಆಯೋಜಿಸಿದ್ದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಸಮಯದಲ್ಲಿ ಕೇವಲ ವಿಷಯದ ಬಗ್ಗೆ ಮಾತ್ರ ಆಲೋಚನೆ ಮಾಡುತ್ತಾರೆ. ಆದರೆ, ಕಲಿಕೆಯ ಅವಧಿ ಮುಗಿದ ಮೇಲೆ ವಿದ್ಯಾರ್ಥಿಗಳು ವೃತ್ತಿಪರ ಗುರಿಗಳನ್ನು ರೂಢಿಸಿಕೊಳ್ಳಬೇಕು. ಅದನ್ನು ಸಾಧಿಸಲು ಬೇಕಾದ ಕೌಶಲ ಬೆಳೆಸಿಕೊಳ್ಳಬೇಕು' ಎಂದರು.

ಆರ್‌ಐಟಿ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ತಲ್ಲಂ ವೆಂಕಟೇಶ್ ಮಾತನಾಡಿ, 'ನಾನು ಈ ಕಾಲೇಜಿನ ಹಳೇ ವಿದ್ಯಾರ್ಥಿಯಾಗಿದ್ದು, ಇಲ್ಲಿ ವ್ಯಾಸಂಗ ಮಾಡಿದ ಎಲ್ಲರೂ ಉನ್ನತ ಸ್ಥಾನದಲ್ಲಿದ್ದಾರೆ' ಎಂದರು.

ಕಾಲೇಜಿನ ಪ್ರಾಂಶುಪಾಲ ಬಿ.ಎಸ್. ರಾಮಪ್ರಸಾದ್, ಡಾ.ಎನ್. ವಿ.ಆರ್.ನಾಯ್ಡು ಇದ್ದರು.

ಆರ್ಟ್ ಆಫ್ ಗೀವಿಂಗ್ ಸಂಸ್ಥೆಯ 10 ನೇ ವಾರ್ಷಿಕೋತ್ಸವದಲ್ಲಿ ಡಾ.ಮರಿಯಾ

'ಮನೋಬಲ ಕುಗ್ಗಿಸುವ ಶಿಕ್ಷಣ ಅನಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನಸ್ಸೇ ಅರಳದಿರುವ ಮಗುವಿನ ಮನೋಬಲವನ್ನೇ ಕುಗ್ಗಿಸುವ ಶಿಕ್ಷಣಕ್ಕಿಂತ, ಕಲಿತ ವಿದ್ಯೆ ಬಳಸಿ ಸಮಾಜಕ್ಕೆ ಮರಳಿ ನೀಡುವ ವಿದ್ಯಾರ್ಥಿಗಳನ್ನು ರೂಪಿಸುವ ಶಿಕ್ಷಣ ಇಂದಿನ ಅಗತ್ಯ ಎಂದು ಮೌಂಟ್ ಕಾರ್ಮೆಲ್ ಕಾಲೇಜು ಗೃಹವಿಜ್ಞಾನ ವಿಭಾಗದ ಡೀನ್ ಡಾ.ಬಿ.ವಿ.ಶಾಂತಾ ಮರಿಯಾ ಹೇಳಿದರು.

ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಆರ್ಟ್ ಆಫ್ ಗಿವಿಂಗ್ ಸಂಸ್ಥೆಯ 10ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಕಗಳಿಕೆಯ ಆಧಾರದಲ್ಲೇ ಪಡೆಯುವ ಶಿಕ್ಷಣದಲ್ಲಿ ಮಕ್ಕಳ ಸಾಧನೆ ಕುರಿತು ಪೋಷಕರಲ್ಲಿ ತೃಪ್ತಿ ಕಾಣದಾಗಿದೆ. ಇಂತಹ ಮನೋಸ್ಥಿತಿ ಬದಲಾಗಬೇಕು. ತ್ಯಾಗ, ಸಂಯಮ, ಪ್ರೀತಿ, ಕರುಣೆ ರೂಢಿಸಿಕೊಂಡ ಮಕ್ಕಳು ಸಮಾಜದ ಆಸ್ತಿಗಳಾಗಬೇಕು ಎಂದು ಹೇಳಿದರು.

ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತ ಎಂ.ವಿ.ವೆಂಕಟೇಶ್ ಮಾತನಾಡಿ, ಪರೋಪಕಾರ ಸೇವೆ ಮೂಲಭೂತ ಕರ್ತವ್ಯವಾಗಬೇಕು. ಜನರು ಸದಾ ಹಕ್ಕುಗಳ ಬಗ್ಗೆ ಚಿಂತಿಸದೆ, ಇಂತಹ ಕರ್ತವ್ಯಗಳತ್ತಲೂ ಗಮನಹರಿಸಬೇಕು. ಸೇವಾ ಮನೋಭಾವ ರೂಢಿಸಿಕೊಳ್ಳಬೇಕು. ಬಸವಣ್ಣ, ದಾಸ ಪರಂಪರೆ ನೀಡಿದ ಕರುಣೆ, ದಯೆ, ನಿಸ್ವಾರ್ಥ ಸೇವೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೊಡೇ ಪಿ.ಕೃಷ್ಣ, ದಾನ ಕೊಡುವುದೇ ನಿಜವಾದ ಧರ್ಮ. ಕೊಡುವುದೆಂದರೆ ಹಣ ನೀಡುವುದಲ್ಲ. ಸಮಾಜಕ್ಕೆ ಸಲ್ಲಿಸುವ ಸೇವೆಯೂ ದಾನವಾಗುತ್ತದೆ. ಅದು ಬದುಕಿನ ರೀತಿಯೂ ಆಗಬೇಕು. ಇಂತಹ ಪಾಠಗಳನ್ನು ಮಕ್ಕಳಿಗೆ ಕಲಿಸುವ ಪಠ್ಯಕ್ರಮ ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಆರ್ಟ್ ಆಫ್ ಗಿವಿಂಗ್ ಸಂಸ್ಥಾಪಕ ಡಾ. ಅಚ್ಯುತ ಸಮಂತ, ನಟ 'ಮುಖ್ಯಮಂತ್ರಿ' ಚಂದ್ರು, ವೈದ್ಯರಾದ ರಾಜು ಕೃಷ್ಣಮೂರ್ತಿ, ಸತ್ಯನಾರಾಯಣ, ಕಾರ್ಯಕ್ರಮದ ಆಯೋಜಕ ಗುರುಪ್ರಸಾದ್, ಡಿ.ಎಂ. ಚೂಡಾಮಣಿ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಆರ್ಟ್ ಆಫ್ ಗಿವಿಂಗ್‌ನ ವಾರ್ಷಿಕೋತ್ಸವದಲ್ಲಿ ವಿವಿಧ ಕ್ಷೇತ್ರಗಳ ಸೇವಾಕರ್ತರಾದ ವೆಂಕಟೇಶ್, ರಮೇಶ್, ಗೌರಮ್ಮ, ದೀಪ , ಸುರೇಶ ಅವರನ್ನು ಸನ್ಮಾನಿಸಲಾಯಿತು (ಎಡದಿಂದ ಕುಳಿತವರು). ಡಾ.ಬಿ.ವಿ. ಶಾಂತಾ ಮರಿಯಾ, ಎಂ.ವಿ.ವೆಂಕಟೇಶ್, ರಾಜು ಕೃಷ್ಣಮೂರ್ತಿ, ಗುರುಪ್ರಸಾದ್, 'ಮುಖ್ಯಮಂತ್ರಿ ಚಂದ್ರು' ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ.

'ಜೂನ್‌ನಿಂದ ವಿದ್ಯುತ್ ಬಿಲ್ ಕಟ್ಟುವುದಿಲ್ಲ'

ಪ್ರಜಾವಾಣಿ ವಾರ್ತೆ

ಉಡುಪಿ: ಜೂನ್‌ನಿಂದ ವಿದ್ಯುತ್ ಬಿಲ್ ಪಾವತಿ ಮಾಡುವುದಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ವಾಸುದೇವ ಭಟ್ ಪೆರಂಪಳ್ಳಿ ಮನೆಯ ವಿದ್ಯುತ್ ಮೀಟರ್‌ಗೆ ಫಲಕ ಹಾಕಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಮೆಸ್ಕಾಂನವರೆ ಕ್ಷಮಿಸಿ, ಜೂನ್‌ನಿಂದ ನಮ್ಮ ಮನೆಗೆ ಕರೆಂಟ್ ಬಿಲ್ ಕೊಡಬೇಡಿ, ನಾವು ಬಿಲ್ ಕಟ್ಟಲ್ಲ' ಎಂದು ಬೋರ್ಡ್ ಹಾಕಿದ್ದಾರೆ.

'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ತಿಂಗಳಿಗೆ 200 ಯುನಿಟ್ ಉಚಿತ ವಿದ್ಯುತ್ ಕೊಡುವುದಾಗಿ ಘೋಷಣೆ ಮಾಡಿತ್ತು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಬಹಿರಂಗವಾಗಿ ಜೂನ್‌ನಿಂದ ವಿದ್ಯುತ್ ಬಿಲ್ ಕಟ್ಟುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಈ ಕಾರ್ಯಕ್ರಮದಡಿ ನಾನೂ ಫಲಾನುಭವಿಯಾಗಿರುವುದರಿಂದ ಜೂನ್‌ನಿಂದ ವಿದ್ಯುತ್ ಬಿಲ್ ಕಟ್ಟುವುದಿಲ್ಲ' ಎಂದು ಅವರು ತಿಳಿಸಿದ್ದಾರೆ.

ಕೌಟುಂಬಿಕ ಕಲಹ ಪ್ರಕರಣದಲ್ಲಿ ಹೈಕೋರ್ಟ್ ಆದೇಶ

‘ಮಗಳು ತಂದೆಯ ಬಳಿ ಬೇಡ, ತಾಯಿಯ ಬಳಿಯಲ್ಲೇ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕಿತ್ಸೆ ಕೊಡಿಸಲು ವೈದ್ಯರ ಬಳಿಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿ ಅಪ್ರಾಪ್ತ ವಯಸ್ಸಿನ ಮಗಳನ್ನು ಪಶ್ಚಿಮ ಬಂಗಾಳಕ್ಕೆ ಕರೆದೊಯ್ದ ತಂದೆಯ ಕ್ರಮವನ್ನು ಆಕ್ಷೇಪಿಸಿರುವ ಹೈಕೋರ್ಟ್, ಮಗಳನ್ನು ತಾಯಿಯ ಬಳಿಗೆ ಕಳುಹಿಸುವಂತೆ ಆದೇಶಿಸಿದೆ.

ಮಹಿಳೆಯೊಬ್ಬರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಲೋಕ್ ಆರಾಧೆ ಮತ್ತು ವಿಜಯಕುಮಾರ ಎ. ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಈ ಪ್ರಕರಣದಲ್ಲಿ ತಂದೆ (ಅರ್ಜಿದಾರಳ ಪತಿ) ಮಗಳನ್ನು ಅಕ್ರಮವಾಗಿ ಪಶ್ಚಿಮ ಬಂಗಾಳಕ್ಕೆ ಕರೆದೊಯ್ದಿರುವ ಆರೋಪ ಸಾಬೀತಾಗಿದೆ’ ಎಂದು ಅಭಿಪ್ರಾಯಪಟ್ಟಿತು.

ಮಗಳನ್ನು ಕೂಡಲೇ ಅರ್ಜಿದಾರರ ಸುಪರ್ದಿಗೆ ಒಪ್ಪಿಸುವಂತೆ ಆಕೆಯ ಪತಿಗೆ ನಿರ್ದೇಶಿಸಿತು.

‘ಮಗಳ ಶಾಶ್ವತ ಸುಪರ್ದಿಗೆ ಕೋರಿ ಪತ್ನಿ ಬೆಂಗಳೂರಿನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಮತ್ತೊಂದೆಡೆ ತಾನು ಮಗುವಿನ ಕಾನೂನುಬದ್ಧ ಪೋಷಕ ಎಂಬುದಾಗಿ ಘೋಷಿಸುವಂತೆ ಕೋರಿ ಪಶ್ಚಿಮ ಬಂಗಾಳದಲ್ಲಿ ಪತಿ ಅರ್ಜಿ ಸಲ್ಲಿಸಿದ್ದಾರೆ. ಈ ಎರಡೂ ಅರ್ಜಿಗಳು ಇತ್ಯರ್ಥವಾಗುವರೆಗೆ ಮಗಳು ತಾಯಿಯ ವಶದಲ್ಲಿ ಇರಬೇಕು. ತಂದೆಗೆ ಮಗಳ ಭೇಟಿಯ ಹಕ್ಕು ನೀಡಬೇಕು’ ಎಂದು ನಿರ್ದೇಶಿಸಿತು.

‘ಮಗಳು ತಂದೆಯೊಂದಿಗೆ ಸಾಮಾಜಿಕ, ಭೌತಿಕ ಮತ್ತು ಮಾನಸಿಕ ಸಂಪರ್ಕವನ್ನು ಕಳೆದುಕೊಳ್ಳಬಾರದು. ದಂಪತಿ ಪ್ರತ್ಯೇಕವಾಗಿದ್ದರೂ ಮಗಳಿಗೆ ಪೋಷಕರ ಉತ್ತಮ ಆರೈಕೆ ದೊರೆಯುವಂತಾಗಬೇಕು. ಆ ದಿಸೆಯಲ್ಲಿ ನಿತ್ಯವೂ ಶಾಲೆಯಿಂದ ಮನೆಗೆ ಬಂದ ನಂತರ ತಂದೆ, ಮಗಳಿಗೆ ಫೋನ್ ಅಥವಾ ವಿಡಿಯೊ ಕರೆ ಮಾಡಿ ಯೋಗಕ್ಷೇಮ ವಿಚಾರಿಸಬಹುದು. ಮಗುವಿನ ಪ್ರತಿದಿನದ ಬೆಳವಣಿಗೆಯ ಬಗ್ಗೆ ಪತ್ನಿಯೂ ಪ್ರತಿ ಭಾನುವಾರ ಪತಿಗೆ ಮಾಹಿತಿ ನೀಡಬೇಕು. ಪತಿ ವಾರಾಂತ್ಯದಲ್ಲಿ ಬೆಂಗಳೂರಿಗೆ ಬಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಮಗಳ ಜೊತೆಗೆ ಸಮಯ ಕಳೆಯಬಹುದು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?

2012ರ ಫೆಬ್ರುವರಿ 22ಕ್ಕೆ ಅಂತರ್ ಧರ್ಮೀಯ ವಿವಾಹವಾಗಿದ್ದ ದಂಪತಿಗೆ 2016ರ ಜೂನ್ 25ರಂದು ಮಗಳು ಜನಿಸಿದ್ದಳು. ದಂಪತಿ 2017ರ ಜನವರಿಯಿಂದ 2018ರ ಜೂನ್‌ವರೆಗೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿದ್ದರು. ಪತ್ನಿ ಮಗಳೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಕೆಲಸದ ನಿಮಿತ್ತ ಪತಿ ಪಶ್ಚಿಮ ಬಂಗಾಳದಲ್ಲಿ ವಾಸವಾಗಿದ್ದರು.

2022ರ ಡಿಸೆಂಬರ್ 16ರಂದು ಬೆಂಗಳೂರಿಗೆ ಬಂದಿದ್ದ ಪತಿ, ಮಗಳನ್ನು ವೈದ್ಯರ ಬಳಿಗೆ ಚಿಕಿತ್ಸೆಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿ ಪಶ್ಚಿಮ ಬಂಗಾಳಕ್ಕೆ ಕರೆದೊಯ್ದ ಅರೋಪ ಎದುರಿಸುತ್ತಿದ್ದಾರೆ.

ಬನ್ನೇರುಘಟ್ಟ ಉದ್ಯಾನ: ಸಾರ್ವಜನಿಕ ಸಾರಿಗೆ ಕುರಿತು ಪರಿಸರ ಜಾಗೃತಿ

ಬಸ್‌ನಲ್ಲಿ ಬಂದವರಿಗೆ ಚಿಟ್ಟೆ ಪಾರ್ಕ್‌ಗೆ ಉಚಿತ ಪ್ರವೇಶ

ಪ್ರಜಾವಾಣಿ ವಾರ್ತೆ

ಆನೇಕಲ್: ಪರಿಸರ ದಿನಾಚರಣೆ ಅಂಗವಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮ ರೂಪಿಸಲಾಗಿದೆ. ಸೋಮವಾರ ಸಾರ್ವಜನಿಕ ಸಾರಿಗೆ ಬಳಸಿ ಬನ್ನೇರುಘಟ್ಟ ಉದ್ಯಾನಕ್ಕೆ ಬರುವ ಪ್ರವಾಸಿಗರಿಗೆ ಚಿಟ್ಟೆ ಪಾರ್ಕ್ ಭೇಟಿಗೆ ಉಚಿತ ಪ್ರವೇಶ ವ್ಯವಸ್ಥೆ ಮಾಡಲಾಗಿದೆ.

ಜೂನ್ 5ರವರೆಗೆ ಚಿಟ್ಟೆ ಪಾರ್ಕ್‌ಗೆ ಉಚಿತ ಪ್ರವೇಶದ ವ್ಯವಸ್ಥೆ ಮಾಡಲಾಗಿದೆ. ಮೇ 22, ಮೇ 29 ಮತ್ತು ಜೂನ್ 5ರಂದು ಸಾರ್ವಜನಿಕ ಸಾರಿಗೆಯಲ್ಲಿ ಬರುವ ಪ್ರವಾಸಿಗರಿಗೆ ಉಚಿತ ಪ್ರವೇಶವಿದೆ. ಬಸ್ ಟಿಕೆಟ್ ಅಥವಾ ಬಸ್ ಪಾಸ್ ತೋರಿಸಿ ಪ್ರವೇಶ ಪಡೆಯಬಹುದಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದರು.

ಪ್ರತಿ ಕುಟುಂಬ ಸ್ವಂತ ವಾಹನಗಳ ಬದಲು ಸಾರ್ವಜನಿಕ ಸಾರಿಗೆಯಲ್ಲಿ ಬಂದರೆ ಇಂಧನ ಉಳಿತಾಯ, ಪರಿಸರದಲ್ಲಿ ವಾಯು ಮಾಲಿನ್ಯ ತಡೆಯಲು ಸಾಧ್ಯ. ಹಾಗಾಗಿ ಪರಿಸರ ದಿನಾಚರಣೆಯ ಅಂಗವಾಗಿ ಉದ್ಯಾನದಲ್ಲಿ ವಿನೂತನ ಕಾರ್ಯಕ್ರಮ ರೂಪಿಸಲಾಗಿದೆ. ಇದರಿಂದಾಗಿ ಸಾರ್ವಜನಿಕ ಸಾರಿಗೆ ಪ್ರಯಾಣ ಬೆಂಬಲಿಸಿದಂತಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಉದ್ಯಾನಕ್ಕೆ ಭೇಟಿ ನೀಡುವ ಜನರಿಂದ ಪ್ರತಿದಿನ ಸಸಿ ನೆಡುವ ಕಾರ್ಯಕ್ರಮ ರೂಪಿಸಲಾಗಿದೆ. ಪ್ರತಿಯೊಬ್ಬರು ಪರಿಸರ ಸಂರಕ್ಷಿಸುವ ಪ್ರತಿಜ್ಞೆ ಮಾಡಿ ಸಹಿ ಮಾಡುವ ವ್ಯವಸ್ಥೆಯನ್ನು ಜೈವಿಕ ಉದ್ಯಾನದ ಚಿಟ್ಟೆ ಪಾರ್ಕ್‌ನಲ್ಲಿ ರೂಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪ್ರವಾಸಿಗರು ಪರಿಸರ ಸಂರಕ್ಷಣೆಯ ಪ್ರತಿಜ್ಞೆಗೆ ಸಹಿ ಮಾಡಿದರು

ಇಬ್ಬರಿಗೆ ‘ಚುಟುಕು ಭೂಷಣ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ಸಾಣೆಹಳ್ಳಿ ಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮತ್ತು ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಅವರು ಚುಟುಕು ಭೂಷಣ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಕನ್ನಡ ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅವರನ್ನು ಚುಟುಕು ಚೇತನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಗಳನ್ನು ಭಾಲ್ಕಿಯ ಚನ್ನಬಸವಾಶ್ರಮದಲ್ಲಿ ಮೇ 25ರಂದು ನಡೆಯುವ ಪರಿಷತ್ತಿನ 11ನೇ ರಾಜ್ಯ ಸಮ್ಮೇಳನದದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: ವರ್ಕ್ ಅವಿನ್ಯೂ ಕ್ಯಾಂಪಸ್, ನಂ.77, ಅಸೆಂಟ್ ಬಿಲ್ಡಿಂಗ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560 095. ಕರ್ನಾಟಕ, ಭಾರತ

ಈ-ಮೇಲ್: corporateaffairs@teamlease.com | ವೆಬ್‌ಸೈಟ್: https://group.teamlease.com/

ಮಾರ್ಚ್ 31, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷಕ್ಕೆ ಪರಿಶೋಧಿತ ಆರ್ಥಿಕ ಫಲತಾಂಶಗಳ ಸಾರಾಂಶ

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

ವಿವರಗಳು	ಏಕಿಕೃತ			ಕ್ರೋಡೀಕೃತ		
	31.03.2023ಕ್ಕೆ ಕೊನೆಯಾದ 3 ತಿಂಗಳಗೆ	31.03.2023ಕ್ಕೆ ಕೊನೆಯಾದ 12 ತಿಂಗಳಗೆ	31.03.2022ಕ್ಕೆ ಕೊನೆಯಾದ 3 ತಿಂಗಳಗೆ	31.03.2023ಕ್ಕೆ ಕೊನೆಯಾದ 3 ತಿಂಗಳಗೆ	31.03.2023ಕ್ಕೆ ಕೊನೆಯಾದ 12 ತಿಂಗಳಗೆ	31.03.2022ಕ್ಕೆ ಕೊನೆಯಾದ 3 ತಿಂಗಳಗೆ
	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ	ಪರಿಶೋಧಿತ
ಕಾರ್ಯಾಚರಣೆಗಳಂದ ಒಟ್ಟು ಆದಾಯ	1,79,053.16	6,87,617.59	1,54,161.62	2,02,727.41	7,86,999.75	1,81,741.02
ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ) (ಅಸಾಮಾನ್ಯ ಮತ್ತು/ಅಥವಾ ಅಸಾಧಾರಣ ಐಟಂಗಳು)	2,552.55	10,150.69	2,396.97	2,868.24	11,736.25	3,432.73
ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಮತ್ತು/ಅಥವಾ ಅಸಾಧಾರಣ ಐಟಂಗಳ ನಂತರ)	2,206.02	9,719.62	2,847.59	2,437.39	11,154.98	3,162.67
ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)]	2,207.00	9,736.93	2,856.53	2,480.93	11,281.85	3,191.25
ಪೇಯ್ಡ್-ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.)	1,709.68	1,709.68	1,709.68	1,709.68	1,709.68	1,709.68
ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ	76,037.97	76,037.97	66,141.89	79,052.79	79,052.79	67,611.24
ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಿಕರಣಗೊಂಡಿಲ್ಲ)						
(ಎ) ಮೂಲ	12.90	56.85	16.66	14.00	65.12	18.05
(ಬಿ) ಡೈಲ್ಯೂಟೆಡ್	12.90	56.85	16.66	14.00	65.12	18.05

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ("ವಿಧಾಯಕಗಳು") ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, ಮಾರ್ಚ್ 31, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಪರಿಶೋಧಿತ ಆರ್ಥಿಕ ಫಲತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಪರಿಶೋಧಿತ ಪ್ರತ್ಯೇಕಿತ ಮತ್ತು ಕ್ರೋಡೀಕೃತ ಆರ್ಥಿಕ ಫಲತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (https://group.teamlease.com/) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ ಮಾರ್ಚ್ 31, 2023ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ವರ್ಷದ ಕ್ರೋಡೀಕೃತ ಪರಿಶೋಧಿತ ಆರ್ಥಿಕ ಫಲತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಲಿಯು 17ನೇ ಮೇ, 2023ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ.

ಸದರಿ ಆರ್ಥಿಕ ಫಲತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

ದಿನಾಂಕ: ಮೇ 17, 2023
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಲಿಗಾಗಿ ಮತ್ತು ಅದರ ಪರವಾಗಿ
ಸಹಿ/-
ಅಶೋಕ್ ಕುಮಾರ್ ನೆಡುರುಮಲ್ಲಿ
ವ್ಯವಸ್ಥಾಪಕ ನಿರ್ದೇಶಕರು
DIN: 00151814

ನಗರದಲ್ಲಿ ಇಂದು

‘ಅಡ್ವಾನ್ಸಡ್ ಮಟಿರಿಯಲ್ಸ್ ಫಾರ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಅಪ್ಲಿಕೇಶನ್’ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಮನಮೋಹನ್ ಆರ್. ಕಲಗಾಲ್, ಜಗದೀಶ್ ಜಿ., ವೆಂಕಟೇಶ್ವರಲು ಕೆ., ಸಿ.ಎನ್. ಬಾಲಕೃಷ್ಣ, ರೇಣುಕಾಪ್ರಸಾದ್ ಕೆ.ವಿ., ಡಿ. ಹನುಮಂತಯ್ಯ, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆ.ಆರ್. ರಸ್ತೆ. ವಿ.ವಿ. ಪುರ, ಬೆಳಿಗ್ಗೆ 9ರಿಂದ

‘ಸಂದೇಶ’ ಮ್ಯೂಸಿಯಂ ಆಫ್ ಕಮ್ಯೂನಿಕೇಷನ್ ಉದ್ಘಾಟನೆ: ಆಯೋಜನೆ ಅಂಚೆ ಇಲಾಖೆ, ಸ್ಥಳ: ಸಂದೇಶ ಮ್ಯೂಸಿಯಂ ಆಫ್ ಕಮ್ಯೂನಿಕೇಶನ್, ಅಶೋಕನಗರ, ಮ್ಯೂಸಿಯಂ ರಸ್ತೆ, ಬೆಳಿಗ್ಗೆ 10ರಿಂದ

ರಾಷ್ಟ್ರೀಯ ಮಟ್ಟದ ನಿರ್ವಹಣೆ, ತಂತ್ರಜ್ಞಾನ ಹಾಗೂ ಸಾಂಸ್ಕೃತಿಕ ಉತ್ಸವ-ಸಮ್ಮಿಟ್-2023: ಉದ್ಘಾಟನೆ: ಕಾರ್ತಿಕ್ ತಲ್ಲಮ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಉಪಸ್ಥಿತಿ: ಮಹೇಶ್ ಕುಮಾರ್ ಕೆ.ಆರ್., ಆಯೋಜನೆ ಮತ್ತು ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಜಯನಗರ, ಬೆಳಿಗ್ಗೆ 10ರಿಂದ

ದೀಪಕ್ ಶಂಕರ್ ಅವರ ‘ಇನ್‌ಟು ದಿ ವೈಲ್ಡ್’ ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನದ ಉದ್ಘಾಟನೆ: ದೀಪಾ ಶ್ರೀಧರ್, ಉಪಸ್ಥಿತಿ: ದೀಪಕ್ ಶಂಕರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ ಪ್ರದರ್ಶನ, ಉದ್ಘಾಟನೆ ಸಂಜೆ 5

ಮಂಜುನಾಥ ಮದಿಹಳ್ಳಿ ಅವರ ‘ರೈ’ ಪುಸ್ತಕ ಬಿಡುಗಡೆ: ರಿಕಿ ಮುತ್ತಪ್ಪ ರೈ, ಪ್ರಸ್ತಾವ: ಮಂಜುನಾಥ ಮದಿಹಳ್ಳಿ, ಉಪಸ್ಥಿತಿ: ಭಾವನಾ ಬೆಳಗೆರೆ, ಪ್ರಕಾಶ ರೈ, ಬಿ.ಎನ್. ಜಗದೀಶ್, ಬಿ. ಗುಣರಂಜನ್ ಶೆಟ್ಟಿ, ರಾಮಚಂದ್ರಯ್ಯ, ನಾರಾಯಣಸ್ವಾಮಿ ಜಿ., ಆಯೋಜನೆ: ಮದಿಹಳ್ಳಿ ಪ್ರಕಾಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

‘ಕೈಗಾರಿಕಾ ಕ್ಷೇತ್ರದಲ್ಲಿ ಕನ್ನಡ ಸಂಘಗಳ ಪಾತ್ರ’ ಕುರಿತ ಉಪನ್ಯಾಸ: ಸು. ಜಗದೀಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನ, ‘ದೇವದಾಸಿ ಮತ್ತು ಜೋಗತಿ ಪರಂಪರೆ’ ಕುರಿತು ವಿಚಾರಸಂಕಿರಣ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಅತಿಥಿ: ಮಂಜಮ್ಮ ಜೋಗತಿ, ಅಧ್ಯಕ್ಷತೆ: ಜೆ.ಎಂ. ಮಲ್ಲಿಕಾರ್ಜುನಯ್ಯ, ‘ಮಾತಾ’ ನಾಟಕ ಪ್ರದರ್ಶನ: ಪ್ರಸ್ತುತಿ: ಕಾಜಾಣ, ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ಪರಂಪರೆ ಕೂಟ, ಇತಿಹಾಸ ವಿಭಾಗ ಕೆಎಲ್‌ಇ ಕಾನೂನು ಮಹಾವಿದ್ಯಾಲಯ, ಬೆಂಗಳೂರು ಹಿಸ್ಟೋರಿಯನ್ ಸೊಸೈಟಿ, ಸ್ಥಳ: ಕೆ.ಎಲ್.ಇ. ಎಸ್. ನಿಜಲಿಂಗಪ್ಪ ಕಾಲೇಜು, ಸಭಾಂಗಣ, ರಾಜಾಜಿನಗರ, ಮಧ್ಯಾಹ್ನ 1.30

ಪ್ರವಚನ ವಾಹಿನಿ: ‘ನಾಕಾಣದ ಭಾರತ’ ಕುರಿತು ಉಪನ್ಯಾಸ: ಬಿ.ಡಿ. ಪಟೇಲ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ದಾಸವಾಣಿ’ ಗಾಯನ: ಪ್ರಣೀತಾ ಟಿ. ಮಣೂರ್, ತಬಲಾ: ಶ್ರೀನಿವಾಸ ಕಾಖಂಡಕಿ, ಕೊಳಲು: ಸುಧನ್ವ ಟಿ. ಮಣೂರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಹರಿನಾಮ ಸಂಕೀರ್ತನೆ: ಗಾಯನ: ಬೃಂದಾ ಸತ್ಯಪ್ರಸಾದ್, ವಸುಧಾ ಉದ್ದಗಟ್ಟಿ, ಕೀ-ಬೋರ್ಡ್: ಅಮಿತ್ ಶರ್ಮಾ,ತಬಲಾ: ಮುರಳಿ ನಾರಾಯಣರಾವ್ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ-ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಮಾರ್ಚ್ 31, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	31/03/2023 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ)	31/03/2023 ಕ್ಕೆ ಕೊನೆಗೊಂಡ ಪ್ರಸ್ತುತ ಸಾಲಿನ ಒಂದು ವರ್ಷದ ಅಂಶಿಗಳು (ಪರಿಶೋಧಿತವಾದ)	31/03/2022 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	8,091	28,598	6,723
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	1,369	5,235	1,610
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ)	1,369	5,235	1,610
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	1,045	3,907	1,213
5.	ಈ ಅವಧಿಯ ಒಟ್ಟು ಸಮಗ್ರ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆ ನಂತರ)}	1,049	3,915	1,214
6.	ಈಕ್ವಿಟಿ ಷೇರು ಬಂಡವಾಳ	752.19	752.19	752.19
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	13.89*	51.95	16.13*

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com)ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಬೆಂಗಳೂರು
17 ಮೇ, 2023

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

Azadi Ka Amrit Mahotsav

G20 भारत 2023 INDIA

ಇ-ಇನ್‌ವಾಯ್ಸ್

ವ್ಯವಹಾರವನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ

ಆಗಸ್ಟ್ 01, 2023 ರಿಂದ ಜಾರಿಗೊಂಡಂತೆ, ಹಿಂದಿನ ಯಾವುದೇ ಹಣಕಾಸು ವರ್ಷದಲ್ಲಿ ಸರಾಸರಿ ರೂ.5 ಕೋಟಿ# ವಾರ್ಷಿಕ ವಹಿವಾಟು ಹೊಂದಿದ್ದ ತೆರಿಗೆದಾರರು* ಬಿ2ಬಿ ಸರಕುಗಳ ಅಥವಾ ಸೇವಗಳ ಪೂರೈಕೆಗಾಗಿ, ಅಥವಾ ಎರಡನ್ನೂ ಪೂರೈಸುವುದಕ್ಕಾಗಿ, ಅಥವಾ ರಫ್ತುಗಳ ಪೂರೈಕೆಗಾಗಿ ಇ-ಇನ್‌ವಾಯ್ಸ್ ಪಡೆದುಕೊಳ್ಳುವುದು ಕಡ್ಡಾಯ.

ಇ-ಇನ್‌ವಾಯ್ಸ್‌ಗಳಲ್ಲಿ ಒಂದು ವಿಶಿಷ್ಟ ಇನ್‌ವಾಯ್ಸ್ ರೆಫರೆನ್ಸ್ ನಂಬರ್ ಇರುತ್ತದೆ, ಇದು ಇನ್‌ವಾಯ್ಸ್ ರಜಿಸ್ಟ್ರೇಶನ್ ಪೋರ್ಟಲ್‌ನ ಮುಖಾಂತರವೇ ಬಂದಿರುತ್ತದೆ

ಇ-ಇನ್‌ವಾಯ್ಸ್‌ನ ಪ್ರಯೋಜನಗಳು

- ಯೂನಿಫಾರಂ ಸ್ಟಾಂಡರ್ಡ್
- ಜಿಎಸ್‌ಟಿ ಪೋರ್ಟಲ್‌ಗೆ ಆಟೋ ರಿಪೋರ್ಟಿಂಗ್
- ಇ-ವೇ ಬಿಲ್‌ನ ಆಟೋ ಜನರೇಶನ್
- ಅತ್ಯಲ್ಪ ಅನುಸರಣಾ ಹೊರೆ
- ಟ್ರಾನ್ಸ್‌ಕ್ರಿಪ್ಷನಲ್ ದೋಷಗಳಲ್ಲಿ ಕಡಿತ
- ಅಸಂಖ್ಯಾತ ಇನ್‌ವಾಯ್ಸ್‌ಗಳ ಪ್ರಸರಣ
- ಆಟೋ ಪಾಪ್ಯುಲೇಟೆಡ್ ಜಿಎಸ್‌ಟಿ ರಿಟರ್ನ್
- ಕಾಗದ ಬಳಕೆ ಅಲ್ಪ

cbc 15502/13/0003/2324

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಅಧಿಸೂಚನೆ ಸಂ. 10/2023–ಕೇಂದ್ರಿಯ ತೆರಿಗೆ ದಿನಾಂಕ 10.05.2023 ಪರಿಶೀಲಿಸಿ ಮತ್ತು ಪ್ರಧಾನ ಅಧಿಸೂಚನೆ ಸಂ. 13/2020–ಕೇಂದ್ರಿಯ ತೆರಿಗೆ ದಿನಾಂಕ 21.03.2020 ರೊಂದಿಗೆ ಓದಿಕೊಳ್ಳಿ.

*ನಿರ್ದಿಷ್ಟ ಅಧಿಸೂಚಿತ ಪ್ರವರ್ಗಗಳ ತೆರಿಗೆದಾರರನ್ನು ಹೊರತುಪಡಿಸಿ (ವಿವರಗಳಿಗಾಗಿ ದಯವಿಟ್ಟು ಸ್ಕ್ಯಾನ್ ಮಾಡಿ)

#ಪ್ರಸ್ತುತ ಈ ಮಿತಿಯು ರೂ.10 ಕೋಟಿ ಆಗಿದೆ

Central Board of Indirect Taxes and Customs

@cbic_india @cbicindia @cbicindia @CBICINDIA @cbic www.cbic.gov.in

ಸ್ಪರ್ಧಾ ವಾಣಿ

ಮಾದರಿ ಪ್ರಶ್ನೋತ್ತರಗಳು

ಪರಿಸರ ಸೂಕ್ಷ್ಮ ಪ್ರದೇಶಗಳು

ಯಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪರಿಸರ ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಇಲ್ಲಿದೆ.

ಹನುಮಾನಾಯಕ ರಾಠೋಡ್

ಪ್ರಚಲಿತ

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ದೇಶದ ವಿವಿಧ ರಾಜ್ಯಗಳಲ್ಲಿರುವ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿದೆ. ಹಾಗೆಯೇ, ಅನನ್ಯ ಜೈವಿಕ ಸಂಪನ್ಮೂಲಗಳನ್ನು ಹೊಂದಿರುವ ಪ್ರದೇಶಗಳ ಸಂರಕ್ಷಣೆಗೂ ಮುಂದಾಗಿದೆ.

ಹಿಮಾಚಲ ಪ್ರದೇಶ ಸೇರಿದಂತೆ 13 ರಾಜ್ಯಗಳಲ್ಲಿ 92 ಪರಿಸರ ಸೂಕ್ಷ್ಮ ವಲಯಗಳು(Eco Sensitive Zone) ಮತ್ತು ಎರಡು ಪರಿಸರ ಸೂಕ್ಷ್ಮ ಪ್ರದೇಶಗಳನ್ನು(Eco Sensitive Area) ಗುರುತಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಕುರಿತು ಕೇಂದ್ರ ಅರಣ್ಯ ಮತ್ತು ಪರಿಸರ ಖಾತೆ ಸಚಿವರಾದ ಅಶ್ವಿನಿ ಚೌಬೆ ಅವರು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ, 'ಸಂರಕ್ಷಿತ ಪ್ರದೇಶಗಳಲ್ಲಿ ಜೀವವೈವಿಧ್ಯ ನಿರ್ವಹಣೆ ಮತ್ತು ಸಂರಕ್ಷಣೆಯ ಸಲುವಾಗಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಸಂರಕ್ಷಿತ ಪ್ರದೇಶಗಳ ಸುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯಗಳೆಂದು ಅಧಿಸೂಚಿಸಿದೆ' ಎಂದು ತಿಳಿಸಿದ್ದಾರೆ.

ಜೀವ ಭೌಗೋಳಿಕ ವಲಯಗಳು

ಭಾರತದ 10 ಜೀವ ಭೌಗೋಳಿಕ ವಲಯಗಳು ಈ ಕೆಳಕಂಡಂತಿದೆ.

1 **ಹೊರ ಹಿಮಾಲಯ:** ಇದು ಟಿಬೆಟ್ ಪ್ರಸ್ಥಭೂಮಿ, ಲಡಾಖ್ ಮತ್ತು ಲಾಹುಲ್ ಸ್ಪಿತಿ ಕಣಿವೆ ಸೇರಿ ಭಾರತದ ಭೂಪ್ರದೇಶದ ಶೇ 5.7ರಷ್ಟು ಪ್ರದೇಶವನ್ನು ಒಳಗೊಂಡಿದೆ. ಈ ವಲಯವು ಆಲ್ಪೈನ್ಸ್ ಸ್ಟೆಪೀಸ್(Alpine Stepp's) ಸಸ್ಯವರ್ಗದಿಂದ ಕೂಡಿದೆ. ಹಿಮಚಿರತೆ ಮತ್ತು ಕಪ್ಪು ಕತ್ತಿನ ಕೊಕ್ಕರೆಯಂತಹ ಅಪರೂಪದ ಜೀವಿಗಳು ಇಲ್ಲಿ ಕಂಡು ಬರುತ್ತವೆ. ಈ ವಲಯ ಶೀತಮಯ ಸೂಕ್ಷ್ಮ ಪರಿಸರ ವ್ಯವಸ್ಥೆ ಹೊಂದಿದೆ.

2 **ಹಿಮಾಲಯ ಶ್ರೇಣಿಗಳು:** ಭಾರತದ ಭೂಪ್ರದೇಶದ ಶೇ 7.2ರಷ್ಟು ಹಿಮಾಲಯದ ಪರ್ವತ ಶ್ರೇಣಿಗಳು ವ್ಯಾಪಿಸಿವೆ. ವಾಯುವ್ಯದಿಂದ ಈಶಾನ್ಯ ಕಡೆಗೆ ಸಾಗುವ ಪೂರ್ಣ ಪರ್ವತಗಳನ್ನು ಒಳಗೊಂಡಿದೆ. ಆಲ್ಪೈನ್ ಹಾಗೂ ಉಪ ಆಲ್ಪೈನ್ ಕಾಡುಗಳ ಹುಲ್ಲುಗಾವಲುಗಳು ಹಾಗೂ ತೇವ ಮಿಶ್ರಿತ ಎಲೆ ಉದುರಿಸುವ ಅರಣ್ಯಗಳನ್ನು ಹೊಂದಿದೆ. ಇಲ್ಲಿನ ಅಪರೂಪದ ಪ್ರಭೇದಗಳೆಂದರೆ ಹಂಗೂಲ್ ಮತ್ತು ಕಸ್ತೂರಿ ಜಿಂಕೆ.

3 **ಮರುಭೂಮಿ ಪ್ರದೇಶ:** ದೇಶದ ಭೂಪ್ರದೇಶದ ಶೇ 6.7ರಷ್ಟು ಮರುಭೂಮಿ ಪ್ರದೇಶವಿದೆ. ರಾಜಸ್ಥಾನದ ಮರಳು ಮರುಭೂಮಿ ಹಾಗೂ ಗುಜರಾತಿನ ಉಪ್ಪಿನ ಮರುಭೂಮಿ(ರಣ್ ಆಫ್ ಕಚ್)ಗಳಿವೆ. ತೋಳ, ಮರುಭೂಮಿಯ ಬೆಕ್ಕು ಮತ್ತು ಗ್ರೇಟ್ ಇಂಡಿಯನ್ ಬಸ್ಟರ್ಡ್ ಮುಂತಾದ ಅಳಿವಿನಂಚಿನ ಪ್ರಭೇದಗಳು ಕಂಡುಬರುತ್ತವೆ.

4 **ಅರೆಶುಷ್ಕ ಪ್ರದೇಶ:** ಅರಾವಳಿ ಬೆಟ್ಟಗಳನ್ನು ಒಳಗೊಂಡು ಮರುಭೂಮಿ ಹಾಗೂ ದಕ್ಷಿಣ ಪ್ರಸ್ಥಭೂಮಿ ನಡುವಿನ ಪ್ರದೇಶವೇ ಶುಷ್ಕ ಪ್ರದೇಶ. ಇದು ಭೂಪ್ರದೇಶದ ಶೇ 15.6ರಷ್ಟಿದೆ. ಅನೇಕ ಕೃತಕ ಹಾಗು ನೈಸರ್ಗಿಕ ಸರೋವರಗಳು ಮತ್ತು ಜೌಗು ಪ್ರದೇಶಗಳನ್ನು ಹೊಂದಿದೆ. ಇಲ್ಲಿನ ಹುಲ್ಲುಗಾವಲು ಪ್ರದೇಶಗಳು ಅನೇಕ ವನ್ಯಜೀವಿಗಳಿಗೆ ಆಶ್ರಯ ನೀಡಿವೆ. ತೋಳ, ಸಿಂಹ, ಚಿರತೆ, ಕ್ಯಾರಕಲ್ ಮತ್ತು ಗುಳ್ಳೇನರಿ ಮುಂತಾದವುಗಳು.

5 **ಪಶ್ಚಿಮ ಘಟ್ಟ ಶ್ರೇಣಿಗಳು:** ಇವು ಗುಜರಾತ್‌ನ ತಪತಿ ನದಿಯ ದಕ್ಷಿಣ ಭಾಗದಿಂದ ತಮಿಳು ನಾಡಿನ ಕನ್ಯಾಕುಮಾರಿಯವರೆಗೆ ಪಶ್ಚಿಮ ಕರಾವಳಿ ತೀರ ಪ್ರದೇಶಕ್ಕೆ ಸಮಾನಾಂತರವಾಗಿ ಹಬ್ಬಿವೆ. ಇದು ಭೂ ವಿಸ್ತೀರ್ಣದ ಶೇ 5.8ರಷ್ಟಿದೆ.

6 **ದಕ್ಷಿಣ ಪ್ರಸ್ಥಭೂಮಿ:** ಭೂಪ್ರದೇಶದ ಶೇ42ರಷ್ಟು ದಕ್ಷಿಣ ಪ್ರಸ್ಥಭೂಮಿ ಇದೆ. ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದ ಎಲೆ ಉದುರಿಸುವ ಕಾಡುಗಳಿವೆ. ಚಿರತೆ, ಸಾಂಬಾರ ಜಿಂಕೆ, ನೀಲ್ ಗಾಯ್ ಮತ್ತು ಚೌಸಿಂಗ ಇತ್ಯಾದಿ ವನ್ಯಜೀವಿಗಳು ಹೇರಳವಾಗಿವೆ. ಜಿಂಕೆ, ಗೌರ್ ಮತ್ತು ಕೆಸರು ಜಿಂಕೆ ಮುಂತಾದವುಗಳು ತೇವ ಪ್ರದೇಶದಲ್ಲಿ ಕಂಡು ಬರುತ್ತವೆ.

7 **ಗಂಗಾ ಮೈದಾನ:** ದೇಶದ ಒಟ್ಟು ಭೂಪ್ರದೇಶದ ಶೇ 11ರಷ್ಟು ಭಾಗವನ್ನು ಒಳಗೊಂಡಿದೆ. ಪ್ರಮುಖ ಪ್ರಾಣಿಗಳಾದ ಘೇಂಡಾಮೃಗ, ಆನೆ, ಎಮ್ಮೆ, ಬೊಗಳುವ ಜಿಂಕೆ(Barking Deer) ಕೆಸರು ಜಿಂಕೆ ಮತ್ತು ಚಿಕ್ಕ ಜಾತಿಯ ಜಿಂಕೆಗಳು ಇಲ್ಲಿ ಕಂಡು ಬರುತ್ತವೆ.

8 **ಈಶಾನ್ಯ ವಲಯ:** ದೇಶದ ವಿಸ್ತೀರ್ಣದ ಶೇ 5.2ರಷ್ಟಿದೆ. ಇಂಡೊ- ಮಲಯನ್ ಹಾಗೂ ಇಂಡೊ- ಚೀನಾ ಜೀವಿ ಭೌಗೋಳಿಕ ಪ್ರದೇಶಗಳ ನಡುವಿನ ಸ್ಥಿತ್ಯಂತರ ವಲಯವಾಗಿದೆ. ಆದ್ದರಿಂದ ಈ ಪ್ರದೇಶವನ್ನು ಜೀವಿ ಭೌಗೋಳಿಕ ಪ್ರದೇಶಗಳ ಹೆಬ್ಬಾಗಿಲು ಎನ್ನುವರು.

9 **ಕರಾವಳಿ ತೀರ ಪ್ರದೇಶ:** ಇದು ಭಾರತದ ಭೂ ವಿಸ್ತೀರ್ಣದ ಶೇ 2.5 ರಷ್ಟಿದೆ. ಮರಳು ಬೀಚ್‌ಗಳು ಮತ್ತು ಮ್ಯಾಂಗ್ರೋವ್ ಕಾಡುಗಳಿಂದ ಕೂಡಿದೆ. ಕರಾವಳಿಯ ಉದ್ದ 6100 ಕಿ.ಮೀ ಎಂದು ಗುರುತಿಸಲಾಗಿದೆ.

10 **ದ್ವೀಪಗಳು:** ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳು ಭಾರತದ ಭೂಪ್ರದೇಶದ ಶೇ 0.3ರಷ್ಟಿದೆ. ಲಕ್ಷದ್ವೀಪಗಳು ಹವಳದ ದಿಬ್ಬಗಳ ಲಗೂನ್ ವ್ಯವಸ್ಥೆಯಿಂದ ಕೂಡಿದೆ.

ಭಾರತದ ಜೀವವೈವಿಧ್ಯದ ಸೂಕ್ಷ್ಮ ಪ್ರದೇಶಗಳು

1. **ಹಿಮಾಲಯ:** ಇದು ಭಾರತದ ಪೂರ್ವ ಹಿಮಾಲಯ ಪ್ರದೇಶದ ಜೊತೆಗೆ ಪಾಕಿಸ್ತಾನ, ಟಿಬೆಟ್, ಭೂತಾನ್, ಚೀನಾ ಮತ್ತು ಮ್ಯಾನ್ಮಾರ್ ಪ್ರದೇಶಗಳನ್ನು ಒಳಗೊಂಡಿದೆ.
2. **ಇಂಡೊ- ಬರ್ಮಾ:** ಇದು ಈಶಾನ್ಯ ಭಾರತದ ಅಂಡಮಾನ್ ದ್ವೀಪಗಳ ಜೊತೆಗೆ ಮ್ಯಾನ್ಮಾರ್, ಥಾಯ್ಲೆಂಡ್, ವಿಯೆಟ್ನಾಮ್ ಲಾವೋಸ್, ಕಾಂಬೋಡಿಯಾ ಮತ್ತು ದಕ್ಷಿಣ ಚೀನಾದ ಪ್ರದೇಶಗಳನ್ನು ಒಳಗೊಂಡಿದೆ.
3. **ಸುಂಡಾಲ್ಯಾಂಡ್:** ನಿಕೋಬಾರ್ ಗುಂಪಿನ ದ್ವೀಪಗಳನ್ನು ಒಳಗೊಂಡಿದೆ. ಜೊತೆಗೆ ಇಂಡೋನೇಷ್ಯಾ, ಮಲೇಷಿಯಾ, ಸಿಂಗಪುರ, ಬ್ರುನೈ ಮತ್ತು ಫಿಲಿಪೀನ್ಸ್ ಗಳ ಪ್ರದೇಶಗಳನ್ನು ಒಳಗೊಂಡಿದೆ.

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ. ಇದಕ್ಕೆ ಪೂರಕವಾಗಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1. ಕೆಳಗೆ ಉಲ್ಲೇಖಿಸಿರುವ ಯಾವ ರಾಷ್ಟ್ರದ ನಗರದಲ್ಲಿ ವಿದುತ್ ಚಾಲಿತ ಬಾಡಿಗೆ ಸ್ಕೂಟರ್‌ಗಳ ಬಳಕೆಯನ್ನು ನಿಷೇಧಿಸಲಾಗುತ್ತಿದೆ?

ಎ. ಪ್ಯಾರಿಸ್, ಫ್ರಾನ್ಸ್
ಬಿ. ಲಂಡನ್, ಇಂಗ್ಲೆಂಡ್
ಸಿ. ಕೊಲಂಬೊ, ಶ್ರೀಲಂಕಾ
ಡಿ. ಇಸ್ಲಾಮಾಬಾದ್, ಪಾಕಿಸ್ತಾನ

ಉತ್ತರ : ಎ

2. ಶುದ್ಧ ನೀರಿನ ಸಂರಕ್ಷಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು?

ಎ. ಸಮುದ್ರದ ನೀರನ್ನು ಕುಡಿಯುವ ನೀರಾಗಿ ಪರಿವರ್ತಿಸುವ ತಂತ್ರಜ್ಞಾನ ಅಭಿವೃದ್ಧಿ ಪಡಿಸುವುದು.
ಬಿ. ಸೌದಿ ಅರೇಬಿಯಾ, ಯುಎಇ ಮತ್ತು ಇಸ್ರೇಲ್ ದೇಶಗಳು ಬಳಸುವ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ. ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡು ಹೇಳಿಕೆಗಳು ಸರಿಯಾಗಿವೆ. ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ: ಸಿ

3. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

ಎ. ನೀರಿನ ಕೊರತೆ ಎದುರಿಸುತ್ತಿರುವ ಶೇ 80ರಷ್ಟು ಜನರು ಏಷ್ಯಾದಲ್ಲಿ ವಾಸಿಸುತ್ತಿದ್ದಾರೆ.
ಬಿ. ನಗರ, ಕೈಗಾರಿಕಾ ಬೆಳವಣಿಗೆ ಮತ್ತು ಕೃಷಿ ಕ್ಷೇತ್ರದಲ್ಲಿ ವಿಶ್ವದ ಶೇ 70ರಷ್ಟು ನೀರು ಬಳಕೆಯಾಗುತ್ತಿದೆ.

ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ
ಸಿ. ಮೇಲಿನ ಎರಡು ಹೇಳಿಕೆಗಳು ಸರಿಯಾಗಿವೆ
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ

ಉತ್ತರ: ಸಿ

4. ಈ ಕೆಳಗಿ ಹೆಸರಿಸಿರುವ ಯಾವ ದೇಶ ಸಮುದ್ರದ ನೀರನ್ನು ಶುದ್ಧ ನೀರಾಗಿ ಪರಿವರ್ತಿಸಿ ರಫ್ತು ಮಾಡುತ್ತಿದೆ?

ಎ. ಸೌದಿ ಅರೇಬಿಯಾ ಬಿ. ಆಸ್ಟ್ರೇಲಿಯಾ
ಸಿ. ಮಾಲ್ಡೀವ್ಸ್ ಡಿ. ಇಸ್ರೇಲ್

ಉತ್ತರ: ಡಿ

5. ಇತ್ತೀಚಿಗೆ ಉದ್ಘಾಟನೆಯಾದ ಮೊತ್ತಮೊದಲ ಜಾಗತಿಕ ಬೌದ್ಧ ಧರ್ಮದ ಸಮಾವೇಶಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಈ ವರ್ಷದ ಜಾಗತಿಕ ಸಮಾವೇಶವನ್ನು ನವದೆಹಲಿಯಲ್ಲಿ ಆಯೋಜಿಸಲಾಗುತ್ತಿದೆ.
2. ಪ್ರಸ್ತುತ ವರ್ಷದ ಬೌದ್ಧ ಧರ್ಮದ ಸಮಾವೇಶವನ್ನು ಐದನೇ ಆವೃತ್ತಿ ಎಂದು ಪರಿಗಣಿಸಬಹುದು.
3. ಈ ಸಮಾವೇಶದಲ್ಲಿ ನಾಲ್ಕು ವಿವಿಧ ವಿಚಾರಗಳಿಗೆ ಸಂಬಂಧಿಸಿದ ಚರ್ಚೆಯಾಗುತ್ತದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 1 ಮತ್ತು 3
ಸಿ. 1 ಮತ್ತು 2 ಡಿ. 1, 2 ಮತ್ತು 3

ಉತ್ತರ : ಬಿ

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/Education-careers ನೋಡಿ

EXAM DH ಪ್ರಜಾವಾಣಿ MASTERMIND™
ಮತ್ತಷ್ಟು ಮಾಹಿತಿಗಾಗಿ
ಪರಿಸರ ವಿಷಯದ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ವಿದ್ಯಮಾನಗಳು ಹಾಗೂ ಇನ್ನಿತರ ಮಾಹಿತಿಯ ಲೇಖನಗಳು, ವಿಡಿಯೊಗಳಿಗಾಗಿ 'ಡೆಕ್ಕನ್‌ಹೆರಾಲ್ಡ್- ಪ್ರಜಾವಾಣಿ ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
www.exammastermind.com

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

BIOLOGY

Expln:- RuBisCo and collagen are the most abundant proteins in the living would because RuBisCo is present in all plant cell, algae, cyanobacteria and certain other that undergoes photosynthesis and molecular synthesis through the Calvin cycle, i.e., it makes up about 20-25% of the soluble protein in leaves and is made on earth at a rate of about 1000 kg/s.

And collagen is a most abundant protein in animals because as it forms about 25-35% of protein on our body collagen forms connective tissue.

It is the most common protein in other mammals too. It is found primarily in fibrous tissue, such as tendons, ligaments and skin. It also acts as a component of muscle, cartilage, bone, blood vessels, the cornea of the eye, intervertebral discs intestinal tract, etc.

44. One of the chief reasons among the following for the depletion in the number of species making it endangered is

(a) Greenhouse effect (b) Habitat destruction
(c) over-hunting and poaching
(d) Competition and predation

Ans:b

Expln:-Human activities have accelerated the rate of extinction of species from the earth. Out of the four the major reasons responsible for the loss of biodiversity is habitat loss/destruction and fragmentation.

Due to habitat fragmentation and loss, once covering 14% of earth's land surface rainforest has shrunk to now only 6%. This is badly affecting the mammals and birds and certain animals with migratory habits are badly affected,
leading to their population declines.

45. in humans, what is the ratio of number of gametes produced from one male primary sex cell to the number of gametes produced one female primary sex cell?

(a) 1:1 (b) 1:3 (c) 1:4 (d) 4:1

Ans: d In humans, the ratio of number of gametes produced from one male primary sex cell and from one female primary sex cell is 4:1, because four sperms are formed from one primary spermatocyte but only one egg is formed primary oocyte.

46. Identify the incorrect statement from the following.

(a) Pyramid of energy is mostly upright, but sometimes it may be inverted
(b) Pyramids of number and biomass may be Pyramid of biomass in sea is generally inverted as the biomass of fish far exceeds that of phytoplantons
(d) Food chains are generally short few trophic levels as only 10% of the energy is transferred to each trophic level from the lower trophic level

Ans: a

Expln:- all the statements given in the options are appropriate excepting the one that pyramid of energy is mostly upright, but sometimes it may be inverted.

47. Match the animals given in column A with their location in Column B.

	Column A		Column B
i	Dodo	a	Africa
ii	Quagga	b	Russia
iii	Thylacine	c	Mauritius
iv	Stellar's sea cow	d	Australia

Choose the correct match-

b) i – a, ii – c, iii – b, iv – d
c) i – d, ii – c, iii – a, iv – b
d) i – c, ii – a, iii – b, iv – d
e) i – c, ii – a, iii – d, iv – b`

Ans:- d

48. Which of the following is used as an atmospheric pollution indicator?

a) Lepidoptera b) Lichems
c) Lycopersicon d) Lycopodium

Ans:- b

49. The theory of spontaneous generation stated that

a) life arose from living forms only
b) life can arise from both living and non-living
c) life can arise from non-living things only.
d) life arises spontaneously, neither from living nor from the non-living.

Ans:- c

50. Animal husbandry and plant breeding programmes are the examples of –

a) reverse evolution b) artificial selection
c) mutation d) natural selection

Ans:- b

51. Paleantological evidences for evolution refer to the

a) development of embryo
b) homologous organs
c) fossils
d) analogous organs

Ans:- c

CHEMISTRY

168) Which of the following complexes formed by Cu^{2+} ions is most stable?

a) $Cu^{2+} + 4NH_3 \rightleftharpoons [Cu(NH_3)_4]^{2+}$, $\log K = 11.6$
b) $Cu^{2+} + 4CN^- \rightleftharpoons [Cu(CN)_4]^{2-}$, $\log K = 27.3$
c) $Cu^{2+} + 2en \rightleftharpoons [Cu(en)_2]^{2+}$, $\log K = 15.4$
d) $Cu^{2+} + 4H_2O \rightleftharpoons [Cu(H_2O)_4]^{2+}$, $\log K = 8.9$

Ans:- b

169) The colour of the coordination compounds depends on the crystal field splitting. What will be the correct order of absorption of wavelength of light in the visible region, for the complexes, $[Co(NH_3)_6]^{3+}$, $[Co(CN)_6]^{3-}$, $[Co(H_2O)_6]^{3+}$

a) $[Co(NH)_6]^{3-} > [Co(NH_3)_6]^{3+} > [Co(H_2O)_6]^{3+}$
b) $[Co(NH_3)_6]^{3+} > [Co(H_2O)_6]^{3+} > [Co(CN)_6]^{3-}$
c) $[Co(H_2O)_6]^{3+} > [Co(NH_3)_6]^{3+} > [Co(CN)_6]^{3-}$
d) $[Co(CN)_6]^{3-} > [Co(NH_3)_6]^{3+} > [Co(H_2O)_6]^{3+}$

Ans:- C

170) When 0.1 mol $CoCl_3(NH_3)_5$ is treated with excess of $AgNO_3$, 0.2 mol of AgCl are obtained. The conductivity of solution will correspond to

a) 1 : 3 electrolyte b) 1 : 2 electrolyte
c) 1 : 1 electrolyte d) 3 : 1 electrolyte

Ans: b

171) When 1 mol $CrCl_3 .6H_2O$ is treated with excess of $AGNO_3$, 3 mol of AgCl are obtained. The formula of the complex is:

A) $[CrCl_3(H_2O)_3].3H_2O$ B) $[CrCl_2(H_2O)_4]Cl.2H_2O$
C) $[CrCl(H_2O)_5]Cl_2.H_2O$ D) $[Cr(H_2O)_6]Cl_3$

Ans:-b

47.



Ans: (D)

172). Half life period of a first order reaction is 10 min. Starting with initial concentration 12m, the rate after 20 min is

(A) 0.693×3 M min^{-1} (B) 0.0693×4 M min^{-1}
(C) 0.0693 M min^{-1} (D) 0.0693×3 M min^{-1}

Ans: (D) 0.0693×3 M min^{-1}

$t_{1/2} = 10$ min

$t_{1/2} = \frac{0.693}{10} = 0.0693$

$12M = \xrightarrow{10\ min} 6\ M \xrightarrow{10\ min} 3M$

Rate = k[A]

Rate = 0.0693×3 M min^{-1}.

173) Iodoform can be prepared from all, except

(A) butan-2-one (B) acetophenone
(C) propan-2-ol (D) propan-1-ol

Ans: (D) propan-1-ol

Iodoform reaction requires a $H_3C-\underset{\underset{O}{\|}}{C}-$ group, which is not present in propan-1-ol even after oxidation.

174) The arrangement of the following compounds:

i) bromomethane ii) bromoform
iii) chloromethane iv) Dibromomethane
in the increasing order of their boiling point is

(A) iv < iii < i < ii (B) i < ii < iii < iv
(C) iii < i < iv < ii (D) ii < iii < i < iv

Ans: (C) iii < i < iv < ii

175) The complex ion having minimum magnitude of Δ_0 (CFSE) is........................

(A) $[Co(NH_3)_6]^{3+}$ (B) $[Cr(H_2O)_6]^{3+}$
(C) $[Cr(CN)_6]^{3-}$ (D) $[Co(Cl)_6]^{3-}$

Ans: (D) $[Co(Cl)_6]^{3-}$

Expln:-

Co^{3+} - d^6 low spin $\Delta_0 = 4 \times (-0.4) + 2\ (+0.6)$
$= -0.4\ \Delta_0$

Cr^{3+} - d^3 low spin $\Delta_0 = 4 \times (-0.4) = -1.6\ \Delta_0$.

176) Which of the following colloids cannot be easily coagulated?

(A) Multimolecular colloids
(B) Irreversible colloids
(C) Lyophobic colloids
(D) Macromolecular colloids

Ans: (D) Macromolecular colloids

177) After adding non-volatile solute freezing point of water decreases to -0.186^0 C. calculate ΔT_b if $K_f = 1.86$ K kg mol^{-1} and $K_b = 0.521$ K kg mol^{-1}.

(A) 0.0521 (B) 0.0186
(C) 0.521 (D) 1.86

Ans: (A) 0.0521

Expln:- 0.0521 $T_f = k_f \times m$

$0.186 = 1.86 \times m \quad \therefore m = 0.1$

$\Delta T_b = k_b \times m$

$0.521 \times 0.1 = 0.0521.$

178) Which of the following compounds of Xenon has pyramidal geometry?

(A) XeF_2 (B) XeF_4
(C) $XeOF_4$ (D) XeO_3

Ans: (D) XeO_3

Expln:- XeO_3 has sp^3 hybridization with one lone pair of electrons. Hence it has pyramidal geometry.



ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅಭಿಪ್ರಾಯ

ಶುಲ್ಕ ಭರಿಸಿದೆ

ಪ್ರಥಮ ದರ್ಜೆ ಪಿ.ಯು ಕಾಲೇಜು ಶುಲ್ಕದ ಬಾಕಿಯಿದ್ದ ಕೊನೆಯ ಕಂತನ್ನು ಪಾವತಿಸಲು 'ಪ್ರಜಾವಾಣಿ' ಕೊಟ್ಟ ವಿದ್ಯಾರ್ಥಿ ವೇತನ ನೆರವಿಗೆ ಬಂತು. ಬಡ ವಿದ್ಯಾರ್ಥಿಗಳಿಗೆ ಈ ನೆರವು ತುಂಬಾ ಪ್ರಯೋಜನವಾಗುತ್ತಿದೆ. ವಿದ್ಯಾರ್ಥಿ ವೇತನ ಕೊಟ್ಟಿದ್ದಕ್ಕೆ ಪ್ರಜಾವಾಣಿಗೆ ಧನ್ಯವಾದ.

–ಶ್ರುತಿ ಬಾಬು ಪಿಲಾರ್ (ಕೋಟೆಕಾರು), ಮಂಗಳೂರು

ಪಠ್ಯ ಖರೀದಿಗೆ ಉಪಯೋಗ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನವನ್ನು ಪಠ್ಯಪುಸ್ತಕ ಖರೀದಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯ ಖರೀದಿಗೆ ಬಳಸಿಕೊಂಡೆ. ವಿದ್ಯಾರ್ಥಿ ವೇತನದಿಂದ ತುಂಬಾ ಅನುಕೂಲವಾಯಿತು. ಮಧ್ಯಮ ವರ್ಗದ ನಮ್ಮಂಥವರಿಗೆ ಇದು ಸಹಕಾರಿಯಾಯಿತು. ಪತ್ರಿಕೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಇಂತಹ ವಿದ್ಯಾರ್ಥಿವೇತನ ನೀಡುತ್ತಿರುವುದು ಶ್ಲಾಘನೀಯ. ಇದು ಮುಂದುವರಿಯಲಿ ಎಂದು ಆಶಿಸುತ್ತೇನೆ.

–ಆರ್.ಯಶಸ್ವಿ, ಶಿವಮೊಗ್ಗ

ಚುನಾವಣಾ ಮಂತ್ರವಾಗಿಯೇ ಉಳಿದ ಒಗ್ಗಟ್ಟು ● ಫಲಿತಾಂಶದ ಬಳಿಕ ಪೈಪೋಟಿಯ ಗುಟ್ಟು ರಟ್ಟು

'ಅಲಕ್ಷ್ಯ'ಕ್ಕೆ ಮದ್ದು ಅರೆದರೆ ಶಿವಕುಮಾರ್?

● ವೈ.ಗ. ಜಗದೀಶ್

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ವಿವಿಧ ಸಂದರ್ಭದಲ್ಲಿ ಒಗ್ಗಟ್ಟು ಪ್ರದರ್ಶಿಸಿದ ದೃಶ್ಯಗಳು

ಬೆಂಗಳೂರು: ಹತ್ತು ವರ್ಷದ ಹಿಂದಿನ 'ಅಲಕ್ಷ್ಯ'ದ ಧೋರಣೆಯನ್ನೇ ಸವಾಲಾಗಿ ಸ್ವೀಕರಿಸಿದ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಪಟ್ಟಕ್ಕೆ ಬಿಗಿ ಪಟ್ಟು ಹಾಕುವ ಮೂಲಕ ಸಿದ್ದರಾಮಯ್ಯ ಅವರ ಕನಸಿಗೆ ಮದ್ದು ಅರೆದಿದ್ದಾರೆಯೇ?

ಈ ಬಾರಿ ಮುಖ್ಯಮಂತ್ರಿಯಾಗಲೇಬೇಕು ಎಂದು ಶಿವಕುಮಾರ್ ಹಾಕುತ್ತಿರುವ ಒತ್ತಡ ತಂತ್ರದ ಹಿಂದೆ, ಇಂತಹದೊಂದು ಕಾರಣವೂ ಇದೆ. 2013ರಲ್ಲಿ ಕಾಂಗ್ರೆಸ್‌ಗೆ ಪೂರ್ಣ ಅಧಿಕಾರ ಬಂದು ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಮೈಸೂರು ಮಿನರಲ್ಸ್‌ಗೆ ನಷ್ಟ ಉಂಟು ಮಾಡಿದ್ದರೆಂಬ ಆರೋಪವನ್ನೇ ಮುಂದಿಟ್ಟು ಶಿವಕುಮಾರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡಿರಲಿಲ್ಲ. ಸಂಪುಟಕ್ಕೆ ಸೇರುವ ಮಹದಾಕಾಂಕ್ಷೆ ಹೊಂದಿದ್ದ ಅವರು, ಹಲವು ರೀತಿಯ ಒತ್ತಡ ಹಾಕಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಜತೆಗೆ ಆಪ್ತ ಸಂಬಂಧ ಹೊಂದಿದ್ದ ಸಿದ್ದರಾಮಯ್ಯ, ಪಕ್ಷದಲ್ಲಿ ತಮ್ಮ ಪ್ರಬಲ ಹಿಡಿತ ಸಾಧಿಸಿದ್ದರು. ಸಿದ್ದರಾಮಯ್ಯ ಅವರು ದೆಹಲಿ ಭೇಟಿ ವೇಳೆ ಕರ್ನಾಟಕ ಭವನದಿಂದ ಕಾರಿನಲ್ಲಿ ಹೊರಟಾಗ, ಭೇಟಿಯಾದ ಶಿವಕುಮಾರ್ ಅವರು, 'ಯಾವಾಗ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುತ್ತೀರಿ' ಎಂದು ಕೇಳಿಕೊಂಡಿದ್ದರು. 'ಈಗ ಆಗಲ್ಲ; ಲೋಕಸಭೆ ಚುನಾವಣೆ ಮುಗಿದ ಮೇಲೆ ನೋಡೋಣ' ಎಂದು ಹೇಳಿದ್ದ ಮುಖ್ಯಮಂತ್ರಿ ಅಲ್ಲಿಂದ ಹೊರಟಿದ್ದರು. ಈ ಅಲಕ್ಷ್ಯದಿಂದ ಕುದಿದಿದ್ದ ಶಿವಕುಮಾರ್, ಆಗ ಸುಮ್ಮನಾಗಿದ್ದರು.

ಸಂಸದರಾಗಿದ್ದುಕೊಂಡೇ ವಿಧಾನಸಭೆ ಚುನಾವಣೆ ಎದುರಿಸಿ ಆಯ್ಕೆಯಾಗಿದ್ದ ಎಚ್‌.ಡಿ. ಕುಮಾರಸ್ವಾಮಿ (ಬೆಂಗಳೂರು ಗ್ರಾಮಾಂತರ) ಹಾಗೂ ಎನ್. ಚೆಲುವರಾಯಸ್ವಾಮಿ (ಮಂಡ್ಯ) ಅವರು ರಾಜೀನಾಮೆ ನೀಡಿದ್ದರು. ಹೀಗಾಗಿ, ಲೋಕಸಭೆಗೆ ಉಪ ಚುನಾವಣೆ ಎದುರಾಗಿತ್ತು. ಈ ಎರಡು ಕ್ಷೇತ್ರಗಳ ಚುನಾವಣೆ 2013ರ ಆಗಸ್ಟ್‌ನಲ್ಲಿ ನಡೆದಿತ್ತು. ಎರಡೂ ಕ್ಷೇತ್ರಗಳ ಚುನಾವಣೆ ಉಸ್ತುವಾರಿ ಶಿವಕುಮಾರ್ ಹೆಗಲೇರಿತ್ತು. ಗ್ರಾಮಾಂತರದಲ್ಲಿ ಡಿ.ಕೆ. ಸುರೇಶ್, ಮಂಡ್ಯದಲ್ಲಿ ರಮ್ಯಾ ಅವರನ್ನು ಗೆಲ್ಲಿಸಿಕೊಂಡು ಬಂದಿದ್ದರು. ಅದಕ್ಕೆ ಸಿದ್ದರಾಮಯ್ಯ ಕೂಡ ನೆರವು ನೀಡಿದ್ದರು.

ಚುನಾವಣೆ ಫಲಿತಾಂಶದ ಬಳಿಕವೂ ಶಿವಕುಮಾರ್ ಆಸೆ ಈಡೇರಿರಲಿಲ್ಲ. ಲೋಕಸಭೆ ಚುನಾವಣೆಯ ಗುಮ್ಮವನ್ನೇ ಮುಂದಿಡಲಾಗಿತ್ತು. ಆಗ ಹಟಕ್ಕೆ ಬಿದ್ದ ಶಿವಕುಮಾರ್, ವರಿಷ್ಠರ ಮೂಲಕ ನಿರ್ದೇಶನ ಕೊಡಿಸಿ 2014ರ ಜೂನ್‌ನಲ್ಲಿ ಸಂಪುಟಕ್ಕೆ ಸೇರಿದ್ದರು. ನಂತರ ನಡೆದ ಉಪ ಚುನಾವಣೆ ಉಸ್ತುವಾರಿಯಲ್ಲಿಯೂ ಯಶಸ್ಸು ತೋರಿದರು.

ಸಚಿವ ಸ್ಥಾನಕ್ಕೆ ಗೋಗರೆಯುವ ಪರಿಸ್ಥಿತಿಯಲ್ಲಿದ್ದ ಶಿವಕುಮಾರ್, ಈಗ ಮುಖ್ಯಮಂತ್ರಿ ಹುದ್ದೆಯನ್ನು ಯಾವುದೇ ಕಾರಣಕ್ಕೂ ಸಿದ್ದರಾಮಯ್ಯಗೆ ಬಿಟ್ಟುಕೊಡುವುದಿಲ್ಲ ಎಂಬಷ್ಟರ ಮಟ್ಟಿಗೆ ಪಕ್ಷದಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡಿದ್ದಾರೆ.

2017ರಲ್ಲಿ ಗುಜರಾತ್ ವಿಧಾನಸಭೆಯಿಂದ ರಾಜ್ಯಸಭಾ ಸದಸ್ಯರನ್ನು ಆಯ್ಕೆ ಮಾಡಲು ಚುನಾವಣೆ ನಡೆದಿತ್ತು. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯವರ ಆಪ್ತ ಕಾರ್ಯದರ್ಶಿ ಅಹ್ಮದ್ ಪಟೇಲ್ ಅವರನ್ನು ಸೋಲಿಸಲು ಅಂದು ಬಿಜೆಪಿ ಅಧ್ಯಕ್ಷರಾಗಿದ್ದ ಅಮಿತ್ ಶಾ ಕಾರ್ಯತಂತ್ರ ಹೆಣೆದಿದ್ದರು. ಆ ಹೊತ್ತಿನಲ್ಲಿ 42 ಶಾಸಕರನ್ನು ಬೆಂಗಳೂರಿಗೆ ಕಳುಹಿಸಿದಾಗ, ಅವರ ರಕ್ಷಣೆ-ಆರೈಕೆಯ ಜವಾಬ್ದಾರಿಯನ್ನು ಪಕ್ಷ ಶಿವಕುಮಾರ್ ಅವರಿಗೆ ಹೊರಿಸಿತ್ತು. ಅದನ್ನು ಸಮರ್ಥವಾಗಿ ನಿಭಾಯಿಸಿದರು. ಅಲ್ಲಿಂದ ಸೋನಿಯಾ ಮನಗೆದ್ದ ಶಿವಕುಮಾರ್, ಪಕ್ಷದಲ್ಲಿ ತಮ್ಮ ಹಿಡಿತ ಸಾಧಿಸುತ್ತಲೇ ಹೋದರು.

ಶಿವಕುಮಾರ್ ಅವರ ಈಗಿನ ಛಲ ನೋಡಿದರೆ, ದಶಕದ ಹಿಂದೆ ತಮ್ಮನ್ನು ಅಲಕ್ಷಿಸಿ, ಸಚಿವ ಸ್ಥಾನ ಕೊಡಲು ಸತಾಯಿಸಿದ್ದ ಸಿದ್ದರಾಮಯ್ಯನವರಿಗೆ ಪಾಠ ಕಲಿಸಬೇಕು ಎಂದು ಅವರು ನಿಶ್ಚಯಿಸಿದಂತೆ ತೋರುತ್ತದೆ. '2006ರಲ್ಲಿ ಕಾಂಗ್ರೆಸ್ ಸೇರಿದ ಸಿದ್ದರಾಮಯ್ಯನವರು 2009ರಿಂದ 2023ರವರೆಗೆ ಶಾಸಕಾಂಗ ಪಕ್ಷದ ನಾಯಕರಾಗಿದ್ದಾರೆ. ಮೈತ್ರಿ ಸರ್ಕಾರದ ಅವಧಿಯಲ್ಲಿ ಸಮನ್ವಯ ಸಮಿತಿಯ ಜತೆಗೆ ಶಾಸಕಾಂಗ ಪಕ್ಷದ ನಾಯಕರೂ ಆಗಿದ್ದರು. ಎಂಟು ವರ್ಷ ವಿರೋಧ ಪಕ್ಷದ ನಾಯಕ, ಐದು ವರ್ಷ ಪೂರ್ಣಾವಧಿ ಮುಖ್ಯಮಂತ್ರಿಯಾಗಿದ್ದಾರೆ. ಈ ಬಾರಿ ತಮಗೆ ಅಧಿಕಾರ ಬಿಟ್ಟುಕೊಡಲಿ' ಎಂಬ ವಾದವನ್ನೂ ಅವರು ಮುಂದಿಟ್ಟಿದ್ದಾರೆ.

ಮರೆಯಾದ ಒಗ್ಗಟ್ಟು: ವಿಧಾನಸಭೆ ಚುನಾವಣೆಗೆ ತಯಾರಿ ನಡೆಸಲು ಆರಂಭವಾದಾಗಿನಿಂದ ಸಿದ್ದರಾಮಯ್ಯ–ಶಿವಕುಮಾರ್ ಒಗ್ಗಟ್ಟಾಗಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಲೇ ಬಂದಿದ್ದಾರೆ.

ದಾವಣಗೆರೆಯಲ್ಲಿ ನಡೆದ 'ಸಿದ್ದರಾಮೋತ್ಸವ'ದಲ್ಲಿ ಇಬ್ಬರನ್ನೂ ಆಲಂಗಿಸಿ, ಒಗ್ಗಟ್ಟು ಪ್ರದರ್ಶಿಸುವಂತೆ ರಾಹುಲ್ ಗಾಂಧಿ ಸೂಚಿಸಿದ್ದರು. ಹೀಗಾಗಿ, ಇಬ್ಬರೂ ವೇದಿಕೆಯೇ ಮೇಲೆ ಭಿನ್ನಮತ ಇಲ್ಲವೆಂದು ತೋರಿಸಿದ್ದರು.

ಚುನಾವಣೆ ಹೊತ್ತಿಗೆ ಇಬ್ಬರೂ ಜತೆಗಿರುವ ಫೋಟೊಗಳನ್ನು ಪಕ್ಷ ಬಿಡುಗಡೆ ಮಾಡಿತ್ತು. ಯಾತ್ರೆಗಳನ್ನು ಜತೆಗೂಡಿಯೇ ಮಾಡಿದ್ದರು. ಮತದಾನ ಹತ್ತಿರವಾಗುತ್ತಿದ್ದಂತೆ ಇಬ್ಬರು ಪರಸ್ಪರ ಸಂದರ್ಶನ ಮಾಡುತ್ತಿರುವಂತಹ ವಿಡಿಯೊಗಳನ್ನು ಪಕ್ಷ ಬಿಡುಗಡೆ ಮಾಡಿತ್ತು.

ಫಲಿತಾಂಶ ಬಂದ ಮಾರನೇ ದಿನದಿಂದಲೇ ಮುಖಕ್ಕೆ ಮುಖಕೊಟ್ಟು ಮಾತನಾಡದಷ್ಟು ದೂರವಾಗಿದ್ದಾರೆ.

'ಟ್ರಬಲ್ ಶೂಟರ್ ಟ್ರಬಲ್'

ಕಾಂಗ್ರೆಸ್ ಪಕ್ಷ ಅಥವಾ ನಾಯಕರು ಸಂಕಷ್ಟಕ್ಕೆ ಸಿಕ್ಕಾಗಲೆಲ್ಲ ಅದನ್ನು ಪರಿಹರಿಸುವ ನಾಯಕ (ಟ್ರಬಲ್ ಶೂಟರ್) ಎಂದೇ ಬಿಂಬಿಸಿಕೊಂಡಿದ್ದ ಶಿವಕುಮಾರ್ ಅವರೇ ಈಗ ಪಕ್ಷದ ವರಿಷ್ಠರಿಗೆ 'ಟ್ರಬಲ್' ಆಗಿದ್ದಾರೆ.

2002ರಲ್ಲಿ ಮಹಾರಾಷ್ಟ್ರದಲ್ಲಿದ್ದ ವಿಲಾಸ್‌ರಾವ್ ದೇಶ್‌ಮುಖ್ ನೇತೃತ್ವದ ಸಮ್ಮಿಶ್ರ ಸರ್ಕಾರ ಅಲ್ಪಮತದ ಅಪಾಯಕ್ಕೆ ಸಿಲುಕಿತ್ತು. ಆಗ, ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿಗೆ ಕಳುಹಿಸಿದ್ದ ಹೈಕಮಾಂಡ್ ಅವರನ್ನು ಜೋಪಾನ ಮಾಡುವ ಹೊಣೆಯನ್ನು ಶಿವಕುಮಾರ್‌ಗೆ ವಹಿಸಿತ್ತು. ಅಲ್ಲಿ ಸುರಕ್ಷಿತ ವಾತಾವರಣ ನಿರ್ಮಾಣವಾಗುವವರೆಗೆ ಅವರನ್ನು ನೋಡಿಕೊಂಡು, ಬಳಿಕ ವಾಪಸ್ ಕಳುಹಿಸಿದ್ದರು. ಗುಜರಾತ್ ಶಾಸಕರಿಗೆ ರಕ್ಷಣೆ ಕೊಟ್ಟಿದ್ದಕ್ಕೆ ಆದಾಯ ತೆರಿಗೆ ದಾಳಿಯನ್ನೂ ಎದುರಿಸಿದರು.

2019ರಲ್ಲಿ ಮೈತ್ರಿ ಸರ್ಕಾರದ ಶಾಸಕರನ್ನು ಬಿಜೆಪಿ ನಾಯಕರು ಮುಂಬೈಗೆ ಕರೆದೊಯ್ದಿದ್ದರು. ಅಲ್ಲಿಗೆ ತೆರಳಿದ್ದ ಶಿವಕುಮಾರ್, ಹೋಟೆಲ್ ಮುಂದೆ ಧರಣಿ ನಡೆಸಿದ್ದರು.

ಈ ಸಂಭಾಷಣೆ.. ಮಧುರ..!

- ಸರ್... ಹೆಲಿಕಾಪ್ಟರ್ ಪ್ರಯಾಣ ಮಾಡುವಾಗ ದೊಡ್ಡ ಯಡವಟ್ಟಾಗಿಬಿಟ್ಟಿತ್ತು. ದೊಡ್ಡ ಹಕ್ಕಿ ಎದುರುಗಡೆಯಿಂದ ಬಂದು ಡಿಕ್ಕಿ ಹೊಡೆಯಿತು. ಗಾಜು ಒಡೆದು ಒಂದು ಕ್ಷಣ ಬಿದ್ದು ಬಿಡುವಂತಾಗಿತ್ತು. ತುಂಬಾ ಎತ್ತರದಲ್ಲಿ ಇದ್ದಿದ್ದರಿಂದ ಪೈಲಟ್‌ಗೆ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಾಯಿತು. ಚೂರು ಹೆಚ್ಚು ಕಡಿಮೆ ಆಗಿದ್ದರೂ ನಾನು, ನೀವು ಭೇಟಿ ಮಾಡುತ್ತಿರಲಿಲ್ಲ. ದೇವರು ದೊಡ್ಡವನು. ನೀವೂ ಕೂಡ ಹುಷಾರು. ನಿಮ್ಮ ಆರೋಗ್ಯ ಹೇಗಿದೆ?

ಡಿ.ಕೆ. ಶಿವಕುಮಾರ್

- ಒಳ್ಳೆಯ ಪೈಲಟ್ ಸಿಕ್ಕಿದ್ದಾನೆ ನಿಮಗೆ. ಇಲ್ಲದಿದ್ದರೆ ನೀವು ಕೆಳಗಡೆ ಬಿದ್ದು ಹೋಗಿ ಬಿಟ್ಟಿದ್ರೆ. ನನಗೆ ಮರುದಿನ ಗೊತ್ತಾಯ್ತು. ದೇವರು ದೊಡ್ಡವನು. ನೀವು ನಿಜಕ್ಕೂ ಅದೃಷ್ಟವಂತರು. ನಾನು ಚೆನ್ನಾಗಿದ್ದೇನೆ. ಆದರೆ ವೈರಸ್ ಸೋಂಕಿನಿಂದ ಕೈ ಊದಿಕೊಂಡಿತ್ತು. ಜ್ವರ ಬೇರೆ ಬಂದು ತುಂಬಾ ಸಮಸ್ಯೆಯಾಗಿತ್ತು. ಈಗ ಕಡಿಮೆಯಾಗಿದೆ

ಸಿದ್ದರಾಮಯ್ಯ

3ನೇ ಆಯ್ಕೆಗೆ ಸಿದ್ಧ– ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕಮಾಂಡ್‌ನಿಂದ ಮೂರನೇ ಆಯ್ಕೆ ಬಂದರೆ ನಾನು ಸಿದ್ಧ' ಎಂದು ಕಾಂಗ್ರೆಸ್ ಶಾಸಕ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿ, 'ನಾನು ಪಕ್ಷದ ಶಿಸ್ತಿನ ಸಿಪಾಯಿ. ನಾನು ಯಾವಾಗಲೂ ಸಿದ್ಧವಾಗಿದ್ದೇನೆ. ಅಂತಿಮವಾಗಿ ಹೈಕಮಾಂಡ್ ನಿರ್ಧಾರ ಮಾಡಲಿದೆ' ಎಂದು ಹೇಳಿದರು.

'ಮಲ್ಲಿಕಾರ್ಜುನ ಖರ್ಗೆ ಅಥವಾ ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡಿ ಎಂದು ಕೆಲವೆಡೆ ಪ್ರತಿಭಟನೆ ಮಾಡಿದ್ದಾರೆ. ಕೇಳುವುದು ತಪ್ಪಲ್ಲ. ಹೈಕಮಾಂಡ್ ಇದನ್ನು ಪರಿಗಣಿಸಬೇಕಾಗುತ್ತದೆ. ದಲಿತ ಸಮುದಾಯದವರು ಕಾಂಗ್ರೆಸ್‌ಗೆ ಮತ ಹಾಕುತ್ತಲೇ ಬಂದಿದ್ದಾರೆ' ಎಂದರು.

'ನನಗೆ ಹೆಚ್ಚಿನ ಶಾಸಕರ ಬೆಂಬಲವಿದೆ' ಎಂದು ಸಿದ್ದರಾಮಯ್ಯ ಅವರು ಹೇಳಿಕೊಂಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಯಾರಿಗೆ ಎಷ್ಟು ಜನ ಬೆಂಬಲಿಸಿದ್ದಾರೆ ಎಂದು ಹೈಕಮಾಂಡ್ ಹೇಳುವುದಿಲ್ಲ. ತಮಗೆ ಹೆಚ್ಚು ಸಂಖ್ಯೆಯ ಶಾಸಕರ ಬೆಂಬಲ ಇದೆಯೆಂದು ಸಿದ್ದರಾಮಯ್ಯ ಅವರ ಊಹೆ ಇರಬಹುದು. ತಮ್ಮ ಬಲ ಹೆಚ್ಚಿದೆ ಎಂದು ತೋರಿಸಿಕೊಳ್ಳಲು ಅವರು ಹಾಗೆ ಹೇಳಿರಬಹುದು' ಎಂದೂ ಅವರು ಅಭಿಪ್ರಾಯಪಟ್ಟರು.

ಸುಧಾ
ಮಯೂರ ಓದಿರಿ

ಸುಧಾಕರ್, ಸೋಮಶೇಖರ್ ಟ್ವೀಟ್‌ಗೆ ಎಂ.ಟಿ.ಬಿ. ನಾಗರಾಜ್ ಗರಂ

'ಮೈತ್ರಿ ಸರ್ಕಾರ ಪತನ: ಸಿದ್ದರಾಮಯ್ಯ ಪಾತ್ರವೇನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮ್ಮಿಶ್ರ ಸರ್ಕಾರದ ಪತನದಲ್ಲಿ ಸಿದ್ದರಾಮಯ್ಯ ಅವರ ಪಾತ್ರ ನಿರಾಕರಿಸಲು ಸಾಧ್ಯವೇ' ಎಂದು ಮಾಜಿ ಸಚಿವರಾದ ಡಾ.ಕೆ. ಸುಧಾಕರ್ ಮತ್ತು ಎಸ್‌.ಟಿ. ಸೋಮಶೇಖರ್ ಟ್ವೀಟ್ ಮಾಡಿದ್ದು, ಇದಕ್ಕೆ ಪ್ರತಿಕ್ರಿಯೆ ನೀಡಿರುವ ಮಾಜಿ ಸಚಿವ ಎಂ.ಟಿ.ಬಿ. ನಾಗರಾಜ್ 'ಸೋಲಿನಿಂದ ಭ್ರಮನಿರಸನಗೊಂಡಿರುವ ಸುಧಾಕರ್ ಈ ರೀತಿ ಹೇಳಿಕೆ ನೀಡಿದ್ದಾರೆ' ಎಂದಿದ್ದಾರೆ.

ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಗಾಗಿ ಪೈಪೋಟಿ ತಾರಕಕ್ಕೇರಿರುವ ಬೆನ್ನಲ್ಲೇ ಬಿಜೆಪಿಯ ಮೂವರು ನಾಯಕರು ಟ್ವೀಟ್ ಮಾಡಿದ್ದಾರೆ.

ಸುಧಾಕರ್ ಹೇಳಿದ್ದು: '2018ರಲ್ಲಿ ಅಂದಿನ ಜೆಡಿಎಸ್– ಕಾಂಗ್ರೆಸ್ ಸರ್ಕಾರದಲ್ಲಿ ನಮಗಾಗುತ್ತಿದ್ದ ಅನ್ಯಾಯದ ಬಗ್ಗೆ ಹೇಳಿಕೊಳ್ಳಲು ಶಾಸಕರುಗಳ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯ ಅವರ ಬಳಿ ಹೋದಾಗಲೆಲ್ಲ ಈ ಸರ್ಕಾರದಲ್ಲಿ ನನ್ನದೇ ಏನು ನಡೆಯುತ್ತಿಲ್ಲ. ನನ್ನ ಕ್ಷೇತ್ರದ, ನನ್ನ ಜಿಲ್ಲೆಯ ಕೆಲಸಗಳೇ ಆಗುತ್ತಿಲ್ಲ ಎನ್ನುತ್ತಿದ್ದರು'.

'2019ರ ಲೋಕಸಭೆ ಚುನಾವಣೆವರೆಗೂ ಸಹಿಸಿಕೊಳ್ಳಿ, ಲೋಕಸಭೆ ಚುನಾವಣೆ ಮುಗಿದ ನಂತರ ಯಾವುದೇ ಕಾರಣಕ್ಕೂ ಒಂದು ದಿವಸವೂ ಕುಮಾರಸ್ವಾಮಿ ಅವರ ನೇತೃತ್ವದ ಸಮ್ಮಿಶ್ರ ಸರ್ಕಾರ ಇರಲು ಬಿಡುವುದಿಲ್ಲ ಎಂದು ಶಾಸಕರಿಗೆ ಸಮಾಧಾನ ಮಾಡುತ್ತಿದ್ದರು'.

'ನಮ್ಮ ಕ್ಷೇತ್ರಗಳಲ್ಲಿ ನಮ್ಮನ್ನು ನಂಬಿದ ಕಾರ್ಯಕರ್ತರನ್ನು ಮುಖಂಡರನ್ನು ಉಳಿಸಿಕೊಳ್ಳಲು ದೊಡ್ಡ ರಿಸ್ಕ್ ತೆಗೆದುಕೊಂಡು ರಾಜೀನಾಮೆ ನೀಡಿ ಮತ್ತೊಮ್ಮೆ ಜನರಿಂದ ಆರಿಸಿ ಬಂದು ಮಂತ್ರಿಗಳಾದೆವು. ನಮ್ಮ ನಡೆಯಲ್ಲಿ ಸಿದ್ದರಾಮಯ್ಯನವರ ಪ್ರೇರಣೆ, ಪರೋಕ್ಷ ಅಥವಾ ಅಪರೋಕ್ಷ ಪಾತ್ರ ಇಲ್ಲವೆಂದು ಸಿದ್ದರಾಮಯ್ಯ ಅವರು ನಿರಾಕರಿಸಲು ಸಾಧ್ಯವೇ'.

ಎಸ್.ಟಿ. ಸೋಮಶೇಖರ್ ಹೇಳಿದ್ದು: 'ಸಿದ್ದರಾಮಯ್ಯ ಅವರ ಅಸಹಾಯಕತೆ ಸಹ ನಾವು ಪಕ್ಷ ಬಿಡಲು ಪ್ರೇರಣೆಯಾಯಿತು ಎಂದರೆ ಅದು ತಪ್ಪಾಗಲಾರದು. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸಿದ್ದರಾಮಯ್ಯ ತೋಡಿಕೊಳ್ಳುತ್ತಿದ್ದ ಅಸಹಾಯಕತೆ, ಕೊಡುತ್ತಿದ್ದ ಆಶ್ವಾಸನೆಗಳು ಸತ್ಯ'.

ಬೈರತಿ ಬಸವರಾಜ್ ಹೇಳಿದ್ದು: '2018ರ ಸಮ್ಮಿಶ್ರ ಸರ್ಕಾರದಲ್ಲಿ ನಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಸಹಕಾರವೇ ಸಿಗದಿದ್ದಾಗ, ನಮ್ಮ ಸಮಸ್ಯೆ ಬಗೆಹರಿಸುವ ಸ್ಥಾನದಲ್ಲಿದ್ದ ಸಿದ್ದರಾಮಯ್ಯ ಅವರನ್ನು ವಿನಂತಿಸಿದರೂ ಸ್ವತಃ ನನಗೇ ಸಮಸ್ಯೆ ಇದೆ. 2019ರ ಚುನಾವಣೆವರೆಗೆ ಮಾತ್ರ ಈ ಸರ್ಕಾರ ಇರಲಿದೆ ಎಂದಿದ್ದರು. ಆದ್ದರಿಂದ ಕ್ಷೇತ್ರದ ಅಭಿವೃದ್ಧಿಗಾಗಿ ರಾಜೀನಾಮೆ ನೀಡಿದೆವು'

ದೇವರ ಮೇಲೆ ಸುಧಾಕರ್ ಪ್ರಮಾಣ ಮಾಡಲಿ: ಎಂಟಿಬಿ

'ಬಿಜೆಪಿ ಸೇರಲು ಸಿದ್ದರಾಮಯ್ಯ ಪ್ರೇರಣೆ, ಪರೋಕ್ಷ ಅಥವಾ ಅಪರೋಕ್ಷ ಪಾತ್ರ ಇತ್ತೆಂದು ಸುಧಾಕರ್ ಅವರು ತಮ್ಮ ಮನೆ ದೇವರ ಮೇಲೆ ಪ್ರಮಾಣ ಮಾಡಿ ಹೇಳುವರೇ' ಎಂದು ಮಾಜಿ ಸಚಿವ, ಬಿಜೆಪಿ ನಾಯಕ ಎಂ.ಟಿ.ಬಿ.ನಾಗರಾಜ್ ಸವಾಲು ಹಾಕಿದ್ದಾರೆ.

ಸುಧಾಕರ್ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಅವರು, 'ಇಷ್ಟು ದಿನ ಮೌನವಾಗಿದ್ದು, ಈಗ ಇದರ ಪ್ರಸ್ತಾಪದ ಮರ್ಮವಾದರೂ ಏನು' ಎಂದು ಪ್ರಶ್ನಿಸಿದ್ದಾರೆ. 'ಸಿದ್ದರಾಮಯ್ಯ ಅವರನ್ನು ನಾನೂ ಕೂಡ ಹಲವಾರು ಬಾರಿ ಭೇಟಿ ಮಾಡಿ ಸಮ್ಮಿಶ್ರ ಸರ್ಕಾರದಲ್ಲಿ ನಮ್ಮ ಕ್ಷೇತ್ರದಲ್ಲಿ ಹಾಗೂ ನಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ಯಾವುದೇ ಕೆಲಸಗಳು ಆಗುತ್ತಿಲ್ಲ ಎಂದು ಹೇಳಿಕೊಂಡಾಗ, ಲೋಕಸಭೆ ಚುನಾವಣೆವರೆಗೆ ಸುಮ್ಮನಿರಿ ಎಂದು ಹೇಳಿದ್ದು ನಿಜ' ಎಂದು ತಿಳಿಸಿದ್ದಾರೆ. 'ಸುಧಾಕರ್ ಅವರ ಮಾತುಗಳು ಸತ್ಯಕ್ಕೆ ದೂರವಾಗಿದ್ದು, ಅವರು ಚುನಾವಣೆಯಲ್ಲಿ ಸೋತ ನಂತರ ಭ್ರಮನಿರಸನರಾಗಿ ಈ ಮಾತುಗಳನ್ನು ಹೇಳಿದ್ದಾರೆ' ಎಂದಿದ್ದಾರೆ.

'ಮುಂದಿನ ವಾರ ವಿಪಕ್ಷ ನಾಯಕನ ಆಯ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷಕ್ಕೆ ಮುಖ್ಯಮಂತ್ರಿ ಯಾರೆಂದು ಆಯ್ಕೆ ಮಾಡಲು ಸಾಧ್ಯವಾಗಿಲ್ಲ. ಆ ಪಕ್ಷದವರೇ ಊಹಾಪೋಹಗಳನ್ನು ಹರಿಯ ಬಿಟ್ಟು, ಈಗ ಬಿಜೆಪಿ ವಿರುದ್ಧ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಯಾರನ್ನಾದರೂ ಮುಖ್ಯಮಂತ್ರಿಯಾಗಿ ಮಾಡಲಿ. ಜನ ಅವರಿಗೆ ಬಹುಮತ ಕೊಟ್ಟಿದ್ದಾರೆ. ಅದು ಅವರ ಪಕ್ಷದ ಆಂತರಿಕ ವಿಚಾರ. ನಾವು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇವೆ' ಎಂದರು.

'ಮುಂದಿನ ವಾರ ವಿರೋಧ ಪಕ್ಷದ ನಾಯಕನ ಆಯ್ಕೆ ನಡೆಯಲಿದೆ. ಹೊಸದಾಗಿ ಆಯ್ಕೆಯಾದ ಶಾಸಕರು ಒಂದು ವಾರ ತಮ್ಮ ಕ್ಷೇತ್ರದಲ್ಲಿದ್ದು ಜನರಿಗೆ, ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಲಿದ್ದಾರೆ ಎಂದು ಹೇಳಿದರು.

'ಗ್ಯಾರಂಟಿ ಅಡಿ ಉಚಿತ ವಿದ್ಯುತ್ ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದ್ದರಿಂದ ಜನತೆ ವಿದ್ಯುತ್ ಬಿಲ್ ಕಟ್ಟಬಾರದು. ವಿದ್ಯುತ್ ಬಿಲ್ ಕಟ್ಟುವುದಿಲ್ಲ ಎಂದು ಜನರು ಗಲಾಟೆ ಮಾಡುವುದು ಸಹಜ' ಎಂದು ನಳಿನ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಲಿಂಗಾಯತರಿಗೆ ಯಾವ ಹುದ್ದೆ: ಬೊಮ್ಮಾಯಿ

ಬೆಂಗಳೂರು: 'ಕಾಂಗ್ರೆಸ್‌ನವರು ಚುನಾವಣೆ ವೇಳೆ ಲಿಂಗಾಯತರ ಬಗ್ಗೆ ಬಹಳ ಮಾತನಾಡಿದ್ದರು. ಈಗ ಲಿಂಗಾಯತ ನಾಯಕರಿಗೆ ಯಾವ ಸ್ಥಾನ ಕೊಡುತ್ತಾರೆ ನೋಡೋಣ' ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್‌ನವರು ಲಿಂಗಾಯತ ನಾಯಕರಿಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಯಾವ ಯಾವ ಹುದ್ದೆಗಳನ್ನು ನೀಡುತ್ತಾರೆ ಎಂಬ ಕುತೂಹಲವಿದೆ' ಎಂದರು. 'ಜನರು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಜನರ ಮತ್ತು ರಾಜ್ಯದ ಅಭಿವೃದ್ಧಿ ಮಾಡಲಿ. ಅವರಿಗೆ ಇಲ್ಲಿಯವರೆಗೂ ಮುಖ್ಯಮಂತ್ರಿ ಆಯ್ಕೆ ಮಾಡಲು ಆಗುತ್ತಿಲ್ಲ. ಆದಷ್ಟು ಬೇಗ ಮಾಡಲಿ' ಎಂದು ಹೇಳಿದರು.

'ಪೂರ್ಣ ಬಹುಮತ ಇದ್ದರೂ ಮುಖ್ಯಮಂತ್ರಿ ಆಯ್ಕೆ ನಿರ್ಧಾರ ಮಾಡದೇ ಇರುವುದನ್ನು ನೋಡಿದಾಗ ಅವರ ಪಕ್ಷದಲ್ಲಿ ಹೊಂದಾಣಿಕೆ ಇಲ್ಲ ಎನ್ನುವುದನ್ನು ತೋರಿಸುತ್ತದೆ. ಅದು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ತಮ್ಮ ರಾಜಕೀಯ ಬಿಟ್ಟು ಆದಷ್ಟು ಬೇಗ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿ ಜನರ ಸೇವೆ ಮಾಡಲಿ' ಎಂದೂ ಹೇಳಿದರು.

'ಸಿದ್ದರಾಮಯ್ಯ ಸಿ.ಎಂ' ಎಂದವರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಆಯ್ಕೆ ಕುರಿತಂತೆ ಹೈಕಮಾಂಡ್ ಚರ್ಚೆ ನಡೆಸುತ್ತಿದ್ದಾಗ, 'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಲಿದ್ದಾರೆ' ಎಂದು ಬುಧವಾರ ಬೆಳಿಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿದ ಪಕ್ಷದ ಇಬ್ಬರು ಪ್ರಮುಖರಿಗೆ ನೋಟಿಸ್ ನೀಡುವಂತೆ ಕಾಂಗ್ರೆಸ್ ಶಿಸ್ತುಪಾಲನಾ ಸಮಿತಿಗೆ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸೂಚಿಸಿದ್ದಾರೆ.

'ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಹೆಸರು ಅಂತಿಮವಾಗಿದೆ. ಹೈಕಮಾಂಡ್ ಘೋಷಣೆಯಷ್ಟೆ ಬಾಕಿ ಇದೆ' ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಮತ್ತು ರಾಮದುರ್ಗ ಶಾಸಕ ಅಶೋಕ ಪಟ್ಟಣ ಹೇಳಿಕೆ ನೀಡಿದ್ದರು. ಅವರಿಬ್ಬರಿಗೂ ನೋಟಿಸ್ ನೀಡುವಂತೆ ಸೂಚನೆ ನೀಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

'ನಂಬಿದವರೇ ಕತ್ತು ಕೊಯ್ದರು'

ಚಾಮರಾಜನಗರ: 'ಚಾಮರಾಜನಗರ ಕ್ಷೇತ್ರದಲ್ಲಿ ಪಕ್ಷದ ಸೋಲಿಗೆ ಲಿಂಗಾಯತ ಮುಖಂಡರೇ ಕಾರಣ. ನಾನು ನಂಬಿದವರೇ ಕತ್ತು ಕೊಯ್ದರು' ಎಂದು ಬಿಜೆಪಿ ಪರಾಜಿತ ಅಭ್ಯರ್ಥಿ ವಿ.ಸೋಮಣ್ಣ ಬುಧವಾರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ನಡೆದ ಕೃತಜ್ಞತಾ ಸಭೆಯಲ್ಲಿ ಯಾರ ಹೆಸರನ್ನೂ ಉಲ್ಲೇಖಿಸದೆ ವಾಗ್ದಾಳಿ ನಡೆಸಿದ ಅವರು, ಕೆಲವು ಅಶ್ಲೀಲ ಪದಗಳನ್ನು ಬಳಸಿದರು. ಸಭೆ ಆರಂಭವಾಗುತ್ತಲೇ ಕೆಲವು ಕಾರ್ಯಕರ್ತರು 'ಒಳೇಟಿನಿಂದಾಗಿ ಸೋಲಾಗಿದೆ' ಎಂದು ಗದ್ದಲ ಎಬ್ಬಿಸಿದರು.

ಈ ಸಂದರ್ಭದಲ್ಲಿ ಸೋಮಣ್ಣ ಮಾತನಾಡಿ, 'ನನ್ನನ್ನು ಸೋಲಿಸಲು ಅಲ್ಲಿಂದಲೇ ನಿರ್ದೇಶನ ಬಂದಿತ್ತು. ಜಿಲ್ಲೆಯನ್ನು ಅಭಿವೃದ್ಧಿ ಮಾಡುವ ಕನಸು ಕಂಡಿದ್ದೆ. ನಾಲ್ಕು ವರ್ಷಗಳಲ್ಲೇ ಅಭಿವೃದ್ಧಿ ಮಾಡುತ್ತಿದ್ದೆ. 45 ವರ್ಷ ರಾಜಕೀಯ ಮಾಡಿದ್ದೇನೆ. ನನಗೆ ಎಲ್ಲವೂ ಗೊತ್ತು. ಯಥಾ ರಾಜ ತಥಾ ಪ್ರಜಾ. ಪಕ್ಷದ್ರೋಹ ಮಾಡಿದವರಿಗೆ ಚಪ್ಪಲಿಯಲ್ಲಿ ಹೊಡೆಯಿರಿ. ಪಕ್ಷದ ಜಿಲ್ಲಾಧ್ಯಕ್ಷರೇ, ನಿಮಗೆ ನೈತಿಕತೆ ಇದ್ದರೆ ಅಂತಹವರನ್ನು ಪಕ್ಷದ ಕಚೇರಿಯಿಂದ ದೂರ ಇರಿಸಿ' ಎಂದು ಖಾರವಾಗಿ ಹೇಳಿದರು.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

G20 ಭಾರತ 2023 INDIA
वसुधैव कुटुम्बकम्
ONE EARTH · ONE FAMILY · ONE FUTURE

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಬೈಯಪ್ಪನಹಳ್ಳಿ ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ಸ್ಟಾಪ್ ಹತ್ತಿರ, ಬೆಂಗಳೂರು – 560 038. ದೂರವಾಣಿ: 080-25191039.
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ಸಂಖ್ಯೆ: ಬಿಎಂಆರ್‌ಸಿಎಲ್/ಒ&ಎಂ/ಟಿಆರ್/66ಕೆವಿ ಇಕ್ವಿಪಿಟಿ/ 2023-24/01 ದಿನಾಂಕ: 18.05.2023

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ "ಸ್ವೀಕರಣ ಉಪಕೇಂದ್ರಗಳಲ್ಲಿ 66 ಕೆವಿ ಉಪಕರಣ ಮತ್ತು ಸಂಬಂಧಿಸಿದ ಸಹಾಯಕ ಭಾಗಗಳ ವಾರ್ಷಿಕ ನಿರ್ವಹಣೆ ಗುತ್ತಿಗೆಗಾಗಿ (ಎಎಂಸಿ)" ಅರ್ಹ ಟೆಂಡರುದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ. ಟೆಂಡರ್ ದಸ್ತಾವೇಜಿನ ಬೆಲೆ (ಹಿಂದಿರುಗಿಸುವುದಿಲ್ಲ): **ರೂ. 29,500/-** [25000+4500 (ಜಿಎಸ್‌ಟಿ 18% ನಂತೆ)]. ದಸ್ತಾವೇಜುಗಳ ಆನ್‌ಲೈನ್ ಮಾರಾಟ: **18.05.2023** ರಿಂದ **17.06.2023** ರಂದು ಮಧ್ಯರಾತ್ರಿ ವರೆಗೆ. ಟೆಂಡರ್ ಸಲ್ಲಿಸುವ ದಿನಾಂಕ: **30.06.2023** ರಂದು ಮಧ್ಯಾಹ್ನ **3.00** ಗಂಟೆ ವರೆಗೆ. ಟೆಂಡರ್ ತೆರೆಯುವ ದಿನಾಂಕ: **30.06.2023** ರಂದು ಮಧ್ಯಾಹ್ನ **3.30** ಗಂಟೆಗೆ. ಹೆಚ್ಚಿನ ವಿವರಗಳಿಗೆ **18.05.2023** ರಿಂದ ನಮ್ಮ ವೆಬ್‌ಸೈಟ್: **www.bmrc.co.in** ಇಲ್ಲಿಗೆ ಭೇಟಿ ನೀಡಿ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಒ&ಎಂ)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ))

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ(ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ದಕ್ಷಿಣ–2	ಬೆಂಜಮಂ/ಕಾನಿಅ(ದಕ್ಷಿಣ–2)/ತಾಂಅ/ಪಿಬಿ/67/2023–24 ದಿನಾಂಕ: 15.05.2023	ರೂ. 51,10,704/– / ರೂ. 1,02,300/–	29.05.2023ರ ಸಂಜೆ 4:00 ಗಂಟೆಯವರೆಗೆ	31.05.2023ರ ಸಂಜೆ 4:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ–2).

ಮುಖ್ಯ ಅಭಿಯಂತರರ ಕಚೇರಿ(ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
2	ಪಶ್ಚಿಮ–2	ಬೆಂಜಮಂ/ಕಾನಿಅ(ಪಶ್ಚಿಮ–2)/ಪಿಬಿ/112/2023–24 ದಿನಾಂಕ: 15.05.2023	ರೂ. 18,72,512/– / ರೂ. 46,900/–	05.06.2023ರ ಮಧ್ಯಾಹ್ನ 3:00 ಗಂಟೆಯವರೆಗೆ	07.06.2023ರ ಮಧ್ಯಾಹ್ನ 3:00 ಗಂಟೆಯ ನಂತರ
3		ಬೆಂಜಮಂ/ಕಾನಿಅ(ಪಶ್ಚಿಮ–2)/ಪಿಬಿ/114/2023–24 ದಿನಾಂಕ: 15.05.2023	ರೂ. 91,67,342/– / ರೂ. 1,83,400/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಪಶ್ಚಿಮ–2).

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು https://eproc.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ
ವಾ.ಸಾ.ಸಂ.ಇ/ವಾ.ಪ್ರ/ರೆ.ಅ/60/2023–24

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ–577501
E-mail: dcpocta@gmail.com Ph: 08194-234992

ಪೋಷಕರ ಪತ್ತೆಗಾಗಿ ಮನವಿ

ಬಾಲಕಿಯನ್ನು ಮುರುಘಮಠದ ಅಕ್ಕಮಹಾದೇವಿ ವಸತಿ ನಿಲಯದಿಂದ ರಕ್ಷಿಸಿ, ಹಾಲಿ ಬಾಲಕಿಯರ ಸರ್ಕಾರಿ ಬಾಲಮಂದಿರ ಚಿತ್ರದುರ್ಗ ನಿವಾಸಿಯಾಗಿದ್ದು, ಬಾಲಕಿಯ ತಂದೆ–ತಾಯಿ ಮತ್ತು ಸಂಬಂಧಿಕರ ಪತ್ತೆಗಾಗಿ ಪ್ರಕಟಣೆ ಹೊರಡಿಸಲಾಗಿದೆ.
ಬಾಲಕಿಯ ಹೆಸರು:– ಸಂಸ್ಕೃತಿ. ವಯಸ್ಸು ಮತ್ತು ಗೊತ್ತಿರುವ ಭಾಷೆ:– 17 ವರ್ಷ, ಭಾಷೆ ಕನ್ನಡ. ಬಾಲಕಿ ಸಿಕ್ಕಿದ ಸ್ಥಳ:– ಚಿತ್ರದುರ್ಗದ ಮುರುಘ ಮಠದ ಅಕ್ಕಮಹಾದೇವಿ ವಸತಿ ನಿಲಯ. ಮೈಬಣ್ಣ:–ಗೋಧಿ ಬಣ್ಣ. ತೂಕ: 56 ಕೆ.ಜಿ. ಬಾಲಕಿಯ ಎತ್ತರ 154 ಸೆ.ಮೀ ತಂದೆ ಹೆಸರು:– ಬಸಣ್ಣ. ತಾಯಿಯ ಹೆಸರು:– ಬಸಮ್ಮ. ಗುರುತಿಸುವ ಚಿಹ್ನೆ:– ದುಂಡು ಮುಖ, ಬಾಲಕಿಯ ಆರೋಗ್ಯ ಸ್ಥಿತಿ:– ಉತ್ತಮ. ಪೋಷಕರು ಪತ್ತೆಯಾದರೆ ಸಂಪರ್ಕಿಸುವ ವಿಳಾಸ:– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅಥವಾ ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ ಚಿತ್ರದುರ್ಗ. ದೂರವಾಣಿ ಸಂಖ್ಯೆ: 8970072609

DIPR/CTA/MCA/05/2023-24 ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು

ಭಾರತ ಸರ್ಕಾರ
ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ
ಅಪರ ನಿರ್ದೇಶಕರ ಕಚೇರಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ,
3ನೇ ಅಂತಸ್ತು , ಇ-ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-560 034

ಶೇಷಾದ್ರಿಪುರಂನಲ್ಲಿ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ಗಳನ್ನು ಸ್ಥಳಾಂತರಿಸಲು ವಸತಿ/ವಾಣಿಜ್ಯ ಪ್ರದೇಶದಲ್ಲಿ ಸ್ಥಳಾವಕಾಶ ಬೇಕಾಗಿದೆ

ಸಿಜಿಹೆಚ್‌ಎಸ್, ಬೆಂಗಳೂರು, ಇವರು ಮಲ್ಲೇಶ್ವರಂ ಪ್ರದೇಶದಲ್ಲಿ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ನ್ನು ಸ್ಥಳಾಂತರಿಸಲು ಕೇಂದ್ರ, ಸ್ಥಳದಲ್ಲಿ ಆದ್ಯನೀಯವಾಗಿ ನೆಲ ಮಹಡಿಯಲ್ಲಿ (ಅಥವಾ) 1ನೇ ಮಹಡಿಯಲ್ಲಿ ಲಿಫ್ಟ್ ಸಮೇತ ಸೂಕ್ತವಾದ ಸ್ಥಳಾವಕಾಶಕ್ಕಾಗಿ ಆಸಕ್ತಿಯುಳ್ಳ ವ್ಯಕ್ತಿಗಳಿಂದ ಆಫರುಗಳನ್ನು ಆಹ್ವಾನಿಸಿದ್ದಾರೆ.
ಆಸಕ್ತಿಯುಳ್ಳ ವ್ಯಕ್ತಿಗಳು ಕಟ್ಟಡದ ನಕ್ಷೆಯ ಜೊತೆಗೆ ತಮ್ಮ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು **'ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಇ-ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ್, ಕೋರಮಂಗಲ, ಬೆಂಗಳೂರು – 560034'** ಇವರಿಗೆ ದಿನಾಂಕ: **31.05.2023ರ ವೇಳೆಗೆ** ಮುನ್ನ ಸಲ್ಲಿಸತಕ್ಕದ್ದು. ಸ್ಥಳಾವಕಾಶಕ್ಕಾಗಿ ನೀಡಿರುವ ಈ ಜಾಹೀರಾತನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಹಕ್ಕನ್ನು ಸಿಜಿಹೆಚ್‌ಎಸ್ ಕಾಯ್ದಿರಿಸಿಕೊಂಡಿದೆ.
ಪೂರ್ಣ ವಿವರಗಳಿಗಾಗಿ ಸಿಜಿಹೆಚ್‌ಎಸ್ ವೆಬ್‌ಸೈಟ್: cghs.gov.in ಗೆ ಭೇಟಿ ನೀಡಿ.

ಸಹಿ/– ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು.

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು – 560 009.
ದೂರವಾಣಿ ಸಂಖ್ಯೆ: 080–29710021/ 22/ 23/ 24 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@kar.nic.in ವೆಬ್‌ಸೈಟ್: http://www.krrda.in

ಸಂಖ್ಯೆ:ಕೆಆರ್‌ಆರ್‌ಡಿಎ/ತಾಂತ್ರಿಕ/11/208/ಟೆಂಡರ್ ನೋ–3/2023–24/214 ದಿನಾಂಕ: 17–05–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (3ನೇ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ **ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–3 ರ ಕಾಮಗಾರಿಗಳಿಗೆ** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂ ರೇಟ್ ದರಗಳ ಟೆಂಡರ್‌ನ್ನು ಕರೆದಿದ್ದು, ಟೆಂಡರ್ ವೇಳಾಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಕನಿಷ್ಠ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಗರಿಷ್ಠ	ಇ.ಎಂ.ಡಿ. ಮೊತ್ತ, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ	ಕಾಮಗಾರಿ ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿ)
1	200.00	800.00	ಟೆಂಡರ್ ಕರೆದ ಮೊತ್ತಕ್ಕೆ ಶೇ. 2.00 ರಷ್ಟು	• ರೂ. 2.00 ಕೋಟಿ ಮೇಲ್ಪಟ್ಟು ರೂ. 3.00 ಕೋಟಿವರೆಗೆ – 9 ತಿಂಗಳು • ರೂ. 3.00 ಕೋಟಿ ಮೇಲ್ಪಟ್ಟು – 11 ತಿಂಗಳು

ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿವೆ:

1	ಪ್ರಿ–ಬಿಡ್ ಸಭೆಯ ದಿನಾಂಕ	26–05–2023, 11.00 ಗಂಟೆಗೆ.
2	ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	01–06–2023, 16.30 ಗಂಟೆಯವರೆಗೆ.
3	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	02–06–2023, 16.35 ಗಂಟೆಗೆ.
4	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	ಆಯಾ ಕಾಮಗಾರಿಗಳ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

1) ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಒಂದನೇ ದರ್ಜೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಗುತ್ತಿಗೆ ನೀಡುವಿಕೆಯು ಗುತ್ತಿಗೆ ನಿಯಮಗಳಂತೆ, ಗುತ್ತಿಗೆದಾರರ ತಾಂತ್ರಿಕ, ಆರ್ಥಿಕ ಸಂಪನ್ಮೂಲ ಮತ್ತು ಕಾಮಗಾರಿ ನಿರ್ವಹಿಸುವ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿರುತ್ತದೆ.
2) ಟೆಂಡರ್ ಕರೆಯಲಾದ ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಇವರನ್ನು ಸಂಪರ್ಕಿಸಬಹುದು.
3) ಮಾಹಿತಿಯನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಾಮಗಾರಿಗಳ ವಿವರಗಳನ್ನು ವೆಬ್‌ಸೈಟ್: http://krrda.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಟೆಂಡರಿಂಗ್ ಅಧಿಕಾರಿ ಮತ್ತು ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು,
ಕ.ಗ್ರಾ.ರ.ಅ.ಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/62/ಅಡ್ವರ್ಟೋರ್/2023–24

ಸುಭಾಷಿತ

ಬುದ್ಧಿಯ ಸಮರ್ಪಕ ಬಳಕೆಯು ಮಾನವ ಜೀವಿಗಳ ಅತ್ಯುನ್ನತ ಗುರಿಯಾಗಿರಬೇಕು.

–ಡಾ. ಬಿ.ಆರ್. ಅಂಬೇಡ್ಕರ್

ಸೆರೆ ಸಿಕ್ಕ ಮಾದಕ ವಸ್ತು ಎಚ್ಚರಿಕೆಯ ಕರೆಗಂಟೆ

ಕೊಚ್ಚಿ ತೀರಕ್ಕೆ ಹೊಂದಿಕೊಂಡ ಸಮುದ್ರದಲ್ಲಿ ಕಳೆದ ವಾರ ಸುಮಾರು 2,500 ಕೆ.ಜಿಯಷ್ಟು ಅತ್ಯಧಿಕ ಗುಣಮಟ್ಟದ ಮೆಥ್ಯಾಮ್‌ಫೆಟಮೈನ್ ಮಾದಕವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ. ಮಾದಕವಸ್ತು ನಿಯಂತ್ರಣ ದಳ (ಎನ್‌ಸಿಬಿ) ಮತ್ತು ಭಾರತೀಯ ನೌಕಾಪಡೆ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಇದು ನಡೆದಿದೆ. ಮಾದಕವಸ್ತು ವಶಪಡಿಸಿಕೊಳ್ಳುವಿಕೆಗೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ಇದು ದೊಡ್ಡ ಪ್ರಕರಣವಾಗಿದೆ. ಇದರ ಮೌಲ್ಯ ಸುಮಾರು ₹ 15 ಸಾವಿರ ಕೋಟಿ ಎಂದು ಅಂದಾಜಿಸಲಾಗಿದೆ. ಕಡಲು ಮಾರ್ಗಗಳ ಮೂಲಕ ದೇಶದೊಳಕ್ಕೆ ನಡೆಯುವ ಮಾದಕವಸ್ತು ಕಳ್ಳಸಾಗಣೆ ಮೇಲೆ ನಿಗಾ ಇರಿಸುವ ‘ಆಪರೇಷನ್ ಸಮುದ್ರಗುಪ್ತ’ ಕಾರ್ಯಾಚರಣೆಯ ಭಾಗ ಇದಾಗಿದೆ. 2021ರಲ್ಲಿ ಮುಂದ್ರಾ ಬಂದರಿನಲ್ಲಿ ಸುಮಾರು 3,000 ಕೆ.ಜಿಯಷ್ಟು ಅಫ್ಗನ್ ಹೆರಾಯಿನ್ ವಶಪಡಿಸಿಕೊಂಡಿದ್ದು ಮತ್ತು ತೂತ್ತುಕುಡಿ ಬಂದರಿನಲ್ಲಿ 303 ಕೆ.ಜಿ ಕೊಕೇನ್ ವಶಪಡಿಸಿಕೊಂಡಿದ್ದು, ಇತ್ತೀಚಿನ ವರ್ಷಗಳಲ್ಲಿ ಕಂಡುಬಂದ ಇನ್ನಿತರ ದೊಡ್ಡ ಪ್ರಕರಣಗಳಾಗಿವೆ. ಕೊಚ್ಚಿಯಲ್ಲಿ ವಶಪಡಿಸಿಕೊಂಡಿರುವ ಮಾದಕವಸ್ತುವಿನ ಪ್ರಮುಖ ಮೂಲ ಅಫ್ಗಾನಿಸ್ತಾನ ಎಂದು ತಿಳಿದುಬಂದಿದೆ. ಕಳೆದ ವರ್ಷ ಜನವರಿಯಲ್ಲಿ ‘ಆಪರೇಷನ್ ಸಮುದ್ರಗುಪ್ತ’ಕ್ಕೆ ಚಾಲನೆ ನೀಡಿದ ಬಳಿಕ ಬೃಹತ್ ಪ್ರಮಾಣದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಾದಕ ವಸ್ತುವಿನ ಒಳನುಸುಳುವಿಕೆಗೆ ಆಸ್ಪದ ನೀಡುವ ಆಯಕಟ್ಟಿನ ಜಾಗಗಳಲ್ಲಿ ಬಿಗಿ ಕಣ್ಗಾವಲು, ಸಮರ್ಥ ಬೇಹುಗಾರಿಕೆ ಹಾಗೂ ಕಟ್ಟೆಚ್ಚರದ ಗಸ್ತುಪಡೆಯ ಅಗತ್ಯವನ್ನು ಇದು ಒತ್ತಿ ಹೇಳುತ್ತದೆ.

ಮಾದಕವಸ್ತು ಕಳ್ಳಸಾಗಣೆ ವಿರುದ್ಧ ಹೋರಾಡುವ ಸಂಸ್ಥೆಗಳ ಮಾನವ ಸಂಪನ್ಮೂಲ, ತಂತ್ರಜ್ಞಾನ ಮತ್ತು ಬೇಹುಗಾರಿಕೆ ಸಾಮರ್ಥ್ಯಗಳನ್ನು ಸುಧಾರಿಸಬೇಕಾದ ಅಗತ್ಯವಿದೆ

ಕೊಚ್ಚಿ ಕಾರ್ಯಾಚರಣೆಯಲ್ಲಿ ವಶಪಡಿಸಿಕೊಂಡ ಮಾದಕವಸ್ತುವಿನ ಮೂಲ ಅಫ್ಗಾನಿಸ್ತಾನವಾದರೂ ಇದರ ಕಳ್ಳಸಾಗಣೆ ಕಾರ್ಯಾಚರಣೆಯು ಪಾಕಿಸ್ತಾನದ್ದಾಗಿದೆ. ಈ ಪ್ರಕರಣದಲ್ಲಿ ಮಾದಕವಸ್ತುವನ್ನು ಪಾಕಿಸ್ತಾನ ಮೂಲದ ಅಕ್ಕಿ ಕಂಪನಿಯೊಂದರ ಲೇಬಲ್ ಅಂಟಿಸಿದ್ದ ಸೆಣಬಿನ ಚೀಲಗಳಲ್ಲಿ ಸಾಗಿಸಲಾಗುತ್ತಿತ್ತು. ಮೊದಲಿಗೆ ಇದನ್ನು ಹೊತ್ತ ಹಡಗು ಪಾಕಿಸ್ತಾನ ಮತ್ತು ಇರಾನ್‌ಗೆ ಹೊಂದಿಕೊಂಡ ಮಕರನ್ ಕಡಲ ತೀರದಿಂದ ಹೊರಟಿತ್ತು. ಈ ಸಂಬಂಧ ಪಾಕಿಸ್ತಾನಿ ಪ್ರಜೆಯೊಬ್ಬನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಮಾದಕವಸ್ತುಗಳ ಕಳ್ಳಸಾಗಣೆಯು ಹೆಚ್ಚಾಗುತ್ತಿದೆ. ಇದಕ್ಕಾಗಿ ಕಳ್ಳಸಾಗಣೆದಾರರು ಹೆಚ್ಚೆಚ್ಚು ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಎನ್‌ಸಿಬಿ ವರದಿಯ ಪ್ರಕಾರ, ಕಳೆದ ಎರಡು ವರ್ಷಗಳಲ್ಲಿ ಮಾದಕವಸ್ತುಗಳ ಕಳ್ಳಸಾಗಣೆಗಾಗಿ ಕೊರಿಯರ್, ಪಾರ್ಸಲ್ ಮತ್ತು ಅಂಚೆ ಸೇವೆಗಳ ಬಳಕೆ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಈ ವರದಿ ಪ್ರಕಾರ, ಕೊರಿಯರ್ ಮತ್ತು ಅಂಚೆ ಸೇವೆಗಳ ಹೆಚ್ಚಿನ ಬಳಕೆಗೂ ದೇಶದಲ್ಲಿ ಡಾರ್ಕ್ ವೆಬ್ ಚಟುವಟಿಕೆಗಳು ಹೆಚ್ಚಾಗಿರುವುದಕ್ಕೂ ನೇರವಾದ ಸಂಬಂಧವಿದೆ. ಕೋವಿಡ್– 19ರ ಸಾಂಕ್ರಾಮಿಕದ ಸಂದರ್ಭದಲ್ಲಿ ವಾಹನಗಳ ಓಡಾಟಕ್ಕೆ ನಿಬಂಧನೆಗಳನ್ನು ಹೇರಿದಾಗ, ಮಾದಕವಸ್ತು ಕಳ್ಳಸಾಗಣೆದಾರರು ಅಂಚೆ ಸೇವೆ ಬಳಸಿಕೊಳ್ಳುವ ರೂಢಿಗೆ ಇಳಿದರು. ಅದಾದ ಮೇಲೆ ಈಗ ಎರಡೂ ವಿಧಾನಗಳನ್ನು ಕಳ್ಳಸಾಗಣೆಗಾಗಿ ಬಳಸಿಕೊಳ್ಳಲಾಗುತ್ತಿದೆ. ಹೆರಾಯಿನ್ ಕಳ್ಳಸಾಗಣೆಯು ಮುಖ್ಯವಾಗಿ ದೇಶದ ಪಶ್ಚಿಮ ಭೂಭಾಗದ ಗಡಿ ಮತ್ತು ನೇಪಾಳದ ಮೂಲಕ ನಡೆಯುತ್ತಿದೆ. ಹಾಗೆಯೇ, ದಕ್ಷಿಣ ಅಮೆರಿಕ ಮೂಲದ ಕೊಕೇನ್, ಪ್ರಮುಖವಾಗಿ ವಿಮಾನ ನಿಲ್ದಾಣಗಳ ಮೂಲಕ ಕಳ್ಳಸಾಗಣೆಯಾಗುತ್ತಿದೆ. ಇವಲ್ಲದೆ, ಹೊಸದಾಗಿ ಅಭಿವೃದ್ಧಿಪಡಿಸುತ್ತಿರುವ ಮಾದಕವಸ್ತುಗಳನ್ನು ಕೂಡ ದೇಶದೊಳಕ್ಕೆ ನುಸುಳಿಸುವ ಸಂಚುಗಳು ನಡೆಯುತ್ತಿವೆ.

ಮಾದಕವಸ್ತುಗಳು ಜನರ ಆರೋಗ್ಯಕ್ಕೆ ಅಪಾಯ ತಂದೊಡ್ಡುವುದರ ಜೊತೆಗೆ ದೇಶದ ಆರ್ಥಿಕತೆಗೆ ಗಂಭೀರ ಸವಾಲುಗಳನ್ನು ಒಡ್ಡುತ್ತವೆ. ಮಾದಕವಸ್ತುಗಳ ಬಳಕೆ ಹಾಗೂ ಅವುಗಳನ್ನು ವಶಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ವರದಿಗಳಿವೆ. ಆದರೆ, ದೇಶಕ್ಕೆ ಕಳ್ಳಸಾಗಣೆ ಮೂಲಕ ಒಳನುಸುಳುತ್ತಿರುವ ದೊಡ್ಡ ಪ್ರಮಾಣದ ಮಾದಕವಸ್ತುಗಳಲ್ಲಿ ಬೆಳಕಿಗೆ ಬರುತ್ತಿರುವುದು ಒಂದು ಸಣ್ಣ ಭಾಗವಷ್ಟೇ ಆಗಿದೆ. ಬಹಳಷ್ಟು ಸಂದರ್ಭಗಳಲ್ಲಿ, ಕಳ್ಳಸಾಗಣೆದಾರರು ಕಾನೂನು ಜಾರಿ ಮಾಡುವ ಸಂಸ್ಥೆಗಳಿಗಿಂತ ಒಂದು ಹೆಜ್ಜೆ ಮುಂದೆ ಇರುತ್ತಾರೆ ಎಂಬುದು ದೃಢಪಟ್ಟಿದೆ. ಮಾದಕವಸ್ತು ಕಳ್ಳಸಾಗಣೆ ವಿರುದ್ಧ ಹೋರಾಡುವ ಸಂಸ್ಥೆಗಳ ಮಾನವ ಸಂಪನ್ಮೂಲ, ತಂತ್ರಜ್ಞಾನ ಮತ್ತು ಬೇಹುಗಾರಿಕೆ ಸಾಮರ್ಥ್ಯಗಳನ್ನು ಸುಧಾರಿಸಬೇಕಾದ ಅಗತ್ಯವಿದೆ. ಅವುಗಳ ವಿತರಣಾ ಜಾಲಗಳನ್ನು ಬಗ್ಗುಬಡಿಯಬೇಕು, ಸಂಬಂಧಿಸಿದ ಮಾಫಿಯಾ ಮತ್ತು ಸಿಂಡಿಕೇಟ್‌ಗಳನ್ನು ನಿಷ್ಕ್ರಿಯಗೊಳಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಮಾದಕವಸ್ತು ಬಳಕೆಯ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ, ಪ್ರಚಾರಾಂದೋಲನಗಳು ನಡೆಯಬೇಕು. ಮಾದಕವಸ್ತು ವ್ಯಸನಿಗಳು ಸಹಜ ಬದುಕಿಗೆ ವಾಪಸಾಗಲು ಪೂರಕವಾದ ಹೆಚ್ಚಿನ ಪ್ರಯತ್ನಗಳು ಮತ್ತು ವ್ಯವಸ್ಥೆಗಳು ಇರಬೇಕು.

ದಿನದ ಟ್ವೀಟ್

ನಿರಾಸೆಗೊಳಿಸದಿರಿ...

ಆತ್ಮೀಯ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರೆ, ನೀವಿಬ್ಬರೂ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕ ಅದ್ಭುತ ಗೆಲುವಿನ ರೂವಾರಿಗಳಾಗಿದ್ದೀರಿ. ನೀವು ಒಟ್ಟಿಗೆ ಕೆಲಸ ಮಾಡಬೇಕು ಮತ್ತು ಚೆನ್ನಾಗಿ ಕೆಲಸ ಮಾಡಬೇಕೆಂದು ಜನ ನಿರೀಕ್ಷಿಸುತ್ತಾರೆ. ಅವರನ್ನು ನಿರಾಸೆಗೊಳಿಸಬೇಡಿ. ಸರ್ಕಾರ ರಚನೆಯಲ್ಲಿ ಇನ್ನೂ ವಿಳಂಬ ಆಗಬಾರದು.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ

ನನ್ನ ಸೋಲಿಗೆ ಯಾರು ಕಾರಣ ಎಂದು ಗೊತ್ತಿದೆ. ನಾನು ಏನನ್ನೂ ಅರಿಯದ ಮುಗ್ಧನಲ್ಲ. ಎಂಟು ಹತ್ತು ಜನರ ಪಾಪದ ಕೆಲಸದಿಂದ ಮನೆ ಹಾಳಾಗಿದೆ. ನಾನು ಬಯಸಿ ಇಲ್ಲಿ ಸ್ಪರ್ಧಿಸಿರಲಿಲ್ಲ. ಪಕ್ಷದ ಆದೇಶದ ಮೇರೆಗೆ ಬಂದೆ. ನನ್ನೊಬ್ಬನನ್ನು ಸೋಲಿಸುವುದಕ್ಕಾಗಿ ಇಡೀ ಜಿಲ್ಲೆಯನ್ನೇ ಹಾಳು ಮಾಡಿದಿರಿ.

ವಿ.ಸೋಮಣ್ಣ, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ

25 ವರ್ಷಗಳ ಹಿಂದೆ

ಸೋಮವಾರ, 18-5-1998

• **ಜಲಜನಕ ಬಾಂಬ್ ಸ್ಫೋಟ: ಭಾರತ ಅಧಿಕೃತ ಘೋಷಣೆ**

ನವದೆಹಲಿ, ಮೇ 17 (ಪಿಟಿಐ)– ಈ ತಿಂಗಳ 11ರಂದು 45 ಕಿಲೊ ಟನ್ ತೂಕದ ಜಲಜನಕ ಬಾಂಬಿನ ಪರೀಕ್ಷೆ ನಡೆಸಿದ್ದಾಗಿ ಭಾರತದ ವಿಜ್ಞಾನಿಗಳು ಇಂದು ಬಹಿರಂಗಪಡಿಸಿದರು.

‘ಭಾರತ ನಡೆಸಿದ್ದು ಜಲಜನಕ ಬಾಂಬಿನ ಪರೀಕ್ಷೆ ಅಲ್ಲ, ಪ್ರಗಲ್ಭಗೊಳಿಸಿದ ಅಣುವಿದಳನ ಸಾಧನದ ಪರೀಕ್ಷೆ’ ಎಂಬ ಪಾಶ್ಚಿಮಾತ್ಯ ರಾಷ್ಟ್ರಗಳ ಊಹಾಪೋಹಗಳನ್ನು ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ತಳ್ಳಿಹಾಕಿದರು.

ಅಣುಶಕ್ತಿ ಆಯೋಗದ ಅಧ್ಯಕ್ಷ ಆರ್. ಚಿದಂಬರಂ, ರಕ್ಷಣಾ ಸಚಿವರಿಗೆ ವೈಜ್ಞಾನಿಕ ಸಲಹೆಗಾರರಾಗಿರುವ ಎ.ಪಿ.ಜೆ. ಅಬ್ದುಲ್ ಕಲಾಂ ಹಾಗೂ ಇತರ ಪ್ರಮುಖ ವಿಜ್ಞಾನಿಗಳು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

• **ರಾಜ್ಯದ ಹಲವು ಇಲಾಖೆಗಳಲ್ಲಿ ಆರ್ಥಿಕ ಅಶಿಸ್ತು**

ಬೆಂಗಳೂರು, ಮೇ 17– ಸರ್ಕಾರದ ಕೆಲವು ಇಲಾಖೆಗಳಲ್ಲಿ ಕಾಣಿಸಿರುವ ಆರ್ಥಿಕ ಅಶಿಸ್ತಿನ ಬಗೆಗೆ ಕೇಂದ್ರದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ವರದಿ ಬೆಳಕು ಚೆಲ್ಲಿದೆ. ಅದನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದೆ.

ಸಂಬಂಧಪಟ್ಟವರಿಂದ ಮಂಜೂರಾತಿ ಇಲ್ಲದೆ ಹಣಕಾಸು ವೆಚ್ಚ ಮಾಡಿರುವುದರ ಜತೆಗೆ ಸಾಲ ಮರುಪಾವತಿಯಲ್ಲಿ ಎಷ್ಟರ ಮಟ್ಟಿಗೆ ಇಲಾಖೆಗಳು ಎಡವಿವೆ ಎನ್ನುವುದರ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೃಷಿ, ಅರಣ್ಯ, ಪೊಲೀಸ್ ಮತ್ತು ಸಾರಿಗೆ ಇಲಾಖೆಗಳಲ್ಲಿ 1992–93ರಿಂದ 1996–97ರವರೆಗೆ ನಡೆದಿರುವ ಇಂಥ ಪ್ರಕರಣಗಳ ಬಗ್ಗೆ ವರದಿಯಲ್ಲಿ ವಿವರಿಸಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 18-5-1973

• **ಧಾನ್ಯ ಕಳ್ಳಸಾಗಾಣಿಕೆ ತಡೆಗೆ ಬಿಗಿ ಕ್ರಮ**

ಬೆಂಗಳೂರು, ಮೇ 17– ಕಲ್ಬುರ್ಗಿ ಹಾಗೂ ಯಾದಗಿರಿಯಿಂದ ಮಹಾರಾಷ್ಟ್ರಕ್ಕೆ ಜೋಳ ಕಳ್ಳಸಾಗಣೆಯಾಗುತ್ತಿರುವುದನ್ನು ತಡೆಗಟ್ಟಲು ಪೊಲೀಸರು ಕ್ರಮ ಕೈಗೊಂಡಿದ್ದಾರೆಂದು ಆಹಾರ ಸಚಿವ ಶ್ರೀಮತಿ ಇವಾವಾಜ್ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

• **ಚೀನಾಕ್ಕೆ ಇಂಗದ ಭೂದಾಹ**

ಮಾಸ್ಕೊ, ಮೇ 17– ಚೀನಾವು ಕಳೆದ 20 ವರ್ಷಗಳ ಅವಧಿಯಲ್ಲಿ ನೆರೆಹೊರೆಯ ರಾಷ್ಟ್ರಗಳ ಎಷ್ಟು ಭೂಮಿಯನ್ನು ತನ್ನದೆಂದು ಹೇಳಿದೆ ಗೊತ್ತೆ? ನೊವೋಸ್ತಿ ವಾರ್ತಾ ಸಂಸ್ಥೆ ಪ್ರಕಾರ, 32 ಲಕ್ಷ ಚದರ ಕಿ. ಮೀ ಭೂಮಿಯ ಮೇಲೆ ಹಕ್ಕು ಸ್ಥಾಪಿಸಲು ಯತ್ನಿಸಿದೆ.

ತನಗೆ ಸೇರಿದ್ದೆಂದು ಚೀನಾ ಹೀಗೆ ಹಕ್ಕು ಸ್ಥಾಪಿಸಲು ಯತ್ನಿಸಿದ ಭೂಪ್ರದೇಶವು ಚೀನಾದ ಮೂರನೇ ಒಂದು ಭಾಗದಷ್ಟಾಗುತ್ತದೆ. ಇಡೀ ಭಾರತದ ವಿಸ್ತೀರ್ಣ ಎಷ್ಟಿದೆಯೋ ಅಷ್ಟಕ್ಕೆ ಸಮನಾಗುತ್ತದೆ.

ಮಂಗಾಟ ನಡೆಸಿ ಅಂಗಾತ ಬಿದ್ದ ‘ಕುರುಡು ಕಾಂಚಾಣ’ವ ಎತ್ತಿ ಒಗೆದದ್ದಾಯಿತು, ಮುಂದೇನು?

‘ಬಡವರ ನಗುವಿನ ಶಕ್ತಿ’ಯ ಮರುಕಳಿಕೆ

ಪಡಸಾಲೆ

ರಘುನಾಥ ಚ.ಹ.

ಬಡವರ ನಗುವಿನ ಶಕ್ತಿ– ದಲಿತ ಕವಿ ಸಿದ್ಧಲಿಂಗಯ್ಯನವರ ಕಾವ್ಯವನ್ನು ಡಿ.ಆರ್.ನಾಗರಾಜ್ ಅವರು ಒಂದು ಸಾಲಿನಲ್ಲಿ ಹಿಡಿದಿಟ್ಟಿರುವುದು ಹೀಗೆ. ಸಿದ್ಧಲಿಂಗಯ್ಯನವರ ಸಾಹಿತ್ಯವನ್ನು ಕುರಿತ ಲೇಖನಗಳ ಸಂಕಲನಕ್ಕೆ ಎಚ್.ದಂಡಪ್ಪನವರು ಇರಿಸಿರುವ ಶೀರ್ಷಿಕೆಯೂ ಇದೇ. ಇಲ್ಲಿನ ಬಡವರ ನಗುವಿನಲ್ಲಿ ಇರುವುದು ಸಂತೋಷವಲ್ಲ, ಸಂಕಟ. ನೋವನ್ನು ನಗುವಾಗಿ ಅರಳಿಸುವುದು ಬಡವರಿಗೆ ಸಹಜವಾದ ಕಲೆ. ದೌರ್ಬಲ್ಯ, ಅಸಹಾಯಕತೆ, ಸ್ವಾನುಕಂಪದ ರೀತಿ ಕಾಣಿಸುವ ಆ ನಗುವಿನ ಆಳದಲ್ಲಿ ಸುಡುವ ಕೆಂಡದಂಥ ಶಕ್ತಿಯಿದೆ ಎನ್ನುವುದನ್ನು ಕಾಣಲಿಕ್ಕೆ ಕವಿಯ ಕಣ್ಣು ಬೇಕು. ಸುಡುವ ಶಕ್ತಿಯ ಜೊತೆಗೆ ಸೃಷ್ಟಿಶೀಲ ಕಾವಿನ ಶಕ್ತಿಯನ್ನೂ ಉಳ್ಳ ಈ ಕೆಂಡ ಸುಡಬಲ್ಲದು, ಸುಡುತ್ತಲೇ ಬೆಳುದಿಂಗಳಾಗಲೂಬಲ್ಲದು.

‘ಬಡವರ ನಗುವಿನ ಶಕ್ತಿ’ಯ ರೂಪಕ ಈ ಬಾರಿಯ ವಿಧಾನಸಭೆ ಚುನಾವಣೆಯ ಫಲಿತಾಂಶಕ್ಕೆ ಹೊಂದುವಂತಹದ್ದು. ಬಿಜೆಪಿ ವಿರುದ್ಧದ ಜನಾದೇಶ ‘ಬಡವರ ನಗುವಿನ ಶಕ್ತಿ’ಯಲ್ಲದೆ ಬೇರೇನಲ್ಲ. ಬೆಲೆಯೇರಿಕೆ, ಧಾರ್ಮಿಕ ಅಸಹನೆ, ಜನಪ್ರತಿನಿಧಿ ಸ್ಥಾನವನ್ನು ಅಧಿಕಾರ ಚಲಾಯಿಸುವ ಅವಕಾಶವೆಂದು ತಿಳಿದು ತೋರಿದ ದರ್ಪ, ಭ್ರಷ್ಟಾಚಾರ– ಜನರ ಆಕ್ರೋಶಕ್ಕೆ ಕಾರಣವಾದ ಇವೆಲ್ಲವನ್ನೂ ‘ಬಡವರ ನಗು’ ಎನ್ನುವ ರೂಪಕ ಹಿಡಿದಿಡುವಂತಿದೆ. ಬಡವರ ನಗು ಜಾಗೃತಗೊಂಡ ಸ್ಥಿತಿಯೇ ಶಕ್ತಿಯಾಗಿ, ಚುನಾವಣೆಯಲ್ಲಿ ಜನಾದೇಶದ ರೂಪುತಳೆದಿರುವಂತಿದೆ. ಇಲ್ಲಿನ ಬಡವರೆಂದರೆ, ಹಸಿವಿನಿಂದ ಬಳಲುತ್ತಿರುವವರು ಮಾತ್ರವಲ್ಲ, ಅಧಿಕಾರದ ದರ್ಪದಿಂದ ನೊಂದು ಅಸಹಾಯಕತೆಯಿಂದ ತಲ್ಲಣಿಸುತ್ತಿದ್ದವರೂ ಹೌದು. ಮಾತು ಕಳೆದುಕೊಂಡ ಈ ಅಸಹಾಯಕತೆಗೆ ಕಾರಣವಾದ ದರ್ಪ ಅನಾವರಣಗೊಂಡದ್ದು ಒಂದೆರಡು ರೂಪಗಳಲ್ಲಲ್ಲ. ಅಧಿಕಾರದ ಈ ದರ್ಪ ಮಹಿಳೆಯರು ಮತ್ತು ಮಕ್ಕಳನ್ನು ನೇರವಾಗಿ ಗುರಿಯಾಗಿಸಿಕೊಂಡಿತ್ತು. ಹಿಜಾಬ್‌ಪ್ರಕರಣನೆನಪಿಸಿಕೊಳ್ಳಿ.ಶಾಲೆಗಳಅಂಗಳಗಳನ್ನು ಕೌರವರ ಸಭೆಯನ್ನಾಗಿಸಲಾಯಿತು, ತಲೆಯ ಮೇಲಿನ ವಸ್ತ್ರ ಸೆಳೆಯಲು ಯತ್ನಿಸಿ, ಹೆಣ್ಣುಮಕ್ಕಳನ್ನು ಗೋಳಾಡಿಸಲಾಯಿತು, ಹಿಜಾಬ್ ತೆಗೆಯಲು ಒಲ್ಲದ ಹೆಣ್ಣುಮಕ್ಕಳಿಗೆ ಕಲಿಕೆಯ ಹಕ್ಕು ನಿರಾಕರಿಸಲಾಯಿತು. ಬಾಲಕಿಯರನ್ನು ಇಷ್ಟು ನಿಕೃಷ್ಟವಾಗಿ ನಡೆಸಿಕೊಂಡ ಮತ್ತೊಂದು ಉದಾಹರಣೆ ಆಧುನಿಕ ಕರ್ನಾಟಕದಲ್ಲಿಲ್ಲ.

ಪಠ್ಯ ಪರಿಷ್ಕರಣೆಯ ಹೆಸರಿನಲ್ಲಿ ಮಕ್ಕಳು, ಪೋಷಕರು ಹಾಗೂ ಶಿಕ್ಷಕರನ್ನು ಗೊಂದಲಕ್ಕೆ, ಒತ್ತಡಕ್ಕೆ ದೂಡಿದ್ದು ಅಧಿಕಾರದ ಅಪಬಳಕೆಯ ಮತ್ತೊಂದು ಉದಾಹರಣೆ. ಪಕ್ಷ ಹಾಗೂ ಅದರ ಬಂಧುಮಿತ್ರ ಸಂಘಟನೆಗಳ ಅಜೆಂಡಾಗಳನ್ನು ಪರಿಷ್ಕರಣೆಯ ನೆಪದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಮಕ್ಕಳ ಪಠ್ಯಪುಸ್ತಕಗಳಲ್ಲಿ ತುರುಕಿತು. ಪರಿಷ್ಕರಣೆ ಎನ್ನುವ ಅಡ್ಡಕಸುಬಿಗೆ ಜನವಿರೋಧ ಎದುರಾದಾಗ, ಜಾತಿಗಳನ್ನು ಪ್ರತಿನಿಧಿಸುವ ಮಠಾಧೀಶರ ಮಾತುಗಳ ಹೊರತಾಗಿ ಜನಸಾಮಾನ್ಯರ ಅಭಿಪ್ರಾಯಗಳಿಗೆ ಸರ್ಕಾರ ಸಂಪೂರ್ಣ ಕಿವುಡಾಗಿತ್ತು.

ಜನಪ್ರತಿನಿಧಿಗಳಿಗೆ ವೈಯಕ್ತಿಕ ಚಾರಿತ್ರ್ಯ ಅನಗತ್ಯ ಎನ್ನುವುದನ್ನು ಹಿಂದಿನ ಐದು ವರ್ಷಗಳ ರಾಜಕೀಯ ಮತ್ತೆ ಮತ್ತೆ ರುಜುವಾತುಪಡಿಸಿದೆ, ಸಾರ್ವಜನಿಕ ಲಜ್ಜೆ ಮತ್ತೆ ಮತ್ತೆ ಮುಗ್ಗರಿಸಿದೆ, ನಗೆಪಾಟಲಿಗೀಡಾಗಿದೆ. ಒಂದು ಪಕ್ಷದ ಚಿಹ್ನೆಯಡಿ ಗೆದ್ದುಬಂದ ಕೆಲವು ಶಾಸಕರು ತಮ್ಮ ಪಕ್ಷಕ್ಕೆ ದ್ರೋಹ ಎಸಗಿದರು, ಚುನಾಯಿಸಿದ ಮತದಾರರನ್ನು ಕೊಳ್ಳಬಹುದಾದ ಸರಕುಗಳಾಗಿ ಕಂಡರು. ಅಧಿಕಾರಲಾಲಸೆಗಾಗಿ ಪಕ್ಷ ಮತ್ತು ಸಿದ್ಧಾಂತಗಳ ಬಾವುಟಗಳನ್ನು ಬದಲಿಸಿದವರು, ವೈಯಕ್ತಿಕ ಬದುಕಿನಲ್ಲೂ ಮಾದರಿಯಾಗಿಯೇನೂ ಇರಲಿಲ್ಲ. ಸಚಿವರೊಬ್ಬರ ಅನೈತಿಕ ನಂಟಿನ ದೃಶ್ಯಗಳುಳ್ಳ ಅಡಕಮುದ್ರಿಕೆ ಬಹಿರಂಗಗೊಂಡು, ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತು. ಆರೋಪಕ್ಕೆ ಗುರಿಯಾದವರನ್ನು ತೋರಿಕೆಗಾದರೂ ಮುಟ್ಟಲು ಕಾನೂನು ಪಾಲಕರು ಮುಂದಾಗಲಿಲ್ಲ. ಅಧಿಕಾರದೆದುರು ಈ ನೆಲದ ಕಾನೂನು ಕುಂಟೇ ಕುರುಡೇ ಎನ್ನುವ ಜನಸಾಮಾನ್ಯರ ಪ್ರಶ್ನೆಗೆ ಯಾರೂ ಉತ್ತರಿಸಲಿಲ್ಲ. ಹಾದರದ ದೃಶ್ಯಗಳು ಬಹಿರಂಗಗೊಳ್ಳುವ ಆತಂಕದಿಂದ ಇನ್ನಷ್ಟು ವೀರಾಧಿವೀರ ರಾಜಕಾರಣಿಗಳು ಕೋರ್ಟ್‌ನಿಂದ ತಡೆಯಾಜ್ಞೆ ಪಡೆದುಕೊಂಡರು. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಳ್ಳುವಂತಿತ್ತು ಅವರ ನಡವಳಿಕೆ.

ವೈಯಕ್ತಿಕ ಮತ್ತು ಸಾರ್ವಜನಿಕ ಬದುಕಿನಲ್ಲಿ ನೈತಿಕತೆಯನ್ನು ಕಸದಂತೆ ಕಂಡವರ ನಾಲಿಗೆಗೆ ಮತಿಯಿರುವುದುಂಟೆ? ‘ಭಾರತದ ಆಧುನಿಕ ಮಹಿಳೆಯರು ಒಂಟಿಯಾಗಿ ಇರಲು ಬಯಸುತ್ತಾರೆ. ಮದುವೆಯಾದರೂ ಮಕ್ಕಳಿಗೆ ಜನ್ಮ ನೀಡಲು ಬಯಸುವುದಿಲ್ಲ. ಬಾಡಿಗೆ ತಾಯ್ತನದಿಂದ ಮಕ್ಕಳನ್ನು ಪಡೆಯುತ್ತಾರೆ. ಅದು ಒಳ್ಳೆಯದಲ್ಲ’ ಎನ್ನುವುದು ಸಮಾಜದ ಆರೋಗ್ಯವನ್ನು ಕಾಪಾಡುವ ಹೊಣೆ ಹೊತ್ತ ಸಚಿವರೊಬ್ಬರ ವಿಶ್ಲೇಷಣೆ. ‘ಹೆಚ್ಚು ಮಹಿಳಾ ಸಿಬ್ಬಂದಿ ಇರುವ ಶಾಲೆಗಳಲ್ಲಿ ಜಗಳ ಹೆಚ್ಚಾಗಿರುತ್ತದೆ’ ಎನ್ನುವುದು ಮತ್ತೊಬ್ಬ ಮುಖಂಡರ ಮಾತು. ಸಮಸ್ಯೆ ಹೇಳಿಕೊಳ್ಳಲು ಬಂದ ಮಹಿಳೆಗೆ ಸಚಿವರೊಬ್ಬರು ಕಪಾಳಮೋಕ್ಷ ಮಾಡಿದರು. ಹಣೆಗೆ ಬೊಟ್ಟಿಡದ ಮಹಿಳೆಯನ್ನು ಸಂಸದರೊಬ್ಬರು ಸಾರ್ವಜನಿಕವಾಗಿ ನಿಂದಿಸಿದರು; ‘ನಿನ್ನ ಗಂಡ ಬದುಕಿದ್ದಾನೆ ತಾನೆ?’ ಎಂದು ಪ್ರಶ್ನಿಸುವುದರ ಜೊತೆಗೆ, ‘ಯಾರೋ ದುಡ್ಡು ಕೊಡುತ್ತಾರೆಂದು ಮತಾಂತರ ಆಗಿಬಿಡುತ್ತೀರಾ?’ ಎಂದು ಸಾರ್ವಜನಿಕವಾಗಿ ಹರಿಹಾಯ್ದಿದ್ದರು. ಹೆಣ್ಣುಮಕ್ಕಳ ಸೀರೆ, ಬಳೆ, ಕುಂಕುಮದ ಹೆಸರಿನಲ್ಲಿ ಎದುರಾಳಿಯ ಬಗ್ಗೆ ಅಣಕವಾಡಿದ ಪೌರುಷದ ಘಟನೆಗಳಿಗಂತೂ ತುದಿಮೊದಲಿಲ್ಲ.

ಜಾತಿ–ಧರ್ಮ ಮತ್ತು ಅಧಿಕಾರದ ಅನೈತಿಕ ಸಮೀಕರಣದಿಂದ ನಡೆದ ಅಮಾನುಷ ಪ್ರಸಂಗಗಳು, ಅಸ್ಪೃಶ್ಯತೆಯ ಆಚರಣೆ ಒಂದೆರಡಲ್ಲ. ಆರೋಪಕ್ಕೆ ಗುರಿಯಾದ ವ್ಯಕ್ತಿಯ ಧರ್ಮದ ಹಿನ್ನೆಲೆಯಲ್ಲಿ, ಘಟನೆಯನ್ನು ವೈಭವೀಕರಿಸಿದ ಇಲ್ಲವೇ ನಿರ್ಲಕ್ಷಿಸಿದ ಅಪ್ರಜಾಸತ್ತಾತ್ಮಕ ಉದಾಹರಣೆಗಳು ಈ ಕಾಲಕ್ಕೆ ಸಹಜ ಎನ್ನುವಂತಾದವು. ಆಹಾರ, ಪ್ರಾರ್ಥನೆಯೊಂದಿಗೆ ವ್ಯಾಪಾರವೂ ಕೋಮುಬಣ್ಣ ಪಡೆದುಕೊಂಡಿತು. ಸಮುದಾಯಗಳ ನಡುವಿನ ಸೌಹಾರ್ದವನ್ನು ಪ್ರಜ್ಞಾಪೂರ್ವಕವಾಗಿ ರಕ್ಷಿಸಬೇಕಾದವರು, ತಮ್ಮ ಸಾಂತ್ವನವನ್ನು ಒಂದು ವರ್ಗಕ್ಕಷ್ಟೇ ಸೀಮಿತಗೊಳಿಸುವ ನಿರ್ಲಜ್ಜೆ ಪ್ರದರ್ಶಿಸಿದರು, ‘ಕ್ರಿಯೆಗೆ ತಕ್ಕ ಪ್ರತಿಕ್ರಿಯೆ’ ಎಂದು ಭಂಡತನದ ಮಾತನಾಡಿದರು. ಇದೆಲ್ಲದರ ಪರಿಣಾಮ, ಮನೆಗಳು ಮುರಿದವು, ಮನಸ್ಸುಗಳು ಉರಿದವು, ಜೀವಗಳು ಅಗ್ಗವಾದವು.

ಸಾರ್ವಜನಿಕ ಲಜ್ಜೆ ಹಾಗೂ ನೈತಿಕತೆ ತೊರೆದ ಜನಪ್ರತಿನಿಧಿಗಳು, ತಮ್ಮ ಭ್ರಷ್ಟತನಕ್ಕೆ ದೇಶಪ್ರೇಮದ ಪೋಷಾಕು ತೊಡಿಸಿದರು. ಜೀವನಾವಶ್ಯಕ ವಸ್ತುಗಳು ತುಟ್ಟಿಯಾಗಿ ಜನಸಾಮಾನ್ಯರ ಬದುಕು ದುಸ್ತರವಾದಾಗ, ಆ ಸಂಕಷ್ಟವನ್ನು ಮರೆಸಲು ಕೋಮುವಿಷವನ್ನು ಅರಿವಳಿಕೆಯ ರೂಪದಲ್ಲಿ ಬಳಸತೊಡಗಿದರು.

ಇದು, ಕಳೆದ ಐದು ವರ್ಷಗಳ ಅವಧಿಯಲ್ಲಿನ ಕರ್ನಾಟಕದ ಚಿತ್ರ. ಬಹುತ್ವದ ಕರ್ನಾಟಕ ‘ಕೋಮು ಕರ್ನಾಟಕ’ದ ಪೋಷಾಕು ತೊಟ್ಟಾಗಿನ ಚಿತ್ರ. ಈ ‘ಬದಲಾದ ಕರ್ನಾಟಕ’ಕ್ಕೆ ವಿರೋಧ ಸೂಚಿಸುವ ರೂಪದಲ್ಲಿ, ಆಕ್ರೋಶದ ರೂಪದಲ್ಲಿ ಪ್ರಸಕ್ತ ಜನಾದೇಶವನ್ನು ನೋಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ‘ಬಡವರ ನಗುವಿನ ಶಕ್ತಿ’ಗೆ ಗದ್ದುಗೆಗಳಲ್ಲಿರುವವರನ್ನು ಬದಲಿಸುವ ಶಕ್ತಿಯಿರುವುದನ್ನು ಈ ಜನಾದೇಶ ಮತ್ತೆ ನೆನಪಿಸಿದೆ.

‘ಗುಡಿಯೊಳಗೆ ಗಣಣ, ಮಹಡಿಯೊಳಗೆ ತನನ, ಅಂಗಡಿಯೊಳಗೆ ಝಣಣಣ ನುಡಿಗೊಡು’ತಿದ್ದ ‘ಕುರುಡು ಕಾಂಚಾಣ’ದ ಕುಣಿತ ಕೊನೆಗೊಂಡಿದೆ. ಹ್ಯಾಂಗಾರೆ ಕುಣಿಕುಣಿದು, ಮಂಗಾಟ ನಡೆದಾಗ, ‘ಅಂಗಾತ ಬಿತ್ತೋ ಹೆಗಲಲಿ ಎತ್ತೋ’ ಎನ್ನುತ್ತಾರೆ ಕವಿ ದ.ರಾ.ಬೇಂದ್ರೆ. ಮುಂದೇನು?

ನಿಕಟಪೂರ್ವ ಸರ್ಕಾರ ಎಸಗಿದ ತಪ್ಪುಗಳನ್ನು ಹೊಸದಾಗಿ ಅಧಿಕಾರಕ್ಕೆ ಬಂದವರು ಪಠ್ಯದ ರೂಪದಲ್ಲಿ ನೋಡಬೇಕು. ಏನನ್ನು ಮಾಡಬೇಕು ಎನ್ನುವುದಕ್ಕಿಂತ, ಏನನ್ನು ಮಾಡಬಾರದು ಎನ್ನುವ ಅರಿವು ಜನಪ್ರತಿನಿಧಿಗಳಿಗೆ ಅಗತ್ಯ. ಆಶೋತ್ತರಗಳಿಗೆ ಸ್ಪಂದಿಸುವ ಭರವಸೆ ನೀಡಿ, ಜನರ ಮನಸ್ಸು ಒಲಿಸಿಕೊಂಡವರು, ತಾವೇ ‘ಕುರುಡು ಕಾಂಚಾಣ’ಗಳಾಗದಂತೆ ಎಚ್ಚರ ವಹಿಸಬೇಕು.

ಇದು ಪರಿಷ್ಕರಣೆಯ ಕಾಲ. ಶೈಕ್ಷಣಿಕ ಪಠ್ಯಗಳೊಂದಿಗೆ ಸಾಮಾಜಿಕ ಪಠ್ಯಗಳೂ ಪರಿಷ್ಕಾರಗೊಳ್ಳಬೇಕಾದ ಕಾಲ. ಮುಖ್ಯವಾಗಿ, ಅಧಿಕಾರ, ದರ್ಪ, ಭ್ರಷ್ಟಾಚಾರದೊಂದಿಗೆ ಮಿಳಿತಗೊಂಡ ರಾಜಕಾರಣದ ವ್ಯಾಖ್ಯೆಯನ್ನು ಪರಿಷ್ಕರಿಸಿ, ಅದನ್ನು ಮಾನವೀಯಗೊಳಿಸಬೇಕಾದ ಕಾಲ.

ಚುರುಮುರಿ

ಫ್ರೀಬಿ ಬೇಬೀಸ್!

• ತುರುವೇಕೆರೆ ಪ್ರಸಾದ್

‘ರೀ, ನೀವು ಲೈಟ್ ಆರ್ಸು ಅಂತ ಹೇಳೋ ಹಾಗಿಲ್ಲ, ಕೈ ಪಕ್ಷದ ಸರ್ಕಾರದೋರು ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಫ್ರೀ ಕೊಡ್ತಾರೆ’ ಅಂದ್ರು ಪದ್ದಮ್ಮ.

‘ಒಳ್ಳೇದಾಯ್ತು ಬಿಡು, ಸ್ವಿಚ್‌ಗಳನ್ನ ಡೈರೆಕ್ಟ್ ಮಾಡ್ಬುಟ್ರೆ ಆರ್ಸೋ ತೊಂದ್ರೇನೇ ಇರಲ್ಲ. ಆದರೆ ಫ್ರೀ ಕೊಡಕ್ಕೆ ಕರೆಂಟ್ ಇರ್ಬೇಕಲ್ಲ. ಅದಕ್ಕೇ ಕರೆಂಟ್ ಇಲ್ದೆ ಇದ್ದಾಗ ಮೋಂಬತ್ತಿ, ಸೀಮೆಎಣ್ಣೆಗೆ ಅಂತ ಮನೆಯೊಡತಿಗೆ 2 ಸಾವಿರ ರೂಪಾಯಿ ಕೊಡ್ತಿರೋದು’ ಛೇಡಿಸಿದ ಪರ್ಮೇಶಿ.

‘ಹಾಗೆಲ್ಲಾ ಏನಿಲ್ಲ. ನೋಡಿ, ಇನ್ಮೇಲೆ ಓಡಾಟ ಸ್ವಲ್ಪ ಜಾಸ್ತಿ ಇರುತ್ತೆ. ಮನೆ ಕಡೆ ನಿಗಾ ಇಟ್ಟು ನೋಡ್ಕೊಳ್ಳಿ’.

‘ಗೊತ್ತಾಯ್ತು ಬಿಡು, ನಿಮಗೆ ಫ್ರೀ ಬಸ್‌ಪಾಸು ಅಂದ್ಮೇಲೆ ಗಂಡಸರಿಗೆ ಅಡುಗೆ ಮಾಡೋದು ತಪ್ಪಿದ್ದಲ್ಲ. ಸರ್ಕಾರ 10 ಕೆ.ಜಿ ಅಕ್ಕಿ ಕೊಡೋದ್ರಿಂದ ಅಡುಗೆ ಮಾಡ್ಲೇಬೇಕು. ಮನೆಗೇ ಡೈರೆಕ್ಟ್ ಫುಡ್ ಪ್ಯಾಕೆಟ್ ಕಳಿಸೋ ಹಾಗಿದ್ರೆ ಇನ್ನೂ ಚೆನ್ನಾಗಿತ್ತು’.

‘ದುರಾಸೆಗೂ ಒಂದು ಮಿತಿ ಇರ್ಬೇಕು. ಅಡುಗೆಗೆ ನಿಮ್ಮ ಮಗನ ಹೆಲ್ಪ್ ತಗೊಳ್ಳಿ, ಅವನಿಗೂ ಸ್ವಲ್ಪ ಟ್ರೈನಿಂಗ್ ಆದ ಹಾಗಾಗುತ್ತೆ’.

‘ಅವನೆಲ್ಲಿ ಕೈಗೆ ಸಿಕ್ತಾನೆ? ಅವನಿಗೂ ನಿರುದ್ಯೋಗ ಭತ್ಯೆ ಬರುತ್ತಲ್ಲ, ನನ್ ಮಾತಿಗೆ, ಅಡುಗೆಗೆ ಅವನು ಸೊಪ್ಪು ಹಾಕ್ತಾನಾ? ಅವನೂ ರಾಜಕೀಯ ಧುರೀಣನಾಗಿ ಇದೇ ತರ ಫ್ರೀಬೀಸ್ ಕೊಡೋ ಮಟ್ಟಕ್ಕೆ ಬೆಳೆದು ಸಮಾಜದ ಋಣ ತೀರಿಸೋದು ಬೇಡ್ವಾ?’

‘ನಿರುದ್ಯೋಗ ಭತ್ಯೆ ಕೊಟ್ಟಿದ್ದೇನೋ ಸರಿ, ಹಾಗೇ ಆ ಕಮಲದೋರು ಮಾಡಿದ್ರಲ್ಲ, ಆ ಥರ ಒಂದು ‘ಸಪ್ತಪದಿ ಭಾಗ್ಯ’ನೂ ಕೊಟ್ಟಿದ್ರೆ ಚೆನ್ನಾಗಿತ್ತು. ಗಂಡುಮಕ್ಕಳಿಗೆ ಹುಡುಗೀರೇ ಸಿಕ್ತಿಲ್ಲ’.

‘ಹ್ಞಾಂ, ಮದುವೆ ಗ್ಯಾರಂಟಿನೂ ಕೊಟ್ಬಿಟ್ರೆ ಹುಟ್ಟೋ ಮಕ್ಕಳೆಲ್ಲಾ ಫ್ರೀಬಿ ಬೇಬೀಸ್ ಅಂತ ಒಂದು ಹೊಸ ಜನರೇಶನ್ನೇ ಸ್ಟಾರ್ಟ್ ಆಗುತ್ತೆ ಬಿಡು. ಹೇಗೋ ನಿನಗೆ, ನಿನ್ ಮಗನಿಗೆ ದುಡ್ಡು ಕೊಡೋದು ತಪ್ಪಲ್ಲ, ಅದೇ ನಂಗ್ ಸಮಾಧಾನ’.

‘ರೀ, ಹೇಗಿದ್ರೂ ಕರೆಂಟ್ ಬಿಲ್ ಕಟ್ಟೋ ಹಾಗಿಲ್ಲ ಅಲ್ವಾ? ಅದಕ್ಕೇ ಒಂದಿಷ್ಟು ಹೊಸ ಮಿಕ್ಸಿ, ಗ್ರೈಂಡರ್, ವಾಷಿಂಗ್ ಮಷೀನ್ ಎಲ್ಲಾ ತರ್ಬೇಕು ಅಂದ್ಕೊಂಡಿದೀನಿ. ಆ ಲೋನ್ ಇನ್‌ಸ್ಟಾಲ್‌ಮೆಂಟ್ ಒಂದು ಕಟ್ಟಿಬಿಡಿ ಸಾಕು, ಇನ್ನೇನೂ ಬೇಡ’ ಪದ್ದಮ್ಮ ನಕ್ಕರು. ಪರ್ಮೇಶಿ ಮುಖ ಹಿಂಡಿದ.

ಸಂಗತ

ಮತದಾನ: ಉಳಿಯುತ್ತಿದೆಯೇ ಗೋಪ್ಯತೆ?

ರಾಜಕೀಯ ಪಕ್ಷಗಳಿಗೆ ಮತಗಟ್ಟೆವಾರು ದೊರೆತ ಮತಗಳನ್ನು ಬಹಿರಂಗಗೊಳಿಸುವುದು ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿದೆ

• ಡಾ. ಮುರಳೀಧರ ಕಿರಣಕೆರೆ

ನಾಡಿನ ವಿಧಾನಸಭಾ ಚುನಾವಣೆ ಶಾಂತಿಯುತವಾಗಿ ನಡೆದು ಫಲಿತಾಂಶವೂ ಹೊರಬಿದ್ದಾಯಿತು. ಅತಂತ್ರ ಸರ್ಕಾರದ ಆತಂಕ, ಗೊಂದಲಗಳಿಗೆ ಅವಕಾಶವಿಲ್ಲದಂತೆ ನಿಚ್ಚಳ ಬಹುಮತದೊಂದಿಗೆ ಒಂದೇ ಪಕ್ಷ ಮುಂದಿನ ಐದು ವರ್ಷ ಆಡಳಿತ ನಡೆಸುವ ತೀರ್ಪು ಬಂದಿದೆ. ಪ್ರತಿ ಅಭ್ಯರ್ಥಿ ತನ್ನ ಕ್ಷೇತ್ರದಲ್ಲಿ ಮತಗಟ್ಟೆವಾರು ಪಡೆದ ಮತದ ವಿವರವು ಪತ್ರಿಕೆ, ಜಾಲತಾಣಗಳಲ್ಲಿ ಹರಿದಾಡುತ್ತಾ ಚುನಾವಣೆಯ ಶ್ರೇಷ್ಠತೆ, ಪಾರದರ್ಶಕತೆ ಸಾರುವುದರ ಜೊತೆಗೆ ಮುಜುಗರವನ್ನೂ ತರುತ್ತಿದೆ!

ಯಾವ ಬೂತಿನಲ್ಲಿ ಯಾರಿಗೆ ಹೆಚ್ಚು ವೋಟು ಬಿದ್ದಿದೆಯೆಂಬ ಚರ್ಚೆಯು ಆತಂಕ ಹುಟ್ಟಿಸುವ ಹಂತಕ್ಕೇರಿದೆ. ಇದರ ಬೆನ್ನಲ್ಲೇ ವಿರೋಧಿಗಳಿಗೆ ಮತ ಹಾಕಿರುವ ಕುರಿತಾಗಿ ಅಲ್ಲಲ್ಲಿ ಗಲಾಟೆ, ಹಲ್ಲೆಯ ಪ್ರಕರಣಗಳು ವರದಿಯಾಗುತ್ತಿವೆ.

ಪಂಚಾಯಿತಿಯಿಂದ ಸಂಸತ್ತಿನವರೆಗೆ ಜನಪ್ರತಿನಿಧಿಗಳ ಆಯ್ಕೆಗೆ ನಾವು ಅಳವಡಿಸಿಕೊಂಡಿರುವುದು ಗೋಪ್ಯ ಮತದಾನ ಪದ್ಧತಿ. ಇಲ್ಲಿ ಮತದಾರನೊಬ್ಬ ಯಾರಿಗೆ, ಯಾವ ಪಕ್ಷಕ್ಕೆ ಮತ ಹಾಕಿದ್ದಾನೆ ಎಂಬುದು ಮತ್ತೊಬ್ಬರಿಗೆ ತಿಳಿಯುವ ಅವಕಾಶವಿಲ್ಲ. ಗುಪ್ತ ಮತದಾನದ ಉದ್ದೇಶ ಮತದಾರ ಯಾವುದೇ ಒತ್ತಡ, ಭಯ, ಚಿಂತೆ, ಆಮಿಷಗಳಿಂದ ಮುಕ್ತನಾಗಿ ಮತ ಚಲಾಯಿಸುವುದಷ್ಟೇ ಅಲ್ಲ, ಮುಂದೆಯೂ ತನ್ನ ಆಯ್ಕೆಯ ಕಾರಣಕ್ಕಾಗಿ ಯಾವುದೇ ಸಮಸ್ಯೆಗಳಿಗೆ ಸಿಲುಕಬಾರದು ಎಂಬುದೂ ಆಗಿದೆ.

ಮತದಾನವೇನೋ ಗುಟ್ಟಾಗಿ ನಡೆಯುತ್ತದೆ. ಆದರೆ ಮತ ಎಣಿಕೆಯ ನಂತರವೂ ಇದೇ ರಹಸ್ಯ ಉಳಿಯುವುದೇ ಎಂಬುದೇ ಸದ್ಯದ ಪ್ರಶ್ನೆ. ಕ್ಷೇತ್ರದ ಫಲಿತಾಂಶದ ಜೊತೆಗೆ ಉಮೇದುವಾರರ ಬೂತ್‌ವಾರು ಫಲಿತಾಂಶವು ಆ ಕೇಂದ್ರ ವ್ಯಾಪ್ತಿಯ ಸಂಪೂರ್ಣ ಚಿತ್ರಣ ನೀಡುವುದರ ಜೊತೆಗೆ ಹಲವು ಕೆಡುಕುಗಳು, ಅನಪೇಕ್ಷಿತ ವಿದ್ಯಮಾನಗಳು, ದೀರ್ಘ ಪರಿಣಾಮಗಳಿಗೆ ಕಾರಣವಾಗುತ್ತಿರುವುದು ಸತ್ಯ.

ಹೌದು, ಪಕ್ಷಗಳಿಗೆ ಮತಗಟ್ಟೆವಾರು ದೊರೆತ ಮತಗಳನ್ನು ಬಹಿರಂಗಗೊಳಿಸುವುದು ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಯಾರು ಯಾರಿಗೆ ಮತ ಹಾಕಿರಬಹುದೆಂಬ ಅಂದಾಜು ಪಕ್ಷಗಳಿಗೆ ಸಿಕ್ಕಿಬಿಡುತ್ತದೆ. ಹಳ್ಳಿಗಳ ಸಣ್ಣಪುಟ್ಟ ಬೂತುಗಳಲ್ಲಿ ಈ ಮತದಾರ ಇದೇ ಪಕ್ಷಕ್ಕೆ ಮತ ಚಲಾಯಿಸಿದ್ದಾನೆ ಎಂಬುದನ್ನು ಅಂದಾಜಿಸಬಹುದು. ಇನ್ನು ದೊಡ್ಡ ಮತಗಟ್ಟೆಗಳಲ್ಲೂ ಯಾವ ಜಾತಿ, ಧರ್ಮದವರು ಯಾವ ಪಕ್ಷಕ್ಕೆ ಮತ ಕೊಟ್ಟಿರಬಹುದು ಎಂಬುದನ್ನು ಹೆಚ್ಚುಕಮ್ಮಿ ಊಹಿಸಬಹುದು. ಇದರಿಂದ ಒಂದರ್ಥದಲ್ಲಿ ಮತದ ರಹಸ್ಯ ರಟ್ಟಾಗುತ್ತದೆ!

ಆಯ್ಕೆಯಾದ ಪ್ರತಿನಿಧಿ ತನಗೆ ಕಡಿಮೆ ಮತ ದೊರೆತ ಪ್ರದೇಶವನ್ನು ನಿರ್ಲಕ್ಷಿಸಬಹುದು. ಅಂತಹ ಜಾಗಗಳಿಗೆ ನೀರು, ರಸ್ತೆಯಂತಹ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸದೆ ಪಕ್ಷಪಾತಿಯಾಗಬಹುದು. ತನಗೆ ವೋಟು ಮಾಡದವರಿಗೆ ಸರ್ಕಾರಿ ಸೌಲಭ್ಯ ದೊರೆಯುವಲ್ಲಿ ಅಡ್ಡಗಾಲು ಹಾಕಬಹುದು. ತೊಂದರೆ ತಾಪತ್ರಯಗಳು ಬಂದಾಗ ಅವರ ಸಹಾಯಕ್ಕೆ ಬಾರದಿರಬಹುದು. ತನ್ನ ಹಿಂಬಾಲಕರ ಮೂಲಕ ಕಾಟ ಕೊಡುತ್ತಾ ಸೇಡು ತೀರಿಸಿಕೊಳ್ಳಲು ಹವಣಿಸಬಹುದು. ಫಲಿತಾಂಶದ ನಂತರ ನಡೆಯುವ ಬಹುತೇಕ ಹಲ್ಲೆ, ದೊಂಬಿಗಳಿಗೆ ಇಂತಹ ನಕಾರಾತ್ಮಕ ವಿಶ್ಲೇಷಣೆಯೇ ಮುಖ್ಯ ಕಾರಣ.

ಹಾಗೆಂದು ಎಲ್ಲ ಸಂದರ್ಭಗಳಲ್ಲೂ ಹೀಗೆಯೇ ಆಗಬೇಕೆಂದಿಲ್ಲ. ಬೂತ್‌ವಾರು ಫಲಿತಾಂಶವನ್ನು ಸ್ಪರ್ಧಾತ್ಮಕವಾಗಿ, ಸಕಾರಾತ್ಮಕವಾಗಿ ತೆಗೆದುಕೊಂಡು, ಜನರ ಸಮಸ್ಯೆ ಅರಿತು, ಅವರ ಮನ ಗೆಲ್ಲುವುದರ ಮೂಲಕ ಮುಂದಿನ ದಿನಗಳಲ್ಲಿ ಮತ ಪ್ರಮಾಣವನ್ನು ಉತ್ತಮಪಡಿಸಿಕೊಳ್ಳುವ ಒಳ್ಳೆಯ ಅವಕಾಶವಿದು. ಲೋಪಗಳನ್ನು ತಿದ್ದಿಕೊಂಡು ಜವಾಬ್ದಾರಿಯುತ ಜನಪ್ರತಿನಿಧಿಯಾಗಿ ಪಕ್ಷಕ್ಕೆ ಗಟ್ಟಿ ನೆಲೆ ಒದಗಿಸಲು ಇಂತಹ ಅಂಕಿ ಅಂಶಗಳು ಸಹಕಾರಿ.

ಮತಗಟ್ಟೆವಾರು ಎಣಿಕೆಯಿಂದ ಚುನಾವಣಾ ಪ್ರಕ್ರಿಯೆ ಹೆಚ್ಚು ಸುಗಮ, ನಿಖರ ಮತ್ತು ಪಾರದರ್ಶಕವಾಗಿರುತ್ತದೆ. ಇದು ನ್ಯಾಯಸಮ್ಮತ ಚುನಾವಣೆಯನ್ನು ಖಾತರಿಗೊಳಿಸುವುದರಿಂದ ಪ್ರಜೆಗಳಿಗೆ ಪ್ರಜಾಪ್ರಭುತ್ವದ ಈ ಮಹತ್ವದ ಪ್ರಕ್ರಿಯೆಯಲ್ಲಿ ನಂಬಿಕೆಯ ಜೊತೆಗೆ ಹೆಚ್ಚು ಭಾಗಿಗಳಾಗಲು ಪ್ರೇರಣೆ ನೀಡಬಲ್ಲದು. ಒಂದು ನಿರ್ದಿಷ್ಟ ಪ್ರದೇಶದ ಸಮಸ್ಯೆಗಳು, ಜನರ ಆದ್ಯತೆಗಳು, ಸೂಕ್ಷ್ಮ ಸಂಗತಿಗಳ ಅರಿವು ಮುಂದಿನ ನೀತಿ ನಿರೂಪಣೆಗೆ, ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಉಪಯುಕ್ತ.

ಇದೆಲ್ಲ ಸರಿಯೆಂದರೂ ಚುನಾವಣೆಯಲ್ಲಿ ತನ್ನ ಖಾಸಗಿತನ, ಗೋಪ್ಯತೆ ಕಾಯ್ದುಕೊಳ್ಳುವುದು ಮತದಾರನ ಹಕ್ಕು. ಇದು ನಮ್ಮ ಪ್ರಜಾಪ್ರಭುತ್ವದ ಮೂಲ ತತ್ವ ಸಹ. ಮತದಾನ ಪ್ರಕ್ರಿಯೆ ಗುಟ್ಟು ಉಳಿಸಿಕೊಂಡಾಗ ಮಾತ್ರ ಮತದಾರನೊಬ್ಬ ಧೈರ್ಯವಾಗಿ ಮತಗಟ್ಟೆಗೆ ಬಂದು ವಿಶ್ವಾಸಪೂರ್ವಕವಾಗಿ ಮತ ಚಲಾಯಿಸಲು ಸಾಧ್ಯ. ತನ್ನ ಆಯ್ಕೆ ಬಹಿರಂಗಗೊಳ್ಳಬಹುದೆಂಬ ಆತಂಕವಿದ್ದಾಗ ಮತದಾನ ಮಾಡಲು ಹಿಂದೇಟು ಹಾಕಬಹುದು. ಮುಂದೆ ದೊಡ್ಡ ಮಟ್ಟದಲ್ಲಿ ತಾನು ವಿರೋಧ ಅನುಭವಿಸಬೇಕೆಂಬ ಭಯವಿದ್ದಾಗ ಆಯ್ಕೆಯೂ ನಿಷ್ಪಕ್ಷಪಾತವಾಗಿರಲು ಸಾಧ್ಯವಿಲ್ಲ!

ಹೌದು, ಇಡೀ ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ, ವಿಶ್ವಾಸಾರ್ಹತೆ, ಮತದ ಗೋಪ್ಯತೆ ಮಧ್ಯೆ ಸಮತೋಲನ ಕಾಯ್ದುಕೊಳ್ಳುವ ಹೊಣೆ ಚುನಾವಣಾ ಆಯೋಗದ ಮೇಲಿದೆ. ತಾನು ಯಾರಿಗೆ ಮತ ಹಾಕಿರುವೆನೆಂದು ಯಾವುದೇ ಕಾರಣಕ್ಕೂ ಬಹಿರಂಗವಾಗಬಾರದೆಂಬುದು ಸಾಮಾನ್ಯ ಮತದಾರನ ಅಪೇಕ್ಷೆಯಷ್ಟೇ ಅಲ್ಲ, ಆತನ ಖಾಸಗಿತನದ ಹಕ್ಕು ಕೂಡಾ. ಈ ದಿಸೆಯಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ನಮ್ಮ ಪ್ರಜಾಪ್ರಭುತ್ವದ ನೆಲೆಯನ್ನು ಗಟ್ಟಿಗೊಳಿಸುವಲ್ಲಿ ಹೆಚ್ಚು ಸಹಕಾರಿ.

ವಾಚಕರ ವಾಣಿ

ಸಹೃದಯರ ಸ್ಪಂದನೆ, ಮಾನವೀಯ ಗುಣ

ಬೆಂಗಳೂರಿನ ರಸ್ತೆ ಬದಿಯಲ್ಲಿ ವೃದ್ಧರೊಬ್ಬರು ಹಸಿವಿನಿಂದ ಕುಸಿದುಬಿದ್ದಿದ್ದನ್ನು ಕಂಡ ಮಹಿಳಾ ಪೊಲೀಸರು ಸ್ವಂತ ಖರ್ಚಿನಲ್ಲಿ ಅವರಿಗೆ ಊಟ, ಹೊಸಬಟ್ಟೆ, ಪಾನೀಯ ಎಲ್ಲವನ್ನೂ ಕೊಟ್ಟು ಮಾನವೀಯತೆ ಮೆರೆದಿದ್ದಾರೆ (ಪ್ರ.ವಾ., ಮೇ 17). ಇದು ಮಾನವನ ಸಹಜ ಗುಣ. ಬೆಂಗಳೂರಿನಂತಹ ಮಹಾನಗರದಲ್ಲಿ ಪ್ರತಿದಿನ ಇಂತಹ ಹತ್ತುಹಲವು ಪ್ರಕರಣಗಳು ನಡೆಯುವುದು ಸಾಮಾನ್ಯ. ಹಲವೆಡೆ ಜನರು ಸ್ಪಂದಿಸಿ, ಸಂತ್ರಸ್ತರಿಗೆ ಹೋಟೆಲ್‌ಗಳಲ್ಲಿ ಊಟ, ಉಪಾಹಾರ ಕೊಡಿಸಿ, ಕೈಗೆ ಹಣವನ್ನೂ ಕೊಟ್ಟು ಹೋಗುವುದಿದೆ. ಇಂತಹ ಸಹೃದಯರ ಜೊತೆಗೆ ಪೊಲೀಸರ ಮನಸ್ಸೂ ಇಂತಹ ಕ್ರಿಯೆಗಳಿಗೆ ಸ್ಪಂದಿಸುವುದು ಉತ್ತಮ ಬೆಳವಣಿಗೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಶ್ವಾನಪ್ರೀತಿ ಹೊರೆಯಾಗದಿರಲಿ

ಶ್ವಾನಗಳ ಮೇಲಿನ ಪ್ರೀತಿ ಮತ್ತು ಅವುಗಳನ್ನು ಪಾಲಿಸಬೇಕಾದವರು ಅನುಸರಿಸಬೇಕಾದ ರೀತಿನೀತಿಗಳ ಬಗ್ಗೆ ಡಾ. ಚೈತ್ರಾ ಅವರು ಅರ್ಥವತ್ತಾಗಿ ವಿವರಿಸಿದ್ದಾರೆ (ಸಂಗತ, ಮೇ 17). ನಾಯಿಗಳ ಮಾಲೀಕರು ಮತ್ತು ಆ ನಾಯಿಗಳಿಂದ ತೊಂದರೆಗೊಳಗಾಗುವ ಜನರ ನಡುವೆ ನಡೆಯುವ ಜಗಳಗಳನ್ನು ನಾನು ಕೂಡ ನೋಡುತ್ತಲೇ ಇರುತ್ತೇನೆ.

ದಾವಣಗೆರೆ ಜಿಲ್ಲೆಯಲ್ಲಿ ನಾಲ್ಕೈದು ತಿಂಗಳ ಹಿಂದೆ ಎಂಟು ವರ್ಷದ ಬಾಲಕಿಯೊಬ್ಬಳನ್ನು ಬೀದಿನಾಯಿಗಳು ಕಚ್ಚಿ ಕೊಂದುಹಾಕಿದ್ದು ಮತ್ತು ಅದೇ ರೀತಿ ನಾಯಿಗಳ ದಾಳಿಯಿಂದ ತೀವ್ರ ಗಾಯಗೊಂಡು ನರಳುತ್ತಿರುವ ಸಾರ್ವಜನಿಕರ ಬಗ್ಗೆ ಪತ್ರಿಕೆಗಳಲ್ಲಿ ಸುದ್ದಿಗಳು ಪ್ರಕಟವಾಗುತ್ತಲೇ ಇರುತ್ತವೆ. ಶ್ವಾನಪ್ರೀತಿಯು ಮನುಷ್ಯರಿಗೆ ಹೊರೆಯಾಗದಂತೆ ನೋಡಿಕೊಳ್ಳಬೇಕಾದುದು ನಾಯಿಗಳನ್ನು ಸಾಕುವವರ ಜವಾಬ್ದಾರಿ.

ರವಿಕಿರಣ್ ಶೇಖರ್, ಬೆಂಗಳೂರು

ಬದಲಾಗಲಿ ಲಕೋಟೆ ಸಂಸ್ಕೃತಿ

ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ಸದಸ್ಯರು ತಮ್ಮ ನಾಯಕನನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿಕೊಳ್ಳುವುದು ಸಂಪ್ರದಾಯ. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಇದಕ್ಕೆ ತದ್ವಿರುದ್ಧವಾಗಿ 1980ರಿಂದ ಲಕೋಟೆ ವ್ಯವಸ್ಥೆ ಜಾರಿಗೆ ಬಂತು. ಕರ್ನಾಟಕದಲ್ಲಿ ನಡೆದ ಮೊದಲ ವಿಧಾನಸಭಾ ಚುನಾವಣೆಯಲ್ಲಿ, ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಹೈಕಮಾಂಡಿನಿಂದ ವೀಕ್ಷಕರಾಗಿ ಆಗಮಿಸಿದ್ದರು. ಪ್ರತಿಯೊಬ್ಬ ಸದಸ್ಯರ ಹಿನ್ನೆಲೆ, ವಿದ್ಯಾಭ್ಯಾಸದಂತಹ ವಿಷಯಗಳನ್ನು ವಿಚಾರಿಸಿ, ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಮತ್ತು ಯಾವ ಕಾರಣಕ್ಕೆ ಎಂಬುದರ ಬಗ್ಗೆ ವಿವರಣೆ ಪಡೆದುಕೊಂಡರು. ಆ ವರದಿಯನ್ನು ಕಾಂಗ್ರೆಸ್ ವರಿಷ್ಠರಿಗೆ ಸಲ್ಲಿಸಿ, ಅದರಂತೆ ಅಂದಿನ ಶಾಸಕರ ಬಹುಮತ ಪಡೆದ ಕೆಂಗಲ್ ಹನುಮಂತಯ್ಯ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಲಾಗಿತ್ತು.

ಲಕೋಟೆ ಸಂಸ್ಕೃತಿ ಜಾರಿಗೆ ಬಂದ ಮೇಲೆ, ಪಕ್ಷದ ಶಾಸಕರ ಬಹುಮತ ಇಲ್ಲದಿದ್ದರೂ ವೀಕ್ಷಕರು ಬಂದು ನಾಯಕನ ಹೆಸರನ್ನು ದಿಢೀರಾಗಿ ಘೋಷಣೆ ಮಾಡುವ ಪದ್ಧತಿ ಬಂದಿತು. ಅದರ ಫಲವಾಗಿ ಗುಂಡೂರಾವ್, ಬಂಗಾರಪ್ಪ, ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸುವಂತಾಯಿತು. ಆಗ, ಎಂ.ರಾಜಶೇಖರಮೂರ್ತಿ, ಎಚ್.ಸಿದ್ಧವೀರಪ್ಪ, ವೀರೇಂದ್ರ ಪಾಟೀಲ್ ಅವರಂತಹ ಹಿರಿಯರೂ ಮುಖ್ಯಮಂತ್ರಿ ಸ್ಥಾನದಿಂದ ವಂಚಿತರಾಗಿದ್ದರು. ಇಂದಿರಾ ಗಾಂಧಿ ನೇತೃತ್ವದ ಆಗಿನ ಹೈಕಮಾಂಡ್ ಅತ್ಯಂತ ಪ್ರಭಾವಶಾಲಿಯಾಗಿದ್ದು ಎಲ್ಲರೂ ‘ಹೈಕಮಾಂಡ್ ತೀರ್ಮಾನವೇ ಅಂತಿಮ’ ಎಂದು ಹೇಳುತ್ತಿದ್ದರೇ ವಿನಾ ಪ್ರತಿರೋಧ ತೋರುವ ಸಾಮರ್ಥ್ಯ ಅವರಲ್ಲಿ ಇರಲಿಲ್ಲ. ಈಗ ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿರುವ ಸನ್ನಿವೇಶದಲ್ಲಿ, ರಾಜ್ಯದ ನಾಯಕಮಣಿಗಳು ಹೈಕಮಾಂಡ್ ನಿರ್ಧಾರಕ್ಕೆ ತಲೆಬಾಗದೆ ಹಟಕ್ಕೆ ಬಿದ್ದವರಂತೆ ವರ್ತಿಸುತ್ತಿದ್ದಾರೆ. ಇಂತಹ ಬಿಗಿಪಟ್ಟುಗಳ ಮೂಲಕ ಮತದಾರ ಪ್ರಭುವಿನ ತೀರ್ಪನ್ನು ಕಾಂಗ್ರೆಸ್ ನಾಯಕರು ಪರಿಗಣನೆಗೆ ತೆಗೆದುಕೊಳ್ಳದೆ, ಸನ್ಮಾರ್ಗದಲ್ಲಿ ಆಡಳಿತ ನಡೆಸಲು ಅಡಚಣೆ ತಂದುಕೊಳ್ಳುವುದು ಸರಿಯಲ್ಲ.

ಡಿ.ಪ್ರಸನ್ನಕುಮಾರ್, ಬೆಂಗಳೂರು

ಜನಪದ ಗಣಿತ: ನಡೆಯಲಿ ಸಂಶೋಧನೆ

ನಮ್ಮ ದೇಶಕ್ಕೆ ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಉನ್ನತ ಶಿಕ್ಷಣದಲ್ಲಿ ವೇದ ಗಣಿತ, ಸಂಸ್ಕೃತ, ಆಯುರ್ವೇದ, ಜ್ಯೋತಿಷಶಾಸ್ತ್ರ, ನೃತ್ಯ, ಸಂಗೀತ, ತತ್ವಶಾಸ್ತ್ರ, ಭಾರತೀಯ ನೀತಿಶಾಸ್ತ್ರದಂತಹ ವಿಷಯಗಳನ್ನು ಅಳವಡಿಸಬೇಕೆಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯುಜಿಸಿ) ದೇಶದ ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಆದೇಶ ನೀಡಿರುವುದು ಪೂರ್ಣ ಪ್ರಮಾಣದಲ್ಲಿ ಒಪ್ಪಿತವಾದುದಲ್ಲ. ಹೊಸ ಕಲಿಕಾ ನೀತಿಯಲ್ಲಿ ವೇದ ಗಣಿತ, ಜ್ಯೋತಿಷಶಾಸ್ತ್ರ ಎರಡನ್ನೂ ಸೇರಿಸುವುದರ ಉದ್ದೇಶ ಮತ್ತು ಅವುಗಳ ವ್ಯಾಪ್ತಿ ಕುರಿತು ಅನೇಕ ಪ್ರಶ್ನೆಗಳು ಏಳುತ್ತವೆ. ಆರ್ಷೇಯವಾದ ವೇದಗಳು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂದು ವಿಭಾಗಿಸಲ್ಪಟ್ಟಿವೆ. ಅವು ನಮಗೆ ಲಭ್ಯವಿರುವ ಆರ್ಯ ಜನಾಂಗದ ಮೊದಲ ದಾಖಲೆಗಳು. ವಿಶ್ವ ಜ್ಞಾನದ ಜಗತ್ತಿನ ಅತಿ ಪ್ರಾಚೀನವಾದ ಗ್ರಂಥಗಳು. ಅಂದಿನ ಋಷಿಗಳು ಈ ಜಗತ್ತನ್ನು ಗ್ರಹಿಸಿ, ವ್ಯಾಖ್ಯಾನಿಸಿದ ಋಕ್ಕುಗಳು. ಅವುಗಳಲ್ಲಿ ಯಾವುದೇ ಜಾತಿ ಮತಗಳ ಸೋಂಕಿಲ್ಲ. ಯಾಕೆಂದರೆ, ವೇದಗಳ ಕಾಲದಲ್ಲಿ ನಾವು ಇಂದು ಚಿತ್ರ ವಿಚಿತ್ರವಾಗಿ ವಿಭಾಗಿಸಿಕೊಂಡು ಪಡಿಪಾಡಲು ಪಡುತ್ತಿರುವ ಜಾತಿ ಮತಗಳ ಪ್ರಸ್ತಾಪವಿಲ್ಲ. ಈ ಮಾತು ವೇದಾಂಗಗಳಾದ ಉಪನಿಷತ್ತುಗಳಿಗೂ ಅನ್ವಯಿಸುತ್ತದೆ. ಆರ್ಯ ಮೂಲದ ಈ ಆದ್ಯ ಗ್ರಂಥಗಳನ್ನು ಈ ದೃಷ್ಟಿಯಿಂದಲೇ ನೋಡಿ, ಅವುಗಳಲ್ಲಿರುವ ಸಾರವನ್ನು ಗ್ರಹಿಸಬೇಕಿದೆ. ವೇದ ಗಣಿತವನ್ನು ಹೊಸ ಶಿಕ್ಷಣ ನೀತಿಯಲ್ಲಿ ಅನಗತ್ಯವಾಗಿ ಅಳವಡಿಸಿ ಆರ್ಯ ಪ್ರಾಚೀನ ಜ್ಞಾನವನ್ನು ಮಸುಕು ಮಾಡುವುದು ಎಷ್ಟು ಸರಿ?

ಇದೇ ಸಂದರ್ಭದಲ್ಲಿ, ನಮ್ಮ ಜನಪದ ಜೀವನದಲ್ಲಿ ಅಲಕ್ಷ್ಯಕ್ಕೆ ಒಳಗಾಗಿರುವ ಜನಪದ ಗಣಿತದತ್ತ ಗಮನ ಹರಿಸಬೇಕಿದೆ. ಉದಾಹರಣೆಗೆ: ಜೀನಹಳ್ಳಿ ಸಿದ್ಧಲಿಂಗಪ್ಪ ಎಂಬ ಜನಪದ ಸಾಹಿತ್ಯ ಸಂಗ್ರಾಹಕರು ‘ಜನಪದ ಗಣಿತ’ ಎಂಬ ಕೃತಿಯಲ್ಲಿ ನಮ್ಮ ಜನಪದರ ಗಣಿತ ಜಾಣ್ಮೆಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ದಾರಿಯಲ್ಲಿ ಇನ್ನೂ ಕೆಲವು ಕೃತಿಗಳು ಬಂದಿರುವುದನ್ನು ನಾವು ಗಮನಿಸಬೇಕಿದೆ. ಕನ್ನಡ ಮಾತ್ರವಲ್ಲ, ಭಾರತದ ಇತರ ದೇಶಿ ಭಾಷೆಗಳಲ್ಲೂ ಜನಪದ ಗಣಿತ ಹೇರಳವಾಗಿದೆ. ಆ ದಿಕ್ಕಿನಲ್ಲಿ ಸಂಶೋಧನೆ ನಡೆಯಬೇಕಿದೆ.

ಹೊರೆಯಾಲ ದೊರೆಸ್ವಾಮಿ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿ ಕೈ ಹಿಡಿಯದ ಅಭಿವೃದ್ಧಿ ಯೋಜನೆಗಳ ಜನಪ್ರಿಯತೆ

● ವಿಭಾ ಅತ್ರಿ, ಆಲಿಯಾ ಮಲಿಕ್

ಹೆಚ್ಚಿನ ಸರ್ಕಾರಗಳು ಜನಕೇಂದ್ರಿತ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುತ್ತವೆ ಮತ್ತು ಅವುಗಳ ಮೂಲಕ ಜನರಿಗೆ ಸೌಲಭ್ಯಗಳನ್ನು ಒದಗಿಸುತ್ತವೆ. ಇಂತಹ ಯೋಜನೆಗಳು ಕೂಡ ಕೆಲವೊಮ್ಮೆ ಜನರು ಯಾರಿಗೆ ಮತ ನೀಡಬೇಕು ಎಂಬುದನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಂತಹ ಯೋಜನೆಗಳು ಜನರಿಗೆ ಯಾವ ಪ್ರಮಾಣದಲ್ಲಿ ತಲುಪಿವೆ ಮತ್ತು ಅವುಗಳ ಪರಿಣಾಮ ಏನು ಎಂಬುದನ್ನು ಕರ್ನಾಟಕದ ಮತದಾರರಲ್ಲಿ ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷೆಯ ಭಾಗವಾಗಿ ಕೇಳಲಾಗಿದೆ.

ಕಲ್ಯಾಣ ಯೋಜನೆಗಳ ಫಲಾನುಭವಿಗಳು:
ಹತ್ತರಲ್ಲಿ ಹತ್ತಿರ ಹತ್ತಿರ ಮೂವರು ಮತದಾರರು ಕೇಂದ್ರ ಸರ್ಕಾರದ ನರೇಗಾ, ಆಯುಷ್ಮಾನ್ ಭಾರತ್, ಪ್ರಧಾನ ಮಂತ್ರಿ ಆವಾಜ್, ಉಜ್ವಲ ಮತ್ತು ಪಿಂಚಣಿ ಯೋಜನೆಗಳಿಂದ ಅನುಕೂಲ ಪಡೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಜೀವನ್ ಜ್ಯೋತಿ ವಿಮಾ ಯೋಜನೆ, ಸುರಕ್ಷಾ ವಿಮಾ ಯೋಜನೆ, ಬೆಳೆ ವಿಮೆ ಯೋಜನೆಗಳು ಹೆಚ್ಚು ಜನರಿಗೆ ತಲುಪಿಲ್ಲ. ಹತ್ತರಲ್ಲಿ ಇಬ್ಬರು ಮತದಾರರು ಮಾತ್ರ ಈ ಯೋಜನೆಗಳಿಂದ ಅನುಕೂಲ ಆಗಿದೆ ಎಂದಿದ್ದಾರೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಚ್ಚು ಹೆಣ್ಣು ಮಕ್ಕಳು ಜನಿಸಬೇಕು ಮತ್ತು ಹೆಣ್ಣು ಭ್ರೂಣ ಹತ್ಯೆ ನಿಲ್ಲಬೇಕು ಎಂಬುದು ರಾಜ್ಯ ಸರ್ಕಾರದ ಭಾಗ್ಯಲಕ್ಷ್ಮಿ ಯೋಜನೆಯ ಮುಖ್ಯ ಉದ್ದೇಶ. ಮೊದಲನೆಯ ಮತ್ತು ಎರಡನೆಯ ಹೆಣ್ಣು ಮಗು ಜನಿಸಿದಾಗ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯ ಸೌಲಭ್ಯ ಇದೆ. ಈ ಯೋಜನೆಯ ಫಲವನ್ನು ಅತಿ ಹೆಚ್ಚು ಜನರು ಪಡೆದುಕೊಂಡಿದ್ದಾರೆ. ತಮಗೆ ಅಥವಾ ತಮ್ಮ ಕುಟುಂಬದ ಸದಸ್ಯರಿಗೆ ಈ ಯೋಜನೆಯ ಪ್ರಯೋಜನ ದೊರೆತಿದೆ ಎಂದು ಸಮೀಕ್ಷೆಯಲ್ಲಿ ಭಾಗಿಯಾದ ಶೇ 45ರಷ್ಟು ಮತದಾರರು ಹೇಳಿದ್ದಾರೆ. ಶಾಲಾ ಮಕ್ಕಳಿಗೆ ಸೈಕಲ್ ನೀಡುವ ಯೋಜನೆಯೂ ಹೆಚ್ಚು ಜನಪ್ರಿಯವಾಗಿದೆ. ಶೇ 37ರಷ್ಟು ಮತದಾರರು ಈ ಯೋಜನೆಯಿಂದ ಅನುಕೂಲ ಆಗಿದೆ ಎಂದು ಹೇಳಿದ್ದಾರೆ.

ಆರಂಭದಲ್ಲಿ, ಈ ಯೋಜನೆಯು ಸರ್ಕಾರಿ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿನಿಯರಿಗೆ ಸೀಮಿತವಾಗಿತ್ತು. ಬಳಿಕ, ಇದನ್ನು ಅನುದಾನಿತ ಶಾಲೆಗೆ ಹಾಗೂ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಯಿತು. ಈ ಶೈಕ್ಷಣಿಕ ವರ್ಷದಲ್ಲಿ ಈ ಯೋಜನೆಯನ್ನು ಕೈಬಿಡಲಾಗಿತ್ತು. ಹಾಗಿದ್ದರೂ ಗಣನೀಯ ಸಂಖ್ಯೆಯ ಕುಟುಂಬಗಳಿಗೆ ಈ ಯೋಜನೆಯ ಪ್ರಯೋಜನ ದೊರೆತಿದೆ. ಪಿಂಚಣಿ ಯೋಜನೆ, ಶೂನ್ಯ ಬಡ್ಡಿಯ ಕೃಷಿ ಸಾಲ ಯೋಜನೆ ಮತ್ತು ಬೆಳೆ ವಿಮೆಯ ಲಾಭ ಹತ್ತರಲ್ಲಿ ಮೂವರು ಮತದಾರರಿಗೆ ದೊರೆತಿದೆ. ಕಾಲುಭಾಗದಷ್ಟು ಮತದಾರರು ಕೋವಿಡ್ ಪರಿಹಾರದ ಪ್ರಯೋಜನ ದೊರೆತಿದೆ ಎಂದಿದ್ದಾರೆ. ರಾಜ್ಯ ಸರ್ಕಾರದ ಆರೋಗ್ಯ ಕವಚ ಯೋಜನೆಯು ಹತ್ತರಲ್ಲಿ ಇಬ್ಬರು ಮತದಾರರಿಗೆ ದೊರೆತಿದೆ. ಮುಖ್ಯಮಂತ್ರಿ ಬಾಲ ಸೇವಾ ಯೋಜನೆಯ ಪ್ರಯೋಜನವು ಶೇ 20ಕ್ಕಿಂತ ಕಡಿಮೆ ಜನರಿಗಷ್ಟೇ ದೊರೆತಿದೆ. ಕೋವಿಡ್‌ನಿಂದಾಗಿ ಹೆತ್ತವರನ್ನು ಕಳೆದುಕೊಂಡ ಮಕ್ಕಳಿಗೆ ತಿಂಗಳಿಗೆ ₹3,500 ನೀಡುವ ಯೋಜನೆ ಇದು. ಕಳೆದ 2–3 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯದ ಯಾವುದೇ ಯೋಜನೆಯಿಂದ ನಿಮಗೆ ಅಥವಾ ನಿಮ್ಮ ಕುಟುಂಬಕ್ಕೆ ಪ್ರಯೋಜನ ಆಗಿದೆಯೇ ಎಂಬ ಪ್ರತ್ಯೇಕ ಪ್ರಶ್ನೆಯನ್ನೂ ಕೇಳಲಾಗಿತ್ತು. ರಾಜ್ಯದ ಯೋಜನೆಗಳಿಗೆ ಹೋಲಿಸಿದರೆ ಕೇಂದ್ರದ ಯೋಜನೆಗಳಿಂದ ಹೆಚ್ಚಿನ ಪ್ರಯೋಜನ ದೊರೆತಿದೆ ಎಂದು ಜನರು ಹೇಳಿದ್ದಾರೆ. ಆ ಪ್ರಮಾಣ ಕ್ರಮವಾಗಿ ಹೀಗಿದೆ: ಶೇ 44 ಮತ್ತು ಶೇ 38.

ಈ ಯೋಜನೆಗಳು ಮತಗಳಾಗಿ ಪರಿವರ್ತನೆ ಆಗಿದೆಯೇ?
ಮತದಾರರ ನಿರ್ಧಾರವು ಒಂದು ಅಂಶದ ಮೇಲೆ ಆಧಾರಿತ ಆಗಿರುವುದಿಲ್ಲ. ಯೋಜನೆಯ ಪ್ರಯೋಜನಗಳು ಮತ್ತು ಮತ ಆಯ್ಕೆಯ ನಡುವೆ ಸ್ವಲ್ಪ ಮಟ್ಟಿನ ನಂಟು ಇದೆ: ಕೇಂದ್ರ ಅಥವಾ ರಾಜ್ಯದ ಯಾವುದೇ ಯೋಜನೆಯ ಪ್ರಯೋಜನ ಪಡೆದುಕೊಂಡವರು ಬಿಜೆಪಿಗೆ ಮತ ಹಾಕಿರುವ ಸಾಧ್ಯತೆ ಹೆಚ್ಚು. ಪ್ರಯೋಜನ ದೊರೆತಿಲ್ಲದವರು ಕಾಂಗ್ರೆಸ್ ಅಥವಾ ಜೆಡಿಎಸ್‌ಗೆ ಮತ ಹಾಕಿರಬಹುದು. ಅಭಿವೃದ್ಧಿ ಯೋಜನೆಗಳು ಮತ್ತು ಅವುಗಳ ಫಲಾನುಭವಿಗಳ ರಾಜಕೀಯ ಆಯ್ಕೆಯ ನಡುವೆ ಸಂಬಂಧ ಇದೆ ಎಂಬ ವಿಚಾರವು ಈ ಕುರಿತ ಚರ್ಚೆಗೆ ಹೊಸ ಸೇರ್ಪಡೆ.

ಲೇಖಕರು: ಲೋಕನೀತಿ–ಸಿಎಸ್‌ಡಿಎಸ್‌ನಲ್ಲಿ ಸಂಶೋಧಕರು

ಕೇಂದ್ರದ ಯೋಜನೆಗಳ ಫಲಾನುಭವಿಗಳೇ?

‘ನೀವು ಅಥವಾ ನಿಮ್ಮ ಕುಟುಂಬದವರಲ್ಲಿ ಯಾರಾದರೂ ಕೇಂದ್ರ ಸರ್ಕಾರದ ಈ ಯೋಜನೆಗಳ ಫಲಾನುಭವಿಗಳೇ?’ ಎಂದು ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರನ್ನು ಕೇಳಲಾಗಿತ್ತು. ಈ ಪ್ರಕಾರ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳ ಫಲಾನುಭವಿಗಳ ಪ್ರಮಾಣ ಇಂತಿದೆ...



ರಾಜ್ಯದ ಯೋಜನೆಗಳ ಫಲಾನುಭವಿಗಳೇ?

‘ನೀವು ಅಥವಾ ನಿಮ್ಮ ಕುಟುಂಬದವರಲ್ಲಿ ಯಾರಾದರೂ ರಾಜ್ಯ ಸರ್ಕಾರದ ಈ ಯೋಜನೆಗಳ ಫಲಾನುಭವಿಗಳೇ?’ ಎಂದು ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರನ್ನು ಕೇಳಲಾಗಿತ್ತು. ಈ ಪ್ರಕಾರ ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಗಳ ಫಲಾನುಭವಿಗಳ ಪ್ರಮಾಣ ಇಂತಿದೆ...



ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳಲ್ಲಿ ಪಕ್ಷಗಳ ಆಯ್ಕೆ

	ಕಾಂಗ್ರೆಸ್‌ಗೆ ಮತ ನೀಡಿದವರು	ಬಿಜೆಪಿಗೆ ಮತ ನೀಡಿದವರು	ಜೆಡಿಎಸ್‌ಗೆ ಮತ ನೀಡಿದವರು	ಇತರರಿಗೆ ಮತ ನೀಡಿದವರು
ಕೇಂದ್ರದ ಯೋಜನೆಗಳ ಫಲಾನುಭವಿಗಳು	28%	54%	11%	7%
ಕೇಂದ್ರದ ಯೋಜನೆಗಳ ಫಲಾನುಭವಿ ಅಲ್ಲದವರು	54%	24%	15%	7%
ರಾಜ್ಯದ ಯೋಜನೆಗಳ ಫಲಾನುಭವಿಗಳು	30%	50%	13%	7%
ರಾಜ್ಯದ ಯೋಜನೆಗಳ ಫಲಾನುಭವಿ ಅಲ್ಲದವರು	51%	28%	14%	7%

● ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಫಲಾನುಭವಿಗಳಲ್ಲಿ ಬಿಜೆಪಿಗೆ ಮತ ಹಾಕುತ್ತೇವೆ ಎಂದಿದ್ದವರ ಪ್ರಮಾಣವೇ ಹೆಚ್ಚು. ಆದರೆ ಕೇಂದ್ರದ ಯೋಜನೆಯ ಫಲಾನುಭವಿಗಳಲ್ಲಿ ಶೇ 46ರಷ್ಟು ಜನರು ಬೇರೆ ಪಕ್ಷಗಳಿಗೆ ಮತ ಹಾಕುತ್ತೇವೆ ಎಂದು ಹೇಳಿದ್ದರು

● ರಾಜ್ಯ ಸರ್ಕಾರದ ಕಲ್ಯಾಣ ಯೋಜನೆಗಳ ಫಲಾನುಭವಿಗಳಲ್ಲಿ ಶೇ 50ರಷ್ಟು ಮಂದಿ ಮಾತ್ರ ಬಿಜೆಪಿಗೆ ಮತ ಹಾಕುತ್ತೇವೆ ಎಂದಿದ್ದರು. ಉಳಿದ ಶೇ 50ರಷ್ಟು ಮಂದಿಯ ಮತವು ಕಾಂಗ್ರೆಸ್, ಜೆಡಿಎಸ್ ಮತ್ತು ಇತರೆ ಪಕ್ಷಗಳ ಮಧ್ಯೆ ಹಂಚಿಹೋಗಿದೆ

ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರದ ಸ್ಥಿತಿಗತಿ ಜನ ಹೇಳಿದ್ದೇನು?

ಬಿಜೆಪಿ ಆಡಳಿತದಲ್ಲಿ ಭ್ರಷ್ಟಾಚಾರ ಏರಿಕೆಯಾಗಿದೆಯೇ ಎಂದು ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರನ್ನು ಪ್ರಶ್ನಿಸಲಾಗಿತ್ತು. ಈ ಪ್ರಶ್ನೆಗೆ ಅವರು ನೀಡಿದ ಉತ್ತರಗಳು ಇಂತಿವೆ



ಭ್ರಷ್ಟಾಚಾರ ಹೆಚ್ಚಾಗಿದೆ ಎಂದವರ ಮತವೂ ಬಿಜೆಪಿಗೆ

● ಸುಹಾಸ್ ಪಾಲ್ಶಿಕರ್

ಹಲವು ನಿರ್ಣಾಯಕ ಅಂಶಗಳಲ್ಲಿ ಭ್ರಷ್ಟಾಚಾರವು ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಬಹು ಮುಖ್ಯವಾಯಿತು ಎನ್ನುವುದು ಹಲವು ರಾಜಕೀಯ ವಿಶ್ಲೇಷಕರ ಅಭಿಮತ. ಹಲವು ಪತ್ರಿಕೆಗಳ ಮುಖಪುಟಗಳಲ್ಲಿ ಕಾಂಗ್ರೆಸ್ ನೀಡಿದ್ದ ‘ಶೇ 40ರಷ್ಟು ಭ್ರಷ್ಟಾಚಾರ’ದ ಜಾಹೀರಾತುಗಳು ಭಾರಿ ಜನಾಭಿಪ್ರಾಯವನ್ನೇ ರೂಪಿಸಿದವು. ಜೊತೆಗೆ ಈ ಜಾಹೀರಾತುಗಳು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾದವು. ಹಾಗಾದರೆ, ಈ ಬಾರಿಯ ಚುನಾವಣೆಯಲ್ಲಿ ಭ್ರಷ್ಟಾಚಾರದ ವಿಷಯವು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂಬುದನ್ನು ಈ ಸಮೀಕ್ಷಾ ವರದಿಯಲ್ಲಿ ಚರ್ಚಿಸಲಾಗಿದೆ.

ಆರ್ಥಿಕ ಹಿಂಜರಿತದಿಂದ ಮತದಾರರು ಮೊದಲೇ ಕಳವಳಗೊಂಡಿದ್ದರು ಎಂಬುದಂತೂ ಸತ್ಯ. ಇದರ ಮಧ್ಯೆ ಮತದಾರನು ಯಾರಿಗೆ ಮತ ನೀಡಬೇಕು ಎಂದು ನಿರ್ಧಾರ ಕೈಗೊಳ್ಳುವಲ್ಲಿ ಭ್ರಷ್ಟಾಚಾರದ ಪ್ರಸ್ತಾಪವು ಇನ್ನಷ್ಟು ಸಹಕಾರಿಯಾಯಿತು. ಬಿಜೆಪಿಗೇ ಮತ ಹಾಕುತ್ತೇವೆ ಎಂದ ಹತ್ತರಲ್ಲಿ ನಾಲ್ಕಕ್ಕೂ ಹೆಚ್ಚು ಜನರು (ಶೇ 42) ರಾಜ್ಯದಲ್ಲಿ ಭ್ರಷ್ಟಾಚಾರ ಏರಿಕೆಯಾಗಿದೆ ಎಂದಿದ್ದರು!

ರಾಜ್ಯದಲ್ಲಿನ ಬಿಜೆಪಿ ಸರ್ಕಾರದ ಆಡಳಿತದ ಕುರಿತು ಹಾಗೂ ಈ ಬಾರಿಯ ಚುನಾವಣಾ ವಿಷಯಗಳು ಏನು ಎನ್ನುವ ಕುರಿತು ಮತದಾನಕ್ಕೆ ಎರಡು ವಾರಗಳು ಇರುವಾಗ ಲೋಕನೀತಿಯು ಸಮೀಕ್ಷೆ ನಡೆಸಿತ್ತು. ಜನರಿಗೆ ನೇರ ಪ್ರಶ್ನೆಗಳನ್ನು ಕೇಳಲಾಯಿತು. ನಾವು ಪ್ರಶ್ನೆ ಕೇಳಿದ ಅರ್ಧಕ್ಕೂ ಹೆಚ್ಚು ಜನರು ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಭ್ರಷ್ಟಾಚಾರವು ಏರಿಕೆ ಕಂಡಿದೆ ಎಂದು ಉತ್ತರಿಸಿದ್ದರು.

ಹಾಗಿದ್ದರೂ ಬಿಜೆಪಿಯ ಕಟ್ಟಾ ಅಭಿಮಾನಿಗಳು ಈ ಅಂಶವನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಕಾಂಗ್ರೆಸ್ ಸರ್ಕಾರವೇ ಹೆಚ್ಚು ಭ್ರಷ್ಟವಾಗಿತ್ತು ಎಂದು ಕೆಲವರು ಅಭಿಪ್ರಾಯಪಟ್ಟರು. ಆದರೂ, ಬಿಜೆಪಿಗೆ ಮತ ನೀಡಲು ಇಚ್ಛಿಸಿದವರಲ್ಲಿ ಕೆಲವರು ಮಾತ್ರ ಭ್ರಷ್ಟಾಚಾರ ಇಳಿಕೆಯಾಗಿದೆ ಎಂದಿದ್ದು ಕುತೂಹಲಕಾರಿ ವಿಷಯವಾಗಿದೆ. ಮತದಾನಕ್ಕೂ ಮುನ್ನ ಭ್ರಷ್ಟಾಚಾರದ ವಿಷಯವು ಯಾರಿಗೆ ಮತ ನೀಡಬೇಕು ಎನ್ನುವ ಆಯ್ಕೆಯ ಮೇಲೆ ಪ್ರಭಾವ ಬೀರಿತು ಎನ್ನುವುದರಲ್ಲಿ ಆಶ್ಚರ್ಯವಿಲ್ಲ.

ಲೇಖಕರು: ರಾಜ್ಯಶಾಸ್ತ್ರ ಉಪನ್ಯಾಸಕ ಹಾಗೂ ‘ಸ್ಟಡೀಸ್ ಇನ್ ಇಂಡಿಯನ್ ಪಾಲಿಟಿಕ್ಸ್’ನ ಮುಖ್ಯ ಸಂಪಾದಕ

ಭ್ರಷ್ಟಾಚಾರ ಏರಿಕೆ ಮತ್ತು ಯಾರಿಗೆ ಮತ?

ಭ್ರಷ್ಟಾಚಾರ ಏರಿಕೆಯಾಗಿದೆ ಅಥವಾ ಇಳಿಕೆಯಾಗಿದೆ ಅಥವಾ ಯಥಾಸ್ಥಿತಿಯಲ್ಲಿದೆ ಎಂದಿದ್ದವರನ್ನು, ‘ಯಾವ ಪಕ್ಷಕ್ಕೆ ಮತ ನೀಡುತ್ತೀರಿ’ ಎಂದು ಪ್ರಶ್ನಿಸಲಾಗಿತ್ತು



ಭ್ರಷ್ಟಚಾರ ಕಡಿಮೆಯಾಗಿದೆ ಎಂದವರಲ್ಲಿ ಶೇ 50ಕ್ಕೂ ಹೆಚ್ಚು ಮಂದಿ ಬಿಜೆಪಿಗೆ ಮತ ಹಾಕುತ್ತೇವೆ ಎಂದಿದ್ದರು. ಭ್ರಷ್ಟಾಚಾರದ ಮಟ್ಟ ಯಥಾಸ್ಥಿತಿಯಲ್ಲಿ ಇದೆ ಎಂದವರಲ್ಲೂ ಶೇ 41ರಷ್ಟು ಜನರು ಬಿಜೆಪಿಗೇ ಮತ ಹಾಕುತ್ತೇವೆ ಎಂದಿದ್ದರು

ಆಧಾರ: ಲೋಕನೀತಿ–ಸಿಎಸ್‌ಡಿಎಸ್
ಪ್ರಜಾವಾಣಿ ಗ್ರಾಫಿಕ್ಸ್: ಶಶಿಕಿರಣ ದೇಸಾಯಿ ಬಿ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ತಕ್ಷಣವೇ ಹಿಂದೂಗಳ ಮೇಲೆ ಹಲ್ಲೆ ಮತ್ತು ದೌರ್ಜನ್ಯ ಆರಂಭವಾಗಿದೆ. ರಾಜ್ಯದಲ್ಲಿ ಮೂವರು ಜೈನ ಸಂತರ ಮೇಲೆ ಮುಸ್ಲಿಮರು ಹಲ್ಲೆ ನಡೆಸಿದ್ದಾರೆ. ಜತೆಗೆ ಹಲ್ಲೆಯ ನಂತರ, ‘ಕಾಂಗ್ರೆಸ್ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದಾರೆ. ಕಾಂಗ್ರೆಸ್‌ಗೆ ಮತಹಾಕಿದ ಹಿಂದೂಗಳು ಇದನ್ನೇ ಅನುಭವಿಸಲಿದ್ದಾರೆ’ ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರ ಜತೆಯಲ್ಲಿ ಜೈನ ಸಂತರೊಬ್ಬರು ಆಸ್ಪತ್ರೆಯಲ್ಲಿ ಕುಳಿತಿರುವ ಚಿತ್ರವನ್ನೂ ಹಂಚಿಕೊಳ್ಳಲಾಗಿದೆ. ಆದರೆ, ಇದು ತಿರುಚಲಾದ ಮಾಹಿತಿ ಮತ್ತು ಸುಳ್ಳು ಸುದ್ದಿ.

ಈ ಪೋಸ್ಟ್‌ಗಳ ಬಗ್ಗೆ ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ಈ ಪೋಸ್ಟ್‌ನಲ್ಲಿ ಹಂಚಿಕೊಳ್ಳಲಾಗಿರುವ ಚಿತ್ರವು ಈಚಿನದ್ದಲ್ಲ. ರಿವರ್ಸ್ ಇಮೇಜ್ ಸರ್ಚ್‌ನಲ್ಲಿ ಹುಡುಕಿದಾಗ, ಅದು 2017ರಲ್ಲಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಲಾಗಿದ್ದ ಚಿತ್ರ ಎಂಬುದು ಗೊತ್ತಾಯಿತು. ಆಗಲೂ ಮುಸ್ಲಿಮರು ಜೈನ ಸಂತರೊಬ್ಬರ ಮೇಲೆ ನಡೆಸಿದ ದಾಳಿ ಎಂದು ಸುಳ್ಳು ಸುದ್ದಿ ಹರಡಲಾಗಿತ್ತು. ಆದರೆ, ಜೈನ ಸಂತರು ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದರು. ಈಗ ಅದೇ ಸುಳ್ಳು ಸುದ್ದಿಯನ್ನು ಮತ್ತೆ ಹಂಚಿಕೊಳ್ಳಲಾಗುತ್ತಿದೆ. ಮುಸ್ಲಿಮರು ಜೈನರ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಸುಳ್ಳು ಸುದ್ದಿಯನ್ನು ಪ್ರಚೋದನೆಗಾಗಿ ಬಳಸಿಕೊಳ್ಳಲಾಗುತ್ತಿದೆ’ ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಶಾಶ್ವತತೆ - ನಶ್ವರತೆ

ಅಶ್ವತ್ಥವಿಲ್ಲಿ ಬಾಡಿದೊಡೇನು? ಚಿಗುರಲ್ಲಿ; |
ನಶ್ವರತೆ ವಿಟಪ ಪರ್ಣಂಗಳಲಿ ಮಾತ್ರ; ||
ಶಾಶ್ವತತೆ ರುಂಡಮೂಲದಲಿ; ಪರಿಚರಿಸದನು |
ವಿಶ್ವಪ್ರಗತಿಯಂತು- ಮಂಕುತಿಮ್ಮ || 886 ||

ಪದ-ಅರ್ಥ: ಅಶ್ವತ್ಥವಿಲ್ಲಿ = ಅಶ್ವತ್ಥವು + ಇಲ್ಲಿ, ಬಾಡಿದೊಡೇನು = ಬಾಡಿದೊಡೆ + ಏನು, ಚಿಗುರಲ್ಲಿ = ಚಿಗುರು + ಅಲ್ಲಿ, ವಿಟಪ = ಕೊಂಬೆ, ಪರ್ಣಂಗಳಲಿ = ಎಲೆಗಳಲ್ಲಿ, ರುಂಡಮೂಲದಲಿ = ಕಾಂಡ ಮತ್ತು ಬೇರುಗಳಲ್ಲಿ, ಪರಿಚರಿಸದನು = ಪರಿಚರಿಸು(ಕಾಪಾಡು, ಪೋಷಿಸು) + ಅದನು, ವಿಶ್ವಪ್ರಗತಿಯಂತು = ವಿಶ್ವಪ್ರಗತಿಯು + ಅಂತು.

ವಾಚ್ಯಾರ್ಥ: ಅಶ್ವತ್ಥವೃಕ್ಷ ಒಂದೆಡೆ ಬಾಡಿದರೇನು? ಮತ್ತೊಂದೆಡೆಗೆ ಚಿಗುರು ಮೊಳೆತಿದೆ. ಅದರ ಸಾವು ಕೇವಲ ಕೊಂಬೆ, ಎಲೆಗಳಲ್ಲಿ. ಆದರೆ ಅದರ ಶಾಶ್ವತತೆ ಇರುವುದು ಕಾಂಡ, ಬೇರುಗಳಲ್ಲಿ. ಅದನ್ನು ಉಪಚರಿಸು. ವಿಶ್ವಪ್ರಗತಿಯಾಗುವುದೇ ಹೀಗೆ.

ವಿವರಣೆ: ಭಾರತೀಯ ಅಧ್ಯಾತ್ಮ ಪರಂಪರೆಯಲ್ಲಿ ಅಶ್ವತ್ಥವೃಕ್ಷಕ್ಕೆ ಮಹತ್ವದ ಸ್ಥಾನವಿದೆ. ಅಶ್ವತ್ಥ ಎಂಬ ಹೆಸರೇ ಅರ್ಥಪೂರ್ಣವಾದದ್ದು. “ಶ್ವ:” ಎಂದರೆ ನಾಳೆ ಎಂದರ್ಥ. “ಶ್ವಸ್ಥ” ಎಂದರೆ ಇಂದು ಇದ್ದಂತೆಯೇ ನಾಳೆಯೂ ಇರುವುದು. “ಅಶ್ವತ್ಥ” ಎಂದರೆ ಇಂದಿರುವಂತೆ ನಾಳೆ ಇರಲಾರದ್ದು. ಪ್ರತಿಕ್ಷಣಕ್ಕೂ ಬದಲಾಯಿಸುವಂಥದ್ದು. ಅದರ ಚಂಚಲತೆ ಅಪೂರ್ವವಾದದ್ದು. ಜಗತ್ತು ಎಂದರೂ ಅದೇ ಅರ್ಥ. ಸದಾ ಚಲಿಸುತ್ತಿರುವುದು ಮತ್ತು ಪ್ರತಿಕ್ಷಣ ಬದಲಾಯಿಸುವಂಥದ್ದು. ಅದಕ್ಕೆ ಕಗ್ಗದಲ್ಲಿ ಬರುವ ಅಶ್ವತ್ಥ, ಈ ಪ್ರಪಂಚಕ್ಕೊಂದು ರೂಪಕ. ಅಶ್ವತ್ಥವೃಕ್ಷದಂತೆ ಈ ಜಗತ್ತು ಅತ್ಯಂತ ದೀರ್ಘಾಯುಸ್ಸು ಉಳ್ಳದ್ದು. ಅದು ಒಂದು ಕಡೆಗೆ ಒಣಗುತ್ತಿದ್ದರೆ ಮತ್ತೊಂದೆಡೆಗೆ ಚಿಗುರುತ್ತಿರುತ್ತದೆ.

ಪ್ರಪಂಚದ ಯಾವುದೋ ಮೂಲೆಯಲ್ಲೊಂದು ಅನಾಹುತವಾಗಿ ಸಾವಿರಾರು ಜನ ತೀರಿಹೋದ ಮತ್ತೊಂದೆಡೆಗೆ ಸಮಾಜ ಬೆಳೆಯುವ ಸುಲಕ್ಷಣ ಕಾಣುತ್ತದೆ. ಹೀಗೆ ಸಾವು, ಹುಟ್ಟುಗಳೆರಡೂ ಇದ್ದರೂ ಪ್ರಪಂಚಕ್ಕೇನೂ ಅಪಾಯವಿಲ್ಲ. ಅದು ಹಾಗೆಯೇ ಇರುತ್ತದೆ. ವೃಕ್ಷದ ಎಲೆಗಳು ಕಾಲಕ್ರಮದಲ್ಲಿ ಉದುರಿ ಹೋಗುತ್ತವೆ. ಮತ್ತೆ ವಸಂತಮಾಸ ಬಂತೋ, ಅದೆಲ್ಲಿಂದಲೋ ಚಿಗುರಿನ ರಾಶಿ ಸುರಿಯುತ್ತದೆ. ಕೊಂಬೆಗಳು ಒಣಗಿ ಹೋಗುತ್ತವೆ. ಮರ ಒಣಗಿಯೇ ಹೋಯಿತು ಎಂದು ಭಾಸವಾಗುತ್ತದೆ. ಆದರೆ ಮಾಸ ಬದಲಾದಾಗ ಅದರ ಚೈತನ್ಯ ಉಕ್ಕಿ ಬರುತ್ತದೆ. ಯಾಕೆಂದರೆ ಅದರ ಮೂಲಶಕ್ತಿ ಇದ್ದದ್ದು ಕಾಂಡದಲ್ಲಿ ಮತ್ತು ಬೇರಿನಲ್ಲಿ. ಈ ಕಗ್ಗದ ಮಾತು ಇದೇ. ಅಶ್ವತ್ಥ ಒಂದೆಡೆಗೆ ಬಾಡಿದರೆ ಮತ್ತೊಂದೆಡೆಗೆ ಚಿಗುರುತ್ತದೆ. ಅದರ ಸಾವಿರುವುದು ಕೊಂಬೆ, ಎಲೆಗಳಲ್ಲಿ ಮಾತ್ರ. ಆದರೆ ಶಾಶ್ವತತೆ ಇರುವುದು ಮೂಲ ಕಾಂಡ ಮತ್ತು ಬೇರುಗಳಲ್ಲಿ. ಈ ರೂಪಕವನ್ನು ಪ್ರಪಂಚಕ್ಕೆ ಅನ್ವಯಿಸಬೇಕು. ಪ್ರಪಂಚ ಎಂದಿಗೂ ಇರುವಂಥದ್ದು. ಆಗಾಗ ಕೆಲವು ಕಡೆಗೆ ನಾಶವಾದಂತೆ ತೋರುತ್ತದೆ. ಅನೇಕ ಬೃಹತ್ ಸಾಮ್ರಾಜ್ಯಗಳು, ವ್ಯವಸ್ಥೆಗಳು ಕಳೆದುಹೋಗಿವೆ. ಹೊಸ ಸಾಮ್ರಾಜ್ಯಗಳು, ರಾಷ್ಟ್ರಗಳು ಉದಯವಾಗಿವೆ. ಆದರೆ ಪ್ರಪಂಚದ ಬೇರು ಆದ ಪರಮಸತ್ಯ ಶಾಶ್ವತವಾಗಿದೆ. ಧರ್ಮವೆಂಬ ಕಾಂಡ ಶಾಶ್ವತತೆಯನ್ನು ಮುಂದುವರೆಸುತ್ತದೆ. ಹೀಗೆ ವಿಶ್ವಪ್ರಗತಿ, ಶಾಶ್ವತತೆ ಮತ್ತು ನಶ್ವರತೆಗಳಲ್ಲಿ ನಡೆಯುತ್ತಲೇ ಇರುತ್ತದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ದಶಿ ಗಂ. 21-44 ನಕ್ಷತ್ರ: ಅಶ್ವಿನಿ ಗಂ. 07-23, ಯೋಗ: ಸೌಭಾಗ್ಯ ಗಂ. 19-37, ಕರಣ: ವಿಷ್ಟಿ ಗಂ. 10-03, ವೃಷಭ ಮಾಸದ 03 ನೇ ದಿನ, ಮಳೆನಕ್ಷತ್ರ: ಕೃತ್ತಿಕ 2. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-08 ಸೂರ್ಯಾಸ್ತ : 06-46, ಮುಸ್ಲಿಂ ದಿನಾಂಕ : 27 ಶವ್ವಾಲ್, ದಿನ ವಿಶೇಷ : ಸಾವಿತ್ರಿ ಚತುರ್ದಶಿ, ಫಲಹಾರಿಣಿ ಕಾಳಿಕಾ ಪೂಜಾ, ಅಸೇಷನ್ ಹೋಲಿ-ಗುರುವಾರ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 7, 10

ಮೇಷ: ದಿನ ಮಾಡುವ ಕೆಲಸಗಳನ್ನೇ ಇಂದು ಅಧಿಕಾರಿಗಳ ಕಣ್ಣೆದುರಿಗೆ ಮಾಡಬೇಕಾದ ಸಂದರ್ಭ ಬಂದಾಗ ಗುಣಮಟ್ಟದ ಬದಲಾವಣೆ ಯಾಗುವುದು. ಇತರರ ಮನೆಯ ವಿಚಾರಗಳನ್ನು ಮಾತನಾಡಿ ವೈರತ್ವ ತಂದುಕೊಳ್ಳಬೇಡಿ.

ವೃಷಭ: ಇನ್ನೊಬ್ಬರಿಗೆ ಹೇಳಿಕೊಡುವ ಮುಂಚೆ ನಿಮ್ಮ ಜ್ಞಾನವು ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಿರಿ. ಸುಲಭವಾಗಿ ಕೆಲವೊಂದು ವಿಷಯಗಳಿಗೆ ನೀವು ಎಲ್ಲರಿಗೂ ಲಭ್ಯವಾಗುವುದು.

ಮಿಥುನ: ಈವರೆಗೆ ತುಂಬ ಮೃದುವಾಗಿ ಬದುಕನ್ನು ಸಾಗಿಸಿದವರಿಗೆ ಇನ್ನು ಕಳೆಯಬೇಕಾದ ಬದುಕು ಸ್ವಲ್ಪ ಕಷ್ಟಕರವೆಂದು ತೋರಬಹುದು. ಧರ್ಮಾಚರಣೆಯಲ್ಲಿ ಕುಂದುಕೊರತೆಗಳನ್ನು ಮಾಡುವುದು ಶ್ರೇಯಸ್ಕರವಾಗಿರುವುದಿಲ್ಲ.

ಕರ್ಕಾಟಕ: ಅಪ್ರಿಯ ಸತ್ಯ ಸ್ವೀಕರಿಸಲು ಅಸಾಧ್ಯವಾಗುವಂತಹ ಹಿರಿಯ ನಾಗರಿಕರ ಬಳಿ ಹೇಳದಿರುವುದು ಒಳ್ಳೆಯದೆಂದು ಯೋಚಿಸುವಿರಿ. ಅತಿಯಾದ ಪುತ್ರವ್ಯಾಮೋಹವು ಇಂದು ನಿಮ್ಮನ್ನು ತಪ್ಪು ಹೆಜ್ಜೆ ಇಡುವಂತೆ ಮಾಡಬಹುದು.

ಸಿಂಹ: ಉತ್ತಮ ವಿಷಯಗಳನ್ನು ಯಾರು ಹೇಳಿದರೂ ಜೀವನದಲ್ಲಿ ಅಳವಡಿಸಿಕೊಳ್ಳಲು ಮತ್ತೊಮ್ಮೆ ಯೋಚಿಸಲು ಹೋಗದಿರಿ. ಮುಗಿದ ಸಮಾರಂಭದ ಉಳಿದ ಕೆಲಸಗಳು ಮಾಡಿದಷ್ಟೂ ಇದ್ದಂತೆ ಭಾಸವಾಗುತ್ತದೆ.

ಕನ್ಯಾ: ಅನುಪಯುಕ್ತ ವಸ್ತುಗಳನ್ನು ಮನೆಯಿಂದ ಹೊರ ಹಾಕದ ಹೊರತು ಮನೆ ಚೊಕ್ಕಗೊಳಿಸಲು ಸಾಧ್ಯವಾಗುವುದಿಲ್ಲ. ಮನೆಯಲ್ಲಿರುವ ಸಣ್ಣ ಮಕ್ಕಳ ಕೆಲವು ಮಾತುಗಳು ಶಿರೋವೇದನೆಗೆ ಕಾರಣವಾಗುವುದು.

ತುಲಾ: ಸಿಕ್ಕಿರುವ ಹೊಸ ವೃತ್ತಿಯ ಅಧಿಕಾರಿಗಳು ನಿಮಗೆ ಆಹ್ವಾನ ಮಾಡುವ ದಿನಗಣನೆ ಶುರುಮಾಡುವಿರಿ. ತಂದೆ ತಾಯಿಯರನ್ನು ಅತ್ಯಂತ ಸಂತೋಷ ಪಡಿಸುವಂತಹ ಕ್ಷಣವನ್ನು ನೀವು ನೀಡಿರುವುದು ಹೆಮ್ಮೆ ಎಂದೆನಿಸುವುದು.

ವೃಶ್ಚಿಕ: ವ್ಯಸನಕ್ಕೆ ತುತ್ತಾಗಿರುವುದರಿಂದ ತೊಂದರೆ ಅನುಭವಿಸ ಬೇಕಾದೀತು. ಇಲ್ಲ ಸಲ್ಲದ ಕಾರಣಗಳನ್ನು ಕೊಟ್ಟು ನಿಮ್ಮ ಸಹೋದ್ಯೋಗಿಗಳು ಕೆಲಸವನ್ನು ಮುಂದೆ ಹಾಕುತ್ತಿರುವುದು ನಿಮಗೆ ಗೊಂದಲ ಸೃಷ್ಟಿಸುತ್ತದೆ.

ಧನು: ಅಪರೂಪದ ಅಳಿವಿನಂಚಿನಲ್ಲಿರುವ ನೀವು ಕಲಿತ ವಿದ್ಯೆಯ ಬಗ್ಗೆ ಸಂದರ್ಶನ ಕೊಡುವಂತೆ ಪತ್ರಿಕೆ ಅಥವಾ ದೂರದರ್ಶನ ಮಾಧ್ಯಮದವರು ಬರುವರು. ಮನೆಯಲ್ಲಿನ ಗೋಸಂಪತ್ತಿನಲ್ಲಿ ತೊಂದರೆ ಉಂಟಾಗಬಹುದು.

ಮಕರ: ವೃತ್ತಿಗೆ ನೀವು ನೀಡುವಷ್ಟೇ ಪ್ರಾಶಸ್ತ್ಯವನ್ನು ಸಾಂಸಾರಿಕ ಜೀವನಕ್ಕೂ ನೀಡುವುದರಿಂದ ಹಲವು ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಿರಿ. ಮಕ್ಕಳ ಪ್ರತಿ ಹೆಜ್ಜೆಯ ಮೇಲೂ ಸಹ ಎಚ್ಚರಿಕೆಯ ಕಣ್ಣನ್ನು ಇಟ್ಟಿರಲೇಬೇಕಾಗುತ್ತದೆ.

ಕುಂಭ: ನಿವೃತ್ತ ಜೀವನವನ್ನು ಮೊಮ್ಮಕ್ಕಳ ಜೊತೆ ಸಂತೋಷದಿಂದ ಕಳೆಯುವ ನಿಮ್ಮ ಕನಸು ಅಕ್ಷರಶಃ ಸತ್ಯವಾಗುತ್ತದೆ. ದಾಂಪತ್ಯ ಜೀವನದಲ್ಲಿ ಕೆಲವು ಮಾತುಗಳು ಕಿವಿಯ ಮೇಲೆ ಬಿದ್ದರೂ ನಿರ್ಲಕ್ಷಿಸುವುದು ಒಳ್ಳೆಯದು.

ಮೀನ: ಎಲ್ಲಾ ಕಾರ್ಯಗಳು ಅಂದುಕೊಂಡ ರೀತಿಯಲ್ಲೇ ಆಗಲು ಸಾಧ್ಯವಾಗದಿರಬಹುದು. ಭೂಮಿಯಿಂದ ಉನ್ನತ ಸ್ಥಾನದಲ್ಲಿ ಕೆಲಸ ಮಾಡುವವರು ಯಾವುದೇ ಕಾರಣಕ್ಕೂ ರಕ್ಷಾಕವಚವನ್ನು ಮರೆಯದಿರಿ.

ಪದಬಂಧ 5322
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಂದೆಯ ತಂದೆ (4)
3.ನಗುವಿನಿಂದ ಕೂಡಿದ ಮುಖ (4)
5.ದುರಸ್ತಿಯನ್ನು ಹೀಗೆನ್ನಿ (3)
6.ವತ್ಸ ನಡುವಿರುವ ವರ್ಷ (4)
7.ಯತಿಗೆ ದೊರೆತಿರುವ ಸೋಡಿ (4)
9.ಈ ತರ ಬಂದಿರುವ ಏರ್ಪಾಟು (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13.ಕೈಯನ್ನು ಕೊನೆಗಿಟ್ಟಿರುವ ಆಳು (3)
14.ಜರಿ ಸೀರೆಯಲ್ಲಿರುವ ಬೆಲೆಯುಳ್ಳ ಮಣಿ (4)
15.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
2.ಓಡುತ್ತಾಹೋಗಿ ಸುದ್ದಿ ಮುಟ್ಟಿಸುವವನು (4)
3.ಮೂರು ಮೈಲುಗಳ ಒಂದು ಅಳತೆ (4)
4.ಆಕಾಶದಲ್ಲಿ ಸಂಚರಿಸುವಂಥದ್ದು (2)
6.ಸಂತನಲ್ಲಿರುವ ಗುರುತು (3)
8.ಇಲ್ಲಿ ಅಂಧಕಾರ ಕವಿದಿದೆ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಗಂಡು ಕೋಳಿಯಿದು (2)



5321ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಲ್ಮೀಕ 3.ಸಮೀಕ್ಷೆ
4.ಗಡಾರಿ 5.ಅಳು
6.ಕರಗ 8.ವಿಷಾದ
9.ಮಾತುಲ 11.ನಗರು
4.ದಿಟ 15.ಹಮಾಲ
16.ಬಯಲು 17.ನಕ್ಷತ್ರ

ಮೇಲಿಂದ ಕೆಳಕ್ಕೆ:
2.ಕರುಳು 3.ಸರಿಗೆ
4.ಗಟಾರ 5.ಅಡವಿ
6.ಕದನ 7.ಗಮಾರ
10.ಲಲಾಟ 12.ಗದ್ದಲ
13.ಮಹಲು 14.ದಿವಾನ

ಸುಡೊಕು 5708

5			8		1	9		2
							3	
3		1	2		9		5	6
	1	7			8	3		
				2				4
8		3	9				6	
1			7		2	4		3
		8		4			1	
	3		1		5		7	

5707ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2024ರಲ್ಲಿ ಭಾರತದ ಬೆಳವಣಿಗೆ ಶೇ 6.7ರಷ್ಟು: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ದೇಶಿ ಬೇಡಿಕೆಯು ಉತ್ತಮವಾಗಿ ಇರುವುದರಿಂದ ಭಾರತದ ಆರ್ಥಿಕತೆಯು 2024ನೇ ಕ್ಯಾಲೆಂಡರ್ ವರ್ಷದಲ್ಲಿ ಶೇ 6.7ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ವಿಶ್ವಸಂಸ್ಥೆಯು ತಿಳಿಸಿದೆ.

ದಕ್ಷಿಣ ಏಷ್ಯಾ ಪ್ರದೇಶದಲ್ಲಿ ದೊಡ್ಡ ಆರ್ಥಿಕತೆ ಆಗಿರುವ ಭಾರತವು 2023ರ ಕ್ಯಾಲೆಂಡರ್ ವರ್ಷದಲ್ಲಿ ಶೇ 5.8ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಮಾಡಲಾಗಿದೆ. ಆದರೆ ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಬಾಹ್ಯ ಬೇಡಿಕೆಯು ದುರ್ಬಲ ಆಗಿರುವುದರಿಂದಾಗಿ ಈ ವರ್ಷದಲ್ಲಿ ಹೂಡಿಕೆ ಮತ್ತು ರಫ್ತು ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಜಾಗತಿಕ ಮಟ್ಟದಲ್ಲಿ ಸರಕುಗಳ ದರ ಇಳಿಕೆ ಆಗಿರುವುದು ಹಾಗೂ ರೂಪಾಯಿ ಮೌಲ್ಯ ಇಳಿಕೆ ಆಗಿರುವುದರಿಂದ ಆಮದಾದ ವಸ್ತುಗಳ ದರವು ಕಡಿಮೆ ಆಗಲಿದೆ. ಹೀಗಾಗಿ 2023ರಲ್ಲಿ ಹಣದುಬ್ಬರವು ಶೇ 5.5ಕ್ಕೆ ಇಳಿಕೆ ಕಾಣುವ ನಿರೀಕ್ಷೆ ಇದೆ. 2023ರ ಜನವರಿಯಲ್ಲಿ ಬಿಡುಗಡೆ ಮಾಡಿದ್ದ ವರದಿಯಲ್ಲಿಯೂ ಭಾರತವು 2023ರಲ್ಲಿ ಶೇ 5.8ರಷ್ಟು ಬೆಳವಣಿಗೆ ಕಾಣುವ ಅಂದಾಜನ್ನು ಮಾಡಲಾಗಿತ್ತು.

ಚಿನ್ನ ₹500 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರವು 10 ಗ್ರಾಂಗೆ ₹500ರಷ್ಟು ಇಳಿಕೆ ಕಂಡು ₹60,580ರಂತೆ ಮಾರಾಟವಾಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹450ರಷ್ಟು ಕಡಿಮೆ ಆಗಿದ್ದು ₹73,300ಕ್ಕೆ ತಲುಪಿತು.

ಎರಡನೇ ದಿನವೂ ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಐ.ಟಿ. ಮತ್ತು ತಂತ್ರಜ್ಞಾನ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸೂಚ್ಯಂಕಗಳು ಇಳಿಕೆ ಕಂಡವು. ಇದರಿಂದಾಗಿ ಸತತ ಎರಡನೇ ದಿನವೂ ವಹಿವಾಟು ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 371 ಅಂಶ ಇಳಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 105 ಅಂಶ ಇಳಿಕೆ ಕಂಡಿತು.

ಜಾಗತಿಕ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದ್ದರಿಂದ ದೇಶದಲ್ಲಿ ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸಿದರು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ವಲಯವಾರು ರಿಯಾಲ್ಟಿ ಶೇ 1.29, ತಂತ್ರಜ್ಞಾನ ಶೇ 0.89, ಐ.ಟಿ. ಶೇ 0.79ರಷ್ಟು ಇಳಿಕೆ ಕಂಡಿತು. ಎಫ್‌ಎಂಸಿಜಿ, ಕೈಗಾರಿಕೆಗಳು, ವಾಹನ ಮತ್ತು ಸೇವೆಗಳ ವಲಯಗಳು ಗಳಿಕೆ ಕಂಡವು

ಬ್ರೆಂಟ್ ತೈಲ ದರ ಶೇ 0.12ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 74.82 ಡಾಲರ್‌ಗೆ ತಲುಪಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,286
ಇಂದಿನ ಅಂತ್ಯ	18,181
▼	105
ದಿನದ ಕನಿಷ್ಠ	18,115

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1645(1650)
ಸೋಯಾ (ರಿಫೈನ್ಡ್)	₹925(950)
ಸೂರ್ಯಕಾಂತಿ (ರಿಫೈನ್ಡ್)	₹955(960)
ಪಾಮೋಲಿನ್	₹902(920)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹151
ಗುಡ್ ಲಾಟ್	₹133

ದೇಶಿ ಷೇರುಗಳಲ್ಲಿ ಶೇ 11ರಷ್ಟು ತಗ್ಗಿದ ಎಫ್‌ಪಿಐ ಹೂಡಿಕೆ

ಎಫ್‌ಪಿಐ ಹೊರಹರಿವು

₹1.4 ಲಕ್ಷ ಕೋಟಿ 2021-22ರಲ್ಲಿ

₹37,632 ಕೋಟಿ 2022-23ರಲ್ಲಿ

ನವದೆಹಲಿ (ಪಿಟಿಐ): ಭಾರತದ ಷೇರುಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ (ಎಫ್‌ಪಿಐ) ಪ್ರಮಾಣವು 2023ರ ಮಾರ್ಚ್ ತ್ರೈಮಾಸಿಕದಲ್ಲಿ ಶೇ 11ರಷ್ಟು ಇಳಿಕೆ ಆಗಿ ₹44.65 ಲಕ್ಷ ಕೋಟಿಗೆ ತಲುಪಿದೆ ಎಂದು ಮಾರ್ನಿಂಗ್‌ಸ್ಟಾರ್ ವರದಿ ಹೇಳಿದೆ.

2022ರ ಮಾರ್ಚ್ ತ್ರೈಮಾಸಿಕದಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು ಭಾರತದ ಷೇರುಗಳಲ್ಲಿ ₹50.43 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿದ್ದರು.

ಹೂಡಿಕೆಯಲ್ಲಿ ಇಳಿಕೆ ಆಗಿರುವುದರಿಂದ ಭಾರತದ ಷೇರು ಮಾರುಕಟ್ಟೆಯ ಬಂಡವಾಳ ಮೌಲ್ಯದಲ್ಲಿ ಎಫ್‌ಪಿಐ ಕೊಡುಗೆಯು ಶೇ 17.8 ರಿಂದ ಶೇ 17.3ಕ್ಕೆ ಇಳಿಕೆ ಆಗಿದೆ.

ವಿದೇಶಿ ಹೂಡಿಕೆದಾರರು 2021-22ರಲ್ಲಿ ಭಾರತದ ಷೇರುಪೇಟೆಗಳಿಂದ ದಾಖಲೆ ಪ್ರಮಾಣದಲ್ಲಿ ಬಂಡವಾಳ ಹಿಂದಕ್ಕೆ ಪಡೆದಿದ್ದರು. ಭಾರತದ ಕೇಂದ್ರೀಯ ಬ್ಯಾಂಕ್ ಬಡ್ಡಿದರವನ್ನು ಹೆಚ್ಚಳ ಮಾಡಿದ್ದರಿಂದಾಗಿ 2022–23ರಲ್ಲಿಯೂ ಮಾರಾಟಕ್ಕೆ ಹೆಚ್ಚು ಗಮನ ನೀಡಿದರು. ₹37,631 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಜಾಗತಿಕ ಮಟ್ಟದಲ್ಲಿ ಹಣದುಬ್ಬರ, ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳ, ರಷ್ಯಾ–ಉಕ್ರೇನ್ ಸಮರದಿಂದಾಗಿ 2022–23ರಲ್ಲಿ ಭಾರತದಿಂದ ಬಂಡವಾಳ ಹೊರಹರಿವು ಆಗಿದೆ.

ವಿದೇಶಿ ಹೂಡಿಕೆದಾರರು ಭಾರತದಲ್ಲಿ 1993ರಿಂದ ಬಂಡವಾಳ ತೊಡಗಿಸಲು ಆರಂಭಿಸಿದ್ದು, ಸತತ ಎರಡು ತ್ರೈಮಾಸಿಕಗಳಲ್ಲಿ ಬಂಡವಾಳ ಹಿಂದಕ್ಕೆ ಪಡೆದಿರುವುದು ಇದೇ ಮೊದಲು.

ಭಾರತದ ಷೇರುಪೇಟೆಯ ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇದ್ದಿದ್ದು ಸಹ ಬಂಡವಾಳ ಹೊರಹರಿವಿಗೆ ಒಂದು ಪ್ರಮುಖ ಕಾರಣವಾಗಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ನೈಟ್ ಫ್ರ್ಯಾಂಕ್ ಇಂಡಿಯಾದ ವರದಿ

ಅತಿ ಶ್ರೀಮಂತರ ಸಂಖ್ಯೆ ಶೇ 7.5ರಷ್ಟು ಇಳಿಕೆ

ನವದೆಹಲಿ (ಪಿಟಿಐ): ₹ 247 ಕೋಟಿಗಿಂತ ಹೆಚ್ಚು ಮೌಲ್ಯದ ಆಸ್ತಿ ಹೊಂದಿರುವ ಅತಿಶ್ರೀಮಂತ ವ್ಯಕ್ತಿಗಳ ಸಂಖ್ಯೆಯು 2022ರಲ್ಲಿ ದೇಶದಲ್ಲಿ ಶೇಕಡ 7.5ರಷ್ಟು ಹೆಚ್ಚಾಗಿದೆ ಎಂದು ನೈಟ್ ಫ್ರ್ಯಾಂಕ್ ವರದಿ ಹೇಳಿದೆ

ಅತಿಶ್ರೀಮಂತರ ಸಂಖ್ಯೆಯು 2021ರಲ್ಲಿ 13,637 ಇತ್ತು. 2022ರಲ್ಲಿ 12,069ಕ್ಕೆ ಇಳಿಕೆ ಕಂಡಿದೆ. 2027ರ ವೇಳೆಗೆ ಇವರ ಸಂಖ್ಯೆಯು 19,119ಕ್ಕೆ ಏರಿಕೆ ಕಾಣುವ ಅಂದಾಜು ಮಾಡಲಾಗಿದೆ.

ಭಾರತದಲ್ಲಿ ಬಿಲಿಯನೇರ್‌ಗಳ (₹ 7,570 ಕೋಟಿಗಿಂತ ಹೆಚ್ಚು ಸಂಪತ್ತು ಹೊಂದಿರುವವರು) ಸಂಖ್ಯೆಯು 2021ರಲ್ಲಿ 145 ಇದ್ದಿದ್ದು 2022ರಲ್ಲಿ 161ಕ್ಕೆ ಏರಿಕೆ ಆಗಿದೆ. 2027ರ ವೇಳೆಗೆ 195ಕ್ಕೆ ಏರಿಕೆ ಆಗುವ ಅಂದಾಜು ಮಾಡಿರುವುದಾಗಿ ಸಂಸ್ಥೆಯು ಬುಧವಾರ ಬಿಡುಗಡೆ ಮಾಡಿರುವ 'ದಿ ವೆಲ್ತ್ ರಿಪೋರ್ಟ್ 2023'ರಲ್ಲಿ ಹೇಳಿದೆ.

2022ರಲ್ಲಿ ಜಾಗತಿಕ ಮಟ್ಟದಲ್ಲಿ ಅತಿಶ್ರೀಮಂತರ ಸಂಖ್ಯೆಯು ಶೇ 3.8ರಷ್ಟು ಇಳಿಕೆ ಕಂಡಿದೆ. ಮಂದಗತಿಯ ಆರ್ಥಿಕ ಬೆಳವಣಿಗೆ, ಬಡ್ಡಿದರ ಹೆಚ್ಚುತ್ತಿರುವುದು ಹಾಗೂ ಜಾಗತಿಕ ರಾಜಕೀಯ ಬಿಕ್ಕಟ್ಟಿನ ಕಾರಣಗಳಿಂದಾಗಿ ಅತಿಶ್ರೀಮಂತರ ಸಂಖ್ಯೆಯಲ್ಲಿ ಇಳಿಕೆ ಆಗಿದೆ. 2021ರಲ್ಲಿ ಶೇ 9.3ರಷ್ಟು ದಾಖಲೆಯ ಏರಿಕೆ ಕಂಡಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತದಲ್ಲಿ ಸಿರಿವಂತರ ಸಂಖ್ಯೆಯು (₹8 ಕೋಟಿಗೂ ಹೆಚ್ಚು ಸಂಪತ್ತು ಹೊಂದಿರುವವರು) 7.63 ಲಕ್ಷದಿಂದ 7.97 ಲಕ್ಷಕ್ಕೆ ಏರಿಕೆ ಆಗಿದೆ.

ಭಾರತದಲ್ಲಿ ಜಾಗತಿಕ ಮಾರುಕಟ್ಟೆಗಾಗಿ ತಯಾರಿಕೆ, ಮೂಲಸೌಕರ್ಯ ಅಭಿವೃದ್ಧಿ, ತಂತ್ರಜ್ಞಾನಕ್ಕೆ ಸಂಬಂಧಿಸಿದ ನವೋದ್ಯಮಗಳು ಇತ್ಯಾದಿ ವಲಯಗಳಿಂದ ಹೊಸ ಅವಕಾಶಗಳು ಲಭ್ಯವಾಗುತ್ತಿವೆ. ಇದು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲಿದ್ದು, ದೇಶದಲ್ಲಿ ಸಂಪತ್ತು ಸೃಷ್ಟಿಗೆ ನೆರವಾಗಲಿದೆ. ಆ ಮೂಲಕ ದೇಶದಲ್ಲಿ ಶ್ರೀಮಂತರ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾದ ಅಧ್ಯಕ್ಷ ಶಿಶಿರ್ ಬೈಜಲ್ ಹೇಳಿದ್ದಾರೆ.

ಮುಖ್ಯಾಂಶಗಳು

- ಅಮೆರಿಕದ ಡಾಲರ್ ಮೌಲ್ಯ ವೃದ್ಧಿ
- ಗರಿಷ್ಠ ಮಟ್ಟದಲ್ಲಿ ಬಡ್ಡಿದರ

ಮುಂಬೈ ಧಾರಣೆ

ಶೇಂಗಾ

17–5–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650(1660)
ಒಂದು ವಾರದ ಡೆಲಿವರಿ	1645(1655)
ಸೋಯಾ ಕಚ್ಚಾ	860(875)
ಪಾಮ್ ವಾರದ ಡೆಲಿವರಿ	900(918)
ಸೂರ್ಯಕಾಂತಿ ಎಣ್ಣೆ ಕಚ್ಚಾ	870(880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60450(60700)
ಬೆಳ್ಳಿ ಕೆ.ಜಿ
71900(71500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	- 470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29169-32599
ಕೋಕ	20169-30599
ಫ್ಯಾಕ್ಟರಿ	14019-23699
ಹಳೆಚಾಲಿ	36099-39739
ಹೊಸಚಾಲಿ	36000-39000
ಶಿವಮೊಗ್ಗ	
ಬೆಟ್ಟೆ	48599-53219
ಗೊರಬಲು	19500-35008
ರಾಶಿ	34699-48119
ಸರಕು	586189-81400
ಸಿದ್ದಾಪುರ	
ಬಿಳಿಗೋಟು	28100-32299
ಚಾಲಿ	35689-37499
ಕೋಕ	26599-32777
ಕೆಂಪುಗೋಟು	28019-33299
ರಾಶಿ	42699-46099
ತಟ್ಟಿಬೆಟ್ಟೆ	34889-34889
ಶಿರಸಿ	
ಬೆಟ್ಟೆ	36599-44501
ಬಿಳಿಗೋಟು	24199-32699
ಚಾಲಿ	35000-38601
ಕೆಂಪುಗೋಟು	28139-33999
ರಾಶಿ	40299-46699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15300	15300	186.80 ಸೆಂಟ್ಸ್
ಎಸಿ	7980	7700	7700	
ಆರ್‌ಪಿ	10400	10600	10550	ಲಂಡನ್
ಆರ್‌ಸಿ	5890	5600	5750	ಡಾಲರ್ಸ್ 2511

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

21.5.2023ರಿಂದ 4 ದಿನ ಶಿರಡಿ, ಪಂಡರಾಪುರ,ಕೂಡಲಸಂಗಮ, ಕೊಲ್ಲಾಪುರ, ಶನಿಸಿಂಗಾಪುರ. 20.6.2023ರಿಂದ 10 ದಿನ ಬಾಂಬೆ,ಶಿರಡಿ, ಗೋವಾ,ಗೋಕರ್ಣ, ಕೊಲ್ಲಾಪುರ,ತ್ರೈಬುಕೇಶ್ವರ, ಕೂಡಲಸಂಗಮ,ಪಂಡರಾಪುರ. 6.7.2023ರಿಂದ 10 ದಿನ ವಿಮಾನದಲ್ಲಿ ಇಬ್ಬರಿಗೆ 1 ರೂಮ್ ವೈಷ್ಣೋದೇವಿ, ಕುಲುಮನಾಲಿ,ಶಿಮ್ಲಾ, ವಾಗಬಾರ್ಡರ್, ದೆಹಲಿ,ಅಮೃತಸರ್. ಶ್ರೀಗುರುರಾಜ ಟ್ರಾವಲ್ಸ್, ಕೋಲಾರ್. 9900124333, 9611082432, 8123099913

1.6.2023 ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಅಯೋಧ್ಯಾ,ಕಾಶಿ, 11.6.2023ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ,ನೈಮೀಶರಣ್ಯ, ಅಯೋಧ್ಯಾ, ಕಾಶಿ,ಗಯಾ 29.6.2023 ಅಮರ್‌ನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9482435755, 9845035349

★ಶ್ರೇಯಸ್ ಟೂರ್ಸ್★ 15.06.2023 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ (ಅಮರಕಂಠಕ,ಮಯ್ಯಾರ್ ಸಹಿತ).20.06.2023 8ದಿನಗಳು ಕಾಶಿ ನೈಮಿಷಾರಣ್ಯ ಪ್ರಯಾಗ,ಗಯಾ,ಅಯೋಧ್ಯೆ ಇತರೆ.,10.07.2023 12ದಿನಗಳು ಅಮರನಾಥಯಾತ್ರಾ ಲೇ,ಲಡಾಖ್.,23.07.2023 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.20.06.2023 11ದಿನಗಳು ಚಂಡೀಗಡ್ ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ,ದೆಹಲಿ. 8073824856, 6366322639, 9206979202

ಸಾರ್ವಜನಿಕ ಪ್ರಕಟಣೆ

ಉದ್ಯೋಗಾವಕಾಶ

Walk-in

PRUMATECH
Prumatech Services Private Limited
Require URGENTLY for Sugar,Cogen& Distillery Plant in Karnataka & Maharashtra
1.Engineer/Sr.Engineer Mechanical/ Electrical/Instrumentation BE -DEE with min 10-12 yrs. Exp in Sugar/Cogen/Power
2.Shift Engineer/DCS Operator/ DME/BE 3-8 yrs Exp Sugar/ Power/ Incineration Boiler
3.Chemist/ Sr. Chemist for Lab.Analysis /WTP /ETP operations B.Sc. Chemistry with ANSI/AVSI 8-10 yrs Exp in Sugar Process/ Quality Control/ ETP/ WTP
4.Boiler Attender ITI Boiler I Class 5 yrs in Boiler Operations
5.Fireman ITI Boiler II Class 5yrs Exp in Boiler Operations
6.Distillation Plant Operator ITI/PUC min 5 yrs Exp
7.Diffuser Operator ITI min 5 yrs Exp
8.Distillery Fitter ITI min 8 yrs Exp
9.Electrician ITI with Licence, 5 - 8 yrs Exp
10.Instrument Technician ITI/Diploma 5-8 yrs Exp.
11.Milling/Dryer Operator ITI min 5 yrs Exp.
Walk in with Bio-Data on 21st May 2023 between 10am & 5pm
Hotel Kailash Inn. Opp. Kerudi Cancer Hospital. Nr Rotory Circle, Bagalkot
Hotel Dhammanagi Comfort,Hubli Opp. Old Bus Stand, Hubli
73387 24730/ 8939 975295
visit : www.prumatech.com
Mail: careers@prumatech.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ.ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

General

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ನಾರ್ತ್ ಇಂಡಿಯನ್ ಕುಕ್‌ಗಳು ಮತ್ತು ಸಪ್ಲೈಯರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ.ಸಂಪರ್ಕಿಸಿ: 8892491613, 9739013813

Wanted

ಬೇಕಾಗಿದ್ದಾರೆ: ಅಡಿಕೆ, ಕಾಫಿ ತೋಟದಲ್ಲಿ ಕೆಲಸಮಾಡಲು ನುರಿತ ಕೆಲಸಗಾರರು ಫ್ಯಾಮಿಲಿ ಬೇಕಾಗಿದ್ದಾರೆ. ಸ್ಥಳ: ಮೂಡಿಗೆರೆ ತಾಲ್ಲೂಕು, ಉಚಿತ ವಸತಿ ವ್ಯವಸ್ಥೆಯಿದೆ. 9343342120

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
9886213331 : 9901641752
9845114560 : 9731810277
080 - 45557163 / 164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಾಳೆಯಿಂದ 3 ರಾಷ್ಟ್ರಗಳಿಗೆ ಪ್ರಧಾನಿ ಮೋದಿ ಪ್ರವಾಸ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಸ್ಟ್ರೇಲಿಯಾ, ಜಪಾನ್ ಹಾಗೂ ಪಪುವಾ ನ್ಯೂಗಿನಿ ಪ್ರವಾಸವನ್ನು ವಿದೇಶಾಂಗ ಸಚಿವಾಲಯ (ಎಂಇಎ) ಬುಧವಾರ ಖಚಿತಪಡಿಸಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ತಮ್ಮ ಆಸ್ಟ್ರೇಲಿಯಾ ಭೇಟಿ ಮುಂದೂಡಿದ ಕಾರಣ, ಮೇ 24ರಂದು ಸಿಡ್ನಿಯಲ್ಲಿ ನಡೆಯಬೇಕಿದ್ದ ಕ್ವಾಡ್ ನಾಯಕರ ಸಭೆಯನ್ನು ಆಸ್ಟ್ರೇಲಿಯಾ ಪ್ರಧಾನಿ ಅಂಥೋನಿ ಅಲ್ಬನೀಸ್ ರದ್ದುಗೊಳಿಸಿದರು.

ಕ್ವಾಡ್ ನಾಯಕರ ಶೃಂಗಸಭೆ ಹೊರತುಪಡಿಸಿ ಆಸ್ಟ್ರೇಲಿಯಾದಲ್ಲಿ ನರೇಂದ್ರ ಮೋದಿ ಅವರ ಕಾರ್ಯಕ್ರಮಗಳು ಬದಲಾಗುವುದಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಜಪಾನ್‌ನ ಹಿರೋಶಿಮಾದಲ್ಲಿ ಮೇ 19 ರಿಂದ 21ರ ವರೆಗೆ ನಡೆಯಲಿರುವ ಜಿ7 ರಾಷ್ಟ್ರಗಳ ಶೃಂಗಸಭೆಯಲ್ಲಿ ಮೋದಿ ಭಾಗಿಯಾಗಲಿದ್ದಾರೆ. ನಂತರ ಜಪಾನ್‌ನಿಂದ ಪಪುವಾ ನ್ಯೂಗಿನಿಗೆ ಪ್ರಯಾಣಿಸಲಿದ್ದು, ಅಲ್ಲಿ ಪ್ರಧಾನಿ ಜೇಮ್ಸ್ ಅವರೊಂದಿಗೆ ಜಂಟಿಯಾಗಿ ಭಾರತ–ಪೆಸಿಫಿಕ್ ದ್ವೀಪಗಳ ಸಹಕಾರ ವೇದಿಕೆಯ (ಎಫ್‌ಐಪಿಐಸಿ) ಮೂರನೇಶೃಂಗಸಭೆಯಲ್ಲಿಭಾಗವಹಿಸಲಿದ್ದಾರೆ.

22 ರಿಂದ 24 ರವರೆಗೆ ಆಸ್ಟ್ರೇಲಿಯಾದ ಸಿಡ್ನಿಗೆ ಭೇಟಿ ನೀಡಲಿದ್ದಾರೆ. ದ್ವಿಪಕ್ಷೀಯ ಸಂಬಂಧ ಬಲವರ್ಧನೆ ಕುರಿತು ಆಸ್ಟ್ರೇಲಿಯಾ ಪ್ರಧಾನಿ ಅಂಥೋನಿ ಅಲ್ಬನೀಸ್ ಜತೆ ಚರ್ಚೆ ನಡೆಸುವರು. ಪ್ರವಾಸ ವೇಳೆ ಉದ್ಯಮಿಗಳು ಮತ್ತು ಸಿಇಒಗಳ ಜತೆಯೂ ಮೋದಿ ಸಂವಾದ ನಡೆಸಲಿದ್ದಾರೆ ಎಂದು ಎಂಇಎ ತಿಳಿಸಿದೆ.

27ನೇ ಬಾರಿಗೆ ಎವರೆಸ್ಟ್ ಏರಿದ ಕಮಿ ರೀಟಾ

ಕಠ್ಮಂಡು (ಪಿಟಿಐ):ಪ್ರಸಿದ್ಧ ಪರ್ವತಾರೋಹಿ ಕಮಿ ರೀಟಾ ಶೆರ್ಪಾ ಅವರು 27ನೇ ಬಾರಿಗೆ ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಏರುವ ಮೂಲಕ ಹಿಂದಿನ ತಮ್ಮದೇ ದಾಖಲೆಯನ್ನು ಸರಿಗಟ್ಟಿ ಹೊಸ ದಾಖಲೆ ನಿರ್ಮಿಸಿದ್ದಾರೆ.

ಕಮಿ ರೀಟಾ

ರೀಟಾ ಅವರು ಬುಧವಾರ ಪರ್ವತದ ತುತ್ತತುದಿ 8,848.86 ಮೀಟರ್ ಎತ್ತರಕ್ಕೆ ತಲುಪಿದರು ಎಂದು ನೇಪಾಳ ಪ್ರವಾಸೋದ್ಯಮ ಇಲಾಖೆ ತಿಳಿಸಿದೆ.

ರೀಟಾ ಅವರು 1994 ಮೇ 13ರಂದು ಮೊದಲ ಬಾರಿಗೆ ಎವರೆಸ್ಟ್ ಏರಿದ್ದರು. 2022ರಲ್ಲಿ 26ನೇ ಬಾರಿಗೆ ಪರ್ವತವನ್ನು ಏರುವ ಮೂಲಕ ಅತಿ ಹೆಚ್ಚು ಬಾರಿ ಎವರೆಸ್ಟ್ ಏರಿದ ಮೊದಲಿಗರು ಎಂಬ ದಾಖಲೆ ನಿರ್ಮಿಸಿದ್ದರು.

ಉದ್ಯಮಿ ಶ್ರೀಚಂದ್ ಹಿಂದುಜಾ ನಿಧನ

ಲಂಡನ್ (ರಾಯಿಟರ್ಸ್): ಭಾರತ ಮೂಲದ ಕೋಟ್ಯಧಿಪತಿ, ವಿಶ್ವ ಪ್ರಸಿದ್ಧ ಉದ್ಯಮಿ ಹಾಗೂ ಬ್ರಿಟನ್‌ನ ಶ್ರೀಮಂತ ಕುಟುಂಬದ ಶ್ರೀಚಂದ್ ಪರಮಾನಂದ ಹಿಂದುಜಾ (87) ನಿಧನರಾದರು ಎಂದು ಕುಟುಂಬವು ಬುಧವಾರ ತಿಳಿಸಿದೆ.

ಅವರ ನಿಧನ ಕುರಿತು ಮಕ್ಕಳಾದ ಶಾನು ಹಾಗೂ ವಿನೂ ಹಿಂದುಜಾ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

ಶ್ರೀಚಂದ್ ಹಾಗೂ ಅವರ ತಮ್ಮ ಗೋಪಿಚಂದ್ ಅವರು 2022ರಲ್ಲಿ ಸಂಡೆ ಟೈಮ್ಸ್‌ನ ಶ್ರೀಮಂತರ ಪಟ್ಟಿಯಲ್ಲಿ ಸತತ 4ನೇ ಬಾರಿಗೆ ಅಗ್ರಸ್ಥಾನ ಪಡೆದಿದ್ದರು. ಅವರ ಆಸ್ತಿಯ ಅಂದಾಜು ಮೌಲ್ಯ ₹ 2.96 ಲಕ್ಷ ಕೋಟಿ.


ಶ್ರೀಚಂದ್ ಹಿಂದುಜಾ

ಅವರು ಹಲವಾರು ಕಂಪನಿಗಳ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಬ್ಯಾಂಕಿಂಗ್, , ಮಾಹಿತಿ ತಂತ್ರಜ್ಞಾನ, ವಾಣಿಜ್ಯ ವಾಹನಗಳ ತಯಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳ ಕಂಪನಿಗಳನ್ನು ಮುನ್ನಡೆಸಿದ್ದರು.

ಎಂಬತ್ತು ಮತ್ತು ತೊಂಬತ್ತರ ದಶಕದಲ್ಲಿ ದೇಶದ ರಾಜಕೀಯ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಿದ್ದ ಬೊಫೋರ್ಸ್ ಹಗರಣದಲ್ಲಿ ಶ್ರೀಚಂದ್ ಹಾಗೂ ಅವರ ಇಬ್ಬರು ತಮ್ಮಂದಿರಾದ ಗೋಪಿಚಂದ್ ಹಾಗೂ ಪ್ರಕಾಶ್ ವಿರುದ್ಧ ಆರೋಪ ಕೇಳಿಬಂದಿತ್ತು.

ಸ್ವೀಡನ್ ಮೂಲದ, ಫಿರಂಗಿ ತಯಾರಕ ಕಂಪನಿ ಎ.ಬಿ. ಬೋಫೋರ್ಸ್‌ಗೆ ಭಾರತದ ಸರ್ಕಾರದ ಗುತ್ತಿಗೆಯನ್ನು ಕೊಡಿಸಲು ಅಕ್ರಮವಾಗಿ ₹ 64 ಕೋಟಿ ಕಮಿಷನ್ ಪಡೆದಿದ್ದ ಆರೋಪ ಇವರ ಮೇಲಿತ್ತು. ಹಿಂದುಜಾ ಸಹೋದರರು ಸೇರಿದಂತೆ ಎಲ್ಲ ಆರೋಪಿಗಳನ್ನು ದೆಹಲಿ ಹೈಕೋರ್ಟ್ 2005ರಲ್ಲಿ ಖುಲಾಸೆಗೊಳಿಸಿತ್ತು.

ಹ್ಯಾರಿ–ಮೇಘನ್ ದಂಪತಿ ಕಾರು ಬೆನ್ನಟ್ಟಿದ ಛಾಯಾಗ್ರಾಹಕ

ನ್ಯೂಯಾರ್ಕ್ (ಪಿಟಿಐ): 'ಛಾಯಾಗ್ರಾಹಕನೊಬ್ಬ ಯುವರಾಜ ಹ್ಯಾರಿ ಹಾಗೂ ಅವರ ಪತ್ನಿ ಮೇಘನ್ ಪ್ರಯಾಣಿಸುತ್ತಿದ್ದ ಕಾರನ್ನು ಸುಮಾರು ಎರಡು ಗಂಟೆಗಳ ಕಾಲ ಬೆನ್ನಟ್ಟಿದ್ದ. ಇದರಿಂದಾಗಿ ದುರಂತವೊಂದು ಸಂಭವಿಸುವ ಸಾಧ್ಯತೆ ಇತ್ತು' ಎಂದು ದಂಪತಿಯ ವಕ್ತಾರರೊಬ್ಬರು ಬುಧವಾರ ತಿಳಿಸಿದ್ದಾರೆ.

'ಹ್ಯಾರಿ, ಮೇಘನ್ ಹಾಗೂ ಅವರ ತಾಯಿ ಡೋರಿಯಾ ರೇಗಲಾಂಡ್ ಅವರು ಮಂಗಳವಾರ ನ್ಯೂಯಾರ್ಕ್‌ನಲ್ಲಿ ನಿಗದಿಯಾಗಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಹೋಗುವಾಗ ಈ ಘಟನೆ ನಡೆದಿದೆ. ಛಾಯಾಗ್ರಾಹಕನ ವರ್ತನೆಯಿಂದಾಗಿ ಹ್ಯಾರಿ, ಮೇಘನ್ ಹಾಗೂ ಡೋರಿಯಾ ಅಪಾಯಕ್ಕೆ ಸಿಲುಕಬೇಕಾಗಿತ್ತು' ಎಂದಿದ್ದಾರೆ.

ಕಿಶ್ತ್‌ವಾಡ: ಐವರು ಭಯೋತ್ಪಾದಕರ ಮನೆ ಮೇಲೆ ತನಿಖಾ ಘಟಕ ದಾಳಿ

ಕಿಶ್ತ್‌ವಾಡ/ಜಮ್ಮು (ಪಿಟಿಐ): 'ಉಗ್ರವಾದಕ್ಕೆ ಸಹಕಾರ ಹಾಗೂ ಭಯೋತ್ಪಾದನೆಗೆ ಧನಸಹಾಯ ಮಾಡುತ್ತಿದ್ದಾರೆ ಎಂಬ ಆರೋಪದ ಮೇಲೆ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಹಾಗೂ ವಿಶೇಷ ತನಿಖಾ ಘಟಕವು ಕಿಶ್ತ್‌ವಾಡದ ಐವರು ಭಯೋತ್ಪಾದಕರ ಮನೆ ಮೇಲೆ ಬುಧವಾರ ದಾಳಿ ನಡೆಸಿದೆ' ಎಂದು ಕಿಶ್ತ್‌ವಾಡದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಖಲೀಲ್ ಪೊಶ್ವಾಲ್ ಹೇಳಿದರು.

'ಕಾನೂನುಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆಯಡಿ (ಯುಎಪಿಎ) ಶೋಧ ನಡೆಸಲು ಎನ್‌ಐಎ ನ್ಯಾಯಾಲಯದಿಂದ ವಾರೆಂಟ್ ಪಡೆದುಕೊಳ್ಳಲಾಗಿತ್ತು' ಎಂದರು.

ಸಂಕ್ಷಿಪ್ತ ಸುದ್ದಿ

ಪಿಎಲ್‌ಐ: ಐಟಿ, ಹಾರ್ಡ್‌ವೇರ್ ವಲಯಕ್ಕೆ ₹17,000 ಕೋಟಿ

ನವದೆಹಲಿ: ಸ್ಥಳೀಯವಾಗಿ ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಐಟಿ ಹಾರ್ಡ್‌ವೇರ್ ಕ್ಷೇತ್ರಕ್ಕೆ ಉತ್ಪನ್ನ ಆಧಾರಿತ ಉತ್ತೇಜನ ಯೋಜನೆ (ಪಿಎಲ್‌ಐ ಪರಿಷ್ಕೃತ) ಅಡಿ ₹17,000 ಕೋಟಿ ಅನುದಾನ ನೀಡಲು ಕೇಂದ್ರ ಸಂಪುಟವು ಬುಧವಾರ ಅನುಮೋದನೆ ನೀಡಿತು.

ಹೊಸ ಯೋಜನೆಯ ಕಾಲಾವಧಿಯು 6 ವರ್ಷ ಇರಲಿದೆ. ಇದು 75 ಸಾವಿರ ನೇರ ಉದ್ಯೋಗವನ್ನು ಸೃಷ್ಟಿಸುವ ನಿರೀಕ್ಷೆ ಇದೆ. ಸುಮಾರು 2 ಲಕ್ಷ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದ್ದಾರೆ.

'ಮತಾಂತರ: 300 ಸಂತ್ರಸ್ತೆಯರಿಗೆ ಪುನರ್ವಸತಿ'

ಮುಂಬೈ (ಪಿಟಿಐ): ಮತಾಂತರಕ್ಕೆ ಒಳಗಾಗಿದ್ದಾರೆ ಎನ್ನಲಾದ 300 ಸಂತ್ರಸ್ತೆಯರಿಗೆ ಆಶ್ರಮವೊಂದರಲ್ಲಿ ಪುನರ್ವಸತಿ ಕಲ್ಪಿಸಿಕೊಡುವುದಾಗಿ ಮತ್ತು ಅದಕ್ಕಾಗಿ ₹51 ಲಕ್ಷ ಇರಿಸುವುದಾಗಿ 'ದಿ ಕೇರಳ ಸ್ಟೋರಿ' ಚಿತ್ರದ ನಿರ್ಮಾಪಕ ವಿಪುಲ್ ಶಾ ಬುಧವಾರ ಘೋಷಿಸಿದರು.

'ಸುದೀಪ್ತೊ ಸೇನ್ ಅವರು ದಿ ಕೇರಳ ಸ್ಟೋರಿ ಕಥೆ ಬರೆದದ್ದು ಮತ್ತು ನಾವು ಈ ಚಿತ್ರ ನಿರ್ಮಾಣ ಮಾಡಿದ್ದು, ಮತಾಂತರದ ಸಂತ್ರಸ್ತೆಯರಿಗೆ ಒತ್ತಾಸೆಯಾಗಿ ನಿಲ್ಲುವ ಉದ್ದೇಶದಿಂದ. ಸನ್‌ಶೈನ್ ಪಿಕ್ಚರ್ಸ್ ಮತ್ತು ಚಿತ್ರತಂಡವು ಸಂತ್ರಸ್ತೆಯರಿಗಾಗಿ ₹51 ಲಕ್ಷ ದೇಣಿಗೆ ನೀಡಲಿದೆ. ನಮ್ಮ 'ಪ್ರೊಟೆಕ್ಟ್ ದಿ ಡಾಟರ್ಸ್' ಉಪಕ್ರಮವೂ ಈ ನಿಟ್ಟಿನಲ್ಲಿ ಒಂದು ಹೆಜ್ಜೆ' ಎಂದು ವಿಪುಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬೇಹುಗಾರಿಕೆ: ಹವ್ಯಾಸಿ ಪತ್ರಕರ್ತ, ಮಾಜಿ ಕಮಾಂಡರ್ ಬಂಧನ

ನವದೆಹಲಿ(ಪಿಟಿಐ): ರಕ್ಷಣಾ ವಿಚಾರಗಳಿಗೆ ಸಂಬಂಧಿಸಿದ ಬೇಹುಗಾರಿಕೆ ನಡೆಸಿ, ವಿದೇಶಿ ಗುಪ್ತಚರ ಸಂಸ್ಥೆಗಳಿಗೆ ರವಾನಿಸಿದ ಆರೋಪದ ಮೇಲೆ ನೌಕಾಪಡೆ ಮಾಜಿ ಕಮಾಂಡರ್ ಆಶಿಶ್ ಪಾಠಕ್ ಮತ್ತು ಹವ್ಯಾಸಿ ಪತ್ರಕರ್ತ ವಿವೇಕ್ ರಘುವಂಶಿ ಅವರನ್ನು ಸಿಬಿಐ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ. ಐಪಿಸಿಯ ಅಧಿಕೃತ ರಹಸ್ಯ ಕಾಯ್ದೆಯ ಸೆಕ್ಷನ್ 3 ಮತ್ತು 120-ಬಿ ಅಡಿ ಪ್ರಕರಣ ದಾಖಲಿಸಲಾಗಿದೆ.

ಇಮ್ರಾನ್ ಖಾನ್ ಬಂಧನಕ್ಕೆ ಮೇ 31ರವರೆಗೂ ತಡೆ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಯಾವುದೇ ಪ್ರಕರಣದಲ್ಲಿ ಬಂಧಿಸದಂತೆ ನೀಡಿದ್ದ ಆದೇಶವನ್ನು ಮೇ 31ರ ವರೆಗೆ ಇಲ್ಲಿನ ಹೈಕೋರ್ಟ್ ಬುಧವಾರ ಮುಂದೂಡಿದೆ.

ಖಾನ್ ವಿರುದ್ಧ ದಾಖಲಾಗಿರುವ ಎಲ್ಲಾ ಪ್ರಕರಣಗಳ ಕುರಿತು ಮಾಹಿತಿ ನೀಡುವಂತೆ ಪಾಕಿಸ್ತಾನ ತೆಹ್ರೀಕ್–ಇ–ಇನ್ಸಾಫ್(ಪಿಟಿಐ) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಿಚಾರಣೆ ನಡೆಸಿತು. ಈ ಸಂದರ್ಭದಲ್ಲಿ ಹಾಜರಿದ್ದ ಸರ್ಕಾರದ ಪರ ವಕೀಲರು ಮಾಹಿತಿ ಒದಗಿಸಲು ಸಮಯಾವಕಾಶ ಕೋರಿದರು. ನಂತರ ಹೈಕೋರ್ಟ್ ಈ ಆದೇಶ ನೀಡಿತು.

ಉಗ್ರರ ಹಸ್ತಾಂತರಕ್ಕೆ 24 ಗಂಟೆ ಗಡುವು (ಲಾಹೋರ್ ವರದಿ): ಇಮ್ರಾನ್ ಅವರ ಲಾಹೋರ್ ನಿವಾಸದಲ್ಲಿ 30ರಿಂದ 40 ಉಗ್ರರು ಅಡಗಿದ್ದಾರೆ. 24 ತಾಸುಗಳ ಒಳಗಾಗಿ ಅವರನ್ನು ಹಸ್ತಾಂತರಿಸಬೇಕು, ಇಲ್ಲದಿದ್ದಲ್ಲಿ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ಪಾಕಿಸ್ತಾನ ಪಂಜಾಬ್ ಪ್ರಾಂತ್ಯದ ಮಧ್ಯಂತರ ಸರ್ಕಾರ ಎಚ್ಚರಿಕೆ ನೀಡಿದೆ.

'ಮೇ 9ರಂದು ಸೇನಾನೆಲೆಗಳ ಮೇಲೆ ದಾಳಿ ನಡೆಸಿದ್ದ 30ರಿಂದ 40 ಉಗ್ರರು ಇಮ್ರಾನ್ ಖಾನ್ ಅವರ ನಿವಾಸದಲ್ಲಿ ಅಡಗಿದ್ದಾರೆ ಎಂಬ ಗುಪ್ತಚರ ಮಾಹಿತಿ ಬಂದಿದೆ. ಭಯೋತ್ಪಾದಕರನ್ನು ಹಸ್ತಾಂತರಿಸಲು ಖಾನ್ ಮತ್ತು ತೆಹ್ರೀಕ್–ಇ–ಇನ್ಸಾಫ್‌ಗೆ (ಪಿಟಿಐ) 24 ತಾಸುಗಳ ಗಡುವೆ ನೀಡುತ್ತೇವೆ' ಎಂದು ಮಾಹಿತಿ ಸಚಿವ ಅಮಿರ್ ಮಿರ್ ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

13ನೇ ವರ್ಷದ ಚಿರಸ್ಮರಣೆ

ಶ್ರೀ ಎಂ. ಅನಿಲ್ ಕುಮಾರ್
ಮಾಜಿ ನಿರ್ದೇಶಕರು, ಬೆಂಗಳೂರು ಡೈರಿ
ನೀವು ನಮ್ಮನ್ನಗಲಿ ಇಂದಿಗೆ ಹದಿಮೂರು ವರ್ಷ ಕಳೆದರೂ ನಿಮ್ಮ ಸೌಜನ್ಯ ಮತ್ತು ನಿಮ್ಮ ಆದರ್ಶಗಳೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುವ
ದುಃಖತಪ್ತರು : ಕುಟುಂಬ ವರ್ಗದವರು ಮತ್ತು ಪದ್ಮ ಬಾರ್ & ರೆಸ್ಟೋರೆಂಟ್, ಪದ್ಮಶ್ರೀ ಸರ್ವೀಸ್ ಸ್ಟೇಷನ್, ಬೊಳಾರೆ

ವೈಕುಂಠ ಸಮಾರಾಧನೆ

ಶ್ರೀಮತಿ ಮಂಜುಳ, ನಂ. 600, ಕೋರಮಂಗಲ ಗ್ರಾಮ, ಬೆಂಗಳೂರು–560 095 ಇವರು ಮಾಡುವ ವಿಜ್ಞಾಪನೆಗಳು



[illegible]

ಇಂತಿ ದುಃಖತಪ್ತರು ಶ್ರೀಮತಿ ಮಂಜುಳ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

PUBLIC NOTICE

Public are hereby notified that my client negotiating to purchase all that property described in the Schedule herein from **Sri. K.N. Subba Reddy S/o. Late Nanja Reddy and Sri. Vivek S Reddy S/o. Sri. K.N. Subba Reddy,** who claims to be the owners of the **Schedule Property.**

ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of said Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien, attachment, development rights, right of way, lispendens, reservation, agreement, FSI consumption, development rights, or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at **LEXSITUS**, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bengaluru – 560102 or call to: 080-22583563, 080-25723339 or Email: info@lexsitus.com within a period of **7 (Seven) days** from the date of publication of this notice, failing which, the claim or claims, if any, of such person or persons shall be considered to have been waived and/or abandoned.

SCHEDULE PROPERTY

ALL THAT PIECE AND PARCEL OF THE land bearing Sy.No.49/1 measuring 3 Acres 18 Guntas, situated at Hullukasavanahalli Village, Jigani Hobli, Anekal Taluk, Bengaluru Urban District and bounded on the;

East by : Land bearing Survey No.45; **West by :** Land bearing Survey No.49/2; **North by**: Land bearing Survey No.44; and **South by**: Road.

ROOPA SHETTY
Advocate

Lex Situs, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bengaluru - 560102. Phone: 080-22583563, 080-25723339, 9902026199; Email:info@lexsitus.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕಾನೂನಿಗೆ ಕೇರಳ ಸರ್ಕಾರ ಅನುಮೋದನೆ

ತೀವ್ರ ಸ್ವರೂಪದ ದೈಹಿಕ ಹಲ್ಲೆ ನಡೆಸಿದ ಅಪರಾಧಿಗಳಿಗೆ ಏಳು ವರ್ಷದ ವರೆಗೆ ಸಜೆ, ₹5 ಲಕ್ಷದ ವರೆಗೆ ದಂಡ; ಸಂಪುಟ ಸಭೆಯಲ್ಲಿ ತೀರ್ಮಾನ

ಆರೋಗ್ಯ ಸಿಬ್ಬಂದಿ ಮೇಲಿನ ದೌರ್ಜನ್ಯಕ್ಕೆ ಕಠಿಣ ಶಿಕ್ಷೆ

ತಿರುವನಂತಪುರ (ಪಿಟಿಐ): ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಆರೋಗ್ಯ ಸೇವಾ ವಲಯದ ಇತರ ಸಿಬ್ಬಂದಿ ಮೇಲೆ ತೀವ್ರ ಸ್ವರೂಪದ ದೈಹಿಕ ಹಲ್ಲೆ ನಡೆಸಿದ ಅಪರಾಧಿಗಳಿಗೆ ಏಳು ವರ್ಷದ ವರೆಗೆ ಸಜೆ ಮತ್ತು ಗರಿಷ್ಠ ₹5 ಲಕ್ಷ ದಂಡ ವಿಧಿಸುವ ಕಠಿಣ ಕಾನೂನಿಗೆ ಕೇರಳ ಸರ್ಕಾರ ಬುಧವಾರ ಅನುಮೋದನೆ ನೀಡಿತು.



ಪಿಣರಾಯಿ ವಿಜಯನ್

ಚಿಕಿತ್ಸೆ ಕೊಡಿಸಲು ಪೊಲೀಸರು ಕರೆತಂದಿದ್ದ ವ್ಯಕ್ತಿಯೊಬ್ಬನು ಆಸ್ಪತ್ರೆಯ ವೈದ್ಯೆ ವಂದನಾ ದಾಸ್ ಎಂಬುವವರನ್ನು ಬರ್ಬರವಾಗಿ ಹತ್ಯೆಗೈದ ಪ್ರಕರಣವು ಕಳೆದ ವಾರ ಕೊಲ್ಲಂ ಜಿಲ್ಲೆಯಲ್ಲಿ ನಡೆದಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಕೇರಳ ಆರೋಗ್ಯ ಸೇವಾ ಕಾರ್ಯಕರ್ತರು ಮತ್ತು ಆರೋಗ್ಯ ಸೇವಾ ಸಂಸ್ಥೆಗಳು (ಹಿಂಸಾಚಾರ ಮತ್ತು ಆಸ್ತಿಪಾಸ್ತಿಗೆ ಹಾನಿ ತಡೆ) ತಿದ್ದುಪಡಿ ಕಾಯ್ದೆ ಅಡಿ, ಆರೋಗ್ಯ ಸೇವಾ ಸಿಬ್ಬಂದಿಗೆ ಗಂಭೀರ ಹಲ್ಲೆ ಮಾಡಿದ ಪ್ರಕರಣದಲ್ಲಿ ದೋಷಿಗಳಿಗೆ ಏಳು ವರ್ಷ ವರೆಗೆ ಸಜೆ ಮತ್ತು ₹1 ಲಕ್ಷದಿಂದ ₹5 ಲಕ್ಷದ ವರೆಗೆ ದಂಡ ವಿಧಿಸಲಾಗುವುದು ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರೋಗ್ಯ ಸೇವಾ ಸಿಬ್ಬಂದಿಗೆ ಮೇಲೆ ದೌರ್ಜನ್ಯ ಎಸಗಿದ, ಹಿಂಸಾಚಾರ ಉತ್ತೇಜಿಸಿದವರಿಗೆ 6 ತಿಂಗಳಿಂದ 5 ವರ್ಷ ಸಜೆ ಮತ್ತು ₹50 ಸಾವಿರದಿಂದ ₹2 ಲಕ್ಷದ ವರೆಗೆ ದಂಡ ವಿಧಿಸಲಾಗುವುದು ಎಂದೂ ಹೇಳಲಾಗಿದೆ.

ಷೇರುಗಳ ಮೌಲ್ಯ ಕೃತಕವಾಗಿ ಏರಿಳಿತ ಮಾಡಿದ ಆರೋಪ; ಸೆಬಿಗೆ ಸಮಯಾವಕಾಶ ನೀಡಿದ ಸುಪ್ರೀಂ ಕೋರ್ಟ್

ಅದಾನಿ ವಿರುದ್ಧ ತನಿಖೆ: ಆ.14ರ ಗಡುವು

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಾನಿ ಸಮೂಹವು ತನ್ನ ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಳಿತ ಮಾಡಿತ್ತು ಎಂಬ ಆರೋಪಗಳ ಕುರಿತ ತನಿಖೆಯನ್ನು ಪೂರ್ಣಗೊಳಿಸಲು ಸೆಬಿಗೆ ಆಗಸ್ಟ್ 14ರ ವರೆಗೆ ಸಮಯಾವಕಾಶ ನೀಡಿ ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿತು.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠ, ತನಿಖೆಯನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ಆರು ತಿಂಗಳು ಅವಕಾಶ ನೀಡಬೇಕು ಎಂಬ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮನವಿ ತಿರಸ್ಕರಿಸಿತು.

ತನಿಖೆಗೆ ಸಂಬಂಧಿಸಿದ ವರದಿ ಆಗಸ್ಟ್ 14ರಂದು ಸಲ್ಲಿಸುವಂತೆಯೂ ಸೆಬಿಗೆ ನ್ಯಾಯಪೀಠ ಸೂಚಿಸಿತು.

ಈ ವಿಷಯದಲ್ಲಿ ನ್ಯಾಯಾಲಯಕ್ಕೆ ನೆರವು ನೀಡುವುದಕ್ಕಾಗಿ, ಸುಪ್ರೀಂ ಕೋರ್ಟ್ ನೇಮಿಸಿರುವ ನ್ಯಾಯಮೂರ್ತಿ ಎ.ಎಂ.ಸಪ್ರೆ ಸಮಿತಿ ಸಲ್ಲಿಸಿರುವ ವರದಿಯನ್ನು ಸಂಬಂಧಪಟ್ಟ ಕಕ್ಷಿದಾರರಿಗೆ ಒದಗಿಸುವಂತೆ ನಿರ್ದೇಶನ ನೀಡಿತು.

‘ಈ ವಿಷಯಕ್ಕೆ ಸಂಬಂಧಿಸಿ ತನಿಖೆ ನಡೆಸಿದ ತಜ್ಞರ ಸಮಿತಿಯು ಎರಡು ತಿಂಗಳ ಒಳಗಾಗಿ ವರದಿ ಸಲ್ಲಿಸಿದೆ. ಹೀಗಾಗಿ ಮುಂದಿನ ವಿಚಾರಣೆಯನ್ನು ಜುಲೈ 11ರಂದು ನಡೆಸಲಾಗುವುದು’ ಎಂದು ಹೇಳಿದ ನ್ಯಾಯಪೀಠ, ಈ ವಿಷಯದಲ್ಲಿ ನ್ಯಾಯಾಲಯಕ್ಕೆ ಸಲಹೆಗಳನ್ನು ನೀಡುವಂತೆ ತಜ್ಞರ ಸಮಿತಿಗೆ ಮನವಿ ಮಾಡಿತು.

ವಾದ ಮಂಡನೆ: ಇದಕ್ಕೂ ಮುನ್ನ, ಅರ್ಜಿದಾರರೊಬ್ಬರ ವಾದ ಮಂಡಿಸಿದ ಹಿರಿಯ ವಕೀಲ ಪ್ರಶಾಂತ್‌ಭೂಷಣ್, ‘ಅದಾನಿ ಸಮೂಹ ಕುರಿತು ಸೆಬಿ ಹಲವಾರು ವರ್ಷಗಳಿಂದ ತನಿಖೆ ನಡೆಸುತ್ತಿದೆ. 2016, ನಂತರ 2021ರಲ್ಲಿ ತನಿಖೆ ನಡೆಸಿತ್ತು. ಈ ತನಿಖೆಗಳಲ್ಲಿ ಕಂಡುಬಂದ ವಿಷಯವನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೆಬಿಗೆ ನಿರ್ದೇಶನ ನೀಡಬೇಕು’ ಎಂದು ಕೋರಿದರು.

‘ಅದಾನಿ ಸಮೂಹದ ಷೇರುಗಳ ಮೌಲ್ಯದಲ್ಲಿ ಭಾರಿ ಏರಿಕೆ ಕಂಡುಬಂದಾಗ ಸೆಬಿ ಎಚ್ಚರಿಕೆ ನೀಡಬೇಕಾಗಿತ್ತು. ಆದರೆ, ಅವರು ಏನೂ ಮಾಡುತ್ತಿಲ್ಲ. ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಸಂಸತ್‌ನಲ್ಲಿ ಮಾಹಿತಿ ನೀಡಲಾಗಿದೆ. ಹೀಗಾಗಿ ತನಿಖೆಯಲ್ಲಿ ಏನು ಕಂಡು ಬಂದಿದೆ ಎಂಬುದನ್ನು ಸಂಬಂಧಪಟ್ಟವರು ಹೇಳಬೇಕು’ ಎಂದು ವಾದಿಸಿದರು.

ಅರ್ಜಿದಾರರೂ ಆಗಿರುವ ವಕೀಲ ವಿಶಾಲ್ ತಿವಾರಿ, ‘ಈ ವಿಷಯ ಕುರಿತು ತನಿಖೆ ನಡೆಸಲು ಯಾರನ್ನು ನೇಮಕ ಮಾಡಲಾಗಿದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ಕೂಡ ಸೆಬಿ ತಿಳಿಸಿಲ್ಲ’ ಎಂದರು.

ಆಗ ಮಧ್ಯಪ್ರವೇಶಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘2016ರಲ್ಲಿ ತನಿಖೆಗೆ ಒಳಪಡಿಸಿದ್ದ ವಿಷಯ ಸಂಪೂರ್ಣ ಬೇರೆ’ ಎಂದು ತಿಳಿಸಿದರು.

‘ಈ ವಿಷಯದಲ್ಲಿ ಕೈಗೊಂಡಿರುವ ಯಾವುದೇ ಕ್ರಮ ಕೈಗೊಂಡಿದ್ದರೂ ಅದನ್ನು ನ್ಯಾಯಾಲಯದ ಮುಂದೆ ಮಂಡಿಸಬೇಕು ಎಂಬುದು ದೂರುದಾರರ ಬೇಡಿಕೆಯಾಗಿದೆ. ಹಾಗೆ ಮಾಡುವುದರಿಂದ ನ್ಯಾಯ ತೀರ್ಮಾನ ಮಾಡಿದಂತಾಗುವುದು. ಆದರೆ, ವಿವರಗಳನ್ನು ಮಂಡಿಸುವುದಕ್ಕೆ ಸಮಸ್ಯೆಯೇನಿಲ್ಲ’ ಎಂದು ಮೆಹ್ತಾ ಹೇಳಿದರು.

‘ಅದಾನಿ ಸಮೂಹದ ವಿರುದ್ಧ ಮಂಡಳಿಯು 2016ರಿಂದ ತನಿಖೆ ನಡೆಸುತ್ತಿದೆ ಎಂಬುದು ಆಧಾರರಹಿತ’ ಎಂದು ಸುಪ್ರೀಂಕೋರ್ಟ್‌ಗೆ ಸೆಬಿ ಸೋಮವಾರ ಮಾಹಿತಿ ನೀಡಿತ್ತು. ಅಲ್ಲದೆ, ತನಿಖೆ ಪೂರ್ಣಗೊಳಿಸಲು ನೀಡಿರುವ ಅವಧಿಯನ್ನು ಆರು ತಿಂಗಳು ವಿಸ್ತರಿಸುವಂತೆ ಏಪ್ರಿಲ್ 29ರಂದು ಸೆಬಿ ಮನವಿ ಮಾಡಿತ್ತು.

‘ಚುನಾಯಿತ ಮಂಡಳಿ ಅಸ್ಥಿರಗೊಳಿಸುವ ಅಪಾಯ’

ನವದೆಹಲಿ (ಪಿಟಿಐ): ‘ದೆಹಲಿ ಮಹಾನಗರ ಪಾಲಿಕೆಗೆ (ಎಂಸಿಡಿ) ವಿವಿಧ ಕ್ಷೇತ್ರಗಳ ಗಣ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಲೆಫ್ಟಿನೆಂಟ್ ಗವರ್ನರ್‌ಗೆ (ಎಲ್‌ಜಿ) ನೀಡಿದರೆ ಅವರು ಚುನಾಯಿತ ಆಡಳಿತ ಮಂಡಳಿಯನ್ನು ಅಸ್ಥಿರಗೊಳಿಸಬಹುದು. ಅದಕ್ಕೆ ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ಎಂಸಿಡಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಸಂಬಂಧ ಲೆಫ್ಟಿನೆಂಟ್ ಗವರ್ನರ್‌ಗೆ ಇರುವ ಅಧಿಕಾರವನ್ನು ಪ್ರಶ್ನಿಸಿ ದೆಹಲಿ ಸರ್ಕಾರ ಅರ್ಜಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠವು ತೀರ್ಪು ಕಾಯ್ದಿರಿಸಿದೆ.

‘ವಿವಿಧ ಕ್ಷೇತ್ರಗಳ 12 ಮಂದಿಯನ್ನು ಎಂಸಿಡಿಗೆ ನಾಮನಿರ್ದೇಶನ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ಇಷ್ಟೊಂದು ಆಸಕ್ತಿ ತೋರುತ್ತಿರುವುದಾದರೂ ಏಕೆ. ನಾಮನಿರ್ದೇಶಿತ ಸದಸ್ಯರು ಮತದಾನದ ಹಕ್ಕು ಹೊಂದಿರುತ್ತಾರೆ. ಅವರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಲೆಫ್ಟಿನೆಂಟ್ ಗವರ್ನರ್‌ಗೆ ನೀಡಿದ್ದೇ ಆದಲ್ಲಿ ಗವರ್ನರ್ ಅವರು ಚುನಾಯಿತ ಆಡಳಿತ ಮಂಡಳಿಯನ್ನೇ ಅಸ್ಥಿರಗೊಳಿಸಬಹುದು’ ಎಂದು ಪೀಠ ಹೇಳಿದೆ.

‘ಮಣಿಪುರ ಹಿಂಸಾಚಾರ: ಸ್ಥಿತಿಗತಿ ವರದಿ ನೀಡಿ’

ನವದೆಹಲಿ (ಪಿಟಿಐ): ‘ರಾಜ್ಯದ ಕಾನೂನು–ಸುವ್ಯವಸ್ಥೆ ಕುರಿತು ಸರ್ಕಾರವು ಕಣ್ಣುಮುಚ್ಚಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ರಾಜ್ಯದ ಭದ್ರತೆ, ಹಿಂಸಾಚಾರ ಪೀಡಿತ ಪ್ರದೇಶಗಳ ಜನರ ಪುನರ್ವಸತಿ ಹಾಗೂ ಅವರಿಗೆ ನೀಡಿದ ಪರಿಹಾರದ ಕುರಿತು ಹೊಸತಾಗಿ ಸ್ಥಿತಿಗತಿ ವರದಿ ನೀಡಿ’ ಎಂದು ಮಣಿಪುರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿತು.

‘ಕಾನೂನು ಮತ್ತು ಸುವ್ಯವಸ್ಥೆಯು ರಾಜ್ಯಪಟ್ಟಿಯಲ್ಲಿ ಬರುವ ವಿಷಯ. ಹಾಗಂತ, ರಾಜ್ಯವೊಂದರ ಕಾನೂನು ಸುವ್ಯವಸ್ಥೆ ಕುರಿತು ಸರ್ಕಾರವೊಂದು ಕಣ್ಣುಮುಚ್ಚಿ ಕೂರಲು ನಾವು ಬಿಡುವುದಿಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದೀವಾಲ ಅವರಿದ್ದ ಪೀಠವು ಹೇಳಿತು.

‘ಬಹುಸಂಖ್ಯಾತ ಮೈತೇಯಿ ಸಮುದಾಯಕ್ಕೆ ಮೀಸಲಾತಿ ನೀಡುವ ಸಂಬಂಧ ಮಣಿಪುರ ಹೈಕೋರ್ಟ್‌ನ ನಿರ್ಧಾರದ

ಕಾನೂನು ಆಯಾಮದ ಕುರಿತು ನಾವು ವಿಚಾರಣೆ ನಡೆಸುವುದಿಲ್ಲ. ಈ ಸಂಬಂಧದ ಅರ್ಜಿಗಳು ಈಗಾಗಲೇ ವಿಸ್ತೃತ ವಿಭಾಗೀಯ ಪೀಠದ ಮುಂದಿದೆ’ ಎಂದಿತು.

ಕೂಕಿ ಹಾಗೂ ಇತರೆ ಬುಡಕಟ್ಟು ಸಮುದಾಯಗಳ ಭದ್ರತೆಯ ಕುರಿತು ತೀವ್ರ ಆತಂಕ ವ್ಯಕ್ತಪಡಿಸಿರುವ ನ್ಯಾಯಾಲಯವು, ‘ಬುಡಕಟ್ಟು ಸಮುದಾಯಗಳು ಹೆಚ್ಚಿರುವ ಗ್ರಾಮಗಳಲ್ಲಿ ಶಾಂತಿ ಕಾಪಾಡುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯ ಕಾರ್ಯದರ್ಶಿ ಹಾಗೂ ಅವರ ಭದ್ರತಾ ಸಲಹೆಗಾರರಿಗೆ ಆದೇಶಿಸಿತು.

ಮೀಸಲಾತಿ ಕುರಿತು ಮಣಿಪುರ ಹೈಕೋರ್ಟ್‌ನ ವಿಭಾಗೀಯ ಪೀಠಕ್ಕೆ ಅರ್ಜಿ ಸಲ್ಲಿಸುವಂತೆ ಬುಡಕಟ್ಟು ಸಮುದಾಯಗಳು ಸುಪ್ರೀಂ ಕೋರ್ಟ್ ಸೂಚಿಸಿತು.

ಹೈಕೋರ್ಟ್ ನ್ಯಾಯಮೂರ್ತಿಗೆ ಛೀಮಾರಿ

‘ಮೈತೇಯಿ ಸಮುದಾಯಕ್ಕೆ ಮೀಸಲಾತಿ ನೀಡುವ ಕುರಿತು ಮಾರ್ಚ್ 27ರಂದು ನೀಡಿದ ಆದೇಶಕ್ಕೆ ಸಂಬಂಧಿಸಿ ಮಣಿಪುರ ಹೈಕೋರ್ಟ್ ನ್ಯಾಯಮೂರ್ತಿ ಎಂ.ವಿ.ಮುರಳೀಧರನ್ ಅವರಿಗೆ ಸುಪ್ರೀಂಕೋರ್ಟ್ ಛೀಮಾರಿ ಹಾಕಿತು. ಮೈತೇಯಿ ಸಮುದಾಯಕ್ಕೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದ ತೀರ್ಪನ್ನು ಸರಿಪಡಿಸಲು ಅವಕಾಶ ನೀಡಿದ್ದರೂ, ಅವರು ಸರಿಪಡಿಸಲಿಲ್ಲ’ ಎಂದು ಸಿಜೆಐ ನೇತೃತ್ವದ ಪೀಠ ಟೀಕಿಸಿತು.

‘ಮಾರ್ಚ್ 27ರ ಆದೇಶವನ್ನು ಒಪ್ಪಲಾಗದು’ ಎಂದು ಮಣಿಪುರ ಸರ್ಕಾರ ಪರ ವಕೀಲರನ್ನು ಉದ್ದೇಶಿಸಿ ಹೇಳಿದ ಸಿಜೆಐ, ‘ಹೈಕೋರ್ಟ್ ಆದೇಶ ಸರಿ ಇಲ್ಲ. ಹೀಗಾಗಿ, ಆದೇಶಕ್ಕೆ ತಡೆ ನೀಡಬೇಕಾಗುತ್ತದೆ. ತಪ್ಪನ್ನು ಸರಿಪಡಿಸುವಂತೆ ನ್ಯಾಯಮೂರ್ತಿ ಮುರಳೀಧರನ್‌ಗೆ ಅವಕಾಶ ನೀಡಿದ್ದೆವು. ಅವರು ಹಾಗೆ ಮಾಡಲಿಲ್ಲ’ ಎಂದರು.

ಪ್ರಚೋದನಕಾರಿಯಾಗಿ ಮಾತನಾಡಬಾರದು: ‘ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ತಮ್ಮ ಅಧಿಕೃತ ಖಾತೆಗಳಲ್ಲಿ ಕೂಕಿ ಸಮುದಾಯದವರನ್ನು ಉದ್ದೇಶಿಸಿ ದ್ವೇಷ ಕಾರುವ ಮಾತನಾಡುತ್ತಿದ್ದಾರೆ. ‘ಕ್ರೈಸ್ತ ಧರ್ಮದ ಹೆಸರಲ್ಲಿ ನೀವು ಮಣಿಪುರವನ್ನು ಧ್ವಂಸ ಮಾಡಿದಿರಿ....’ ಎಂಬಿತ್ಯಾದಿಯಾಗಿ ಅವರು ಮಾತನಾಡುತ್ತಿದ್ದಾರೆ’ ಎಂದು ವಕೀಲ ನಿಜಾಮ್ ಪಾಶಾ ಅವರು ನ್ಯಾಯಾಲಯದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ‘ಸಾಂವಿಧಾನಿಕ ಹುದ್ದೆಯಲ್ಲಿರುವವರು ಮಾತನಾಡುವಾಗ ಎಚ್ಚರಿಕೆ ವಹಿಸಬೇಕು. ಯಾವುದೇ ಕಾರಣಕ್ಕೂ ಪ್ರಚೋದನಕಾರಿಯಾಗಿ ಮಾತನಾಡಬಾರದು’ ಎಂದಿತು.

ಸಿ.ಎಂ ಗಾದಿಗೆ ಇನ್ನೂ ಸಿಗದ ‘ಗ್ಯಾರಂಟಿ’

ಒಂದನೇ ಪುಟದಿಂದ...

ಸಹೋದರರ ರೋಷಾವೇಶ ನೋಡಿದ ಖರ್ಗೆ ಅವರು ಈ ಬಗ್ಗೆ ಮಾಧ್ಯಮಗಳಿಗೆ ಸ್ಪಷ್ಟನೆ ನೀಡುವಂತೆ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಸೂಚಿಸಿದರು. ‘ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರನ್ನು ಅಂತಿಮಗೊಳಿಸಿಲ್ಲ. ಊಹಾಪೋಹದ ಸುದ್ದಿಗಳನ್ನು ಯಾರೂ ನಂಬಬಾರದು’ ಎಂದು ಸುರ್ಜೇವಾಲಾ ಸ್ಪಷ್ಟಪಡಿಸಿದರು.

ಡಿ.ಕೆ. ಸಹೋದರರನ್ನು ಮನ ಒಲಿಸಲು ಖರ್ಗೆ ಯತ್ನಿಸಿದರು. ಆದರೆ, ಸಹೋದರರು ಪಟ್ಟು ಸಡಿಲಿಸಲಿಲ್ಲ. ‘ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಹುದ್ದೆಯನ್ನು ಸಿದ್ದರಾಮಯ್ಯ ಅವರಿಗೆ ಬಿಟ್ಟು ಕೊಡುವುದಿಲ್ಲ. ನೀವು (ಖರ್ಗೆ) ಮುಖ್ಯಮಂತ್ರಿಯಾದರೆ ಕೈ ಕೆಳಗೆ ಕೆಲಸ ಮಾಡಲು ಸಿದ್ಧ’ ಎಂದು ಶಿವಕುಮಾರ್ ಸ್ಪಷ್ಟಪಡಿಸಿದರು. ಈ ಪ್ರಸ್ತಾವಕ್ಕೆ ಖರ್ಗೆ ಒಪ್ಪಲಿಲ್ಲ ಎಂದು ಮೂಲಗಳು ಹೇಳಿವೆ.

ಸುಮಾರು ಎರಡು ಗಂಟೆ ಕಾಲ ಮಾತುಕತೆ ನಡೆಸಿ ಹೊರಬಂದ ಕೆಪಿಸಿಸಿ ಅಧ್ಯಕ್ಷರು, ಮಾಧ್ಯಮಗಳ ಮೇಲೂ ಅಸಮಾಧಾನ ಹೊರ ಹಾಕಿದರು. ‘ಫ್ರಾಡ್‌ಗಳ ಮಾತು ಕೇಳಿಕೊಂಡು ಸುದ್ದಿ ಪ್ರಕಟಿಸುತ್ತೀರಲ್ಲ’ ಎಂದು ಅಸಹನೆ ವ್ಯಕ್ತಪಡಿಸಿದರು. ಬಳಿಕ ಡಿ.ಕೆ. ಸುರೇಶ್ ನಿವಾಸಕ್ಕೆ ತೆರಳಿದರು. ಈ ವೇಳೆ, ಅವರ ಜತೆಗೆ ಶಾಸಕರಾದ ಕುಣಿಗಲ್‌ನ ಡಾ.ರಂಗನಾಥ್, ಮಾಗಡಿಯ ಎಚ್.ಸಿ.ಬಾಲಕೃಷ್ಣ ಮತ್ತಿತರರು ಇದ್ದರು. ಮುಂದಿನ ನಡೆಗಳ ಕುರಿತು ಸುಮಾರು ಒಂದು ಗಂಟೆ ರಣತಂತ್ರ ಹೆಣೆದರು.

ಈ ವೇಳೆ, ಶಿವಕುಮಾರ್ ಆಪ್ತರೊಬ್ಬರು ಹೊರಕ್ಕೆ ಬಂದು, ‘ಕೆಪಿಸಿಸಿ ಅಧ್ಯಕ್ಷರು 12 ಶಾಸಕರ ಜತೆಗೆ ಚರ್ಚಿಸುತ್ತಿದ್ದಾರೆ’ ಎಂದು ಹೇಳಿ ಹೋದರು. ನಂತರ, ಶಾಸಕರಾದ ಎನ್.ಎ. ಹ್ಯಾರಿಸ್, ಚಲುವರಾಯಸ್ವಾಮಿ, ವಿನಯ್ ಕುಲಕರ್ಣಿ, ಪಿ.ಎಂ. ನರೇಂದ್ರಸ್ವಾಮಿ ಮತ್ತಿತರರು ಸೇರಿಕೊಂಡರು. ಆ ನಂತರ ಶಿವಕುಮಾರ್ ಅವರು ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ತಮ್ಮ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದರು. ಈ ನಡುವೆ, ಖರ್ಗೆ ಅವರನ್ನು ಶಾಸಕರಾದ ಎಂ.ಬಿ.ಪಾಟೀಲ, ಶರಣ ಪ್ರಕಾಶ ಪಾಟೀಲ, ವಿಜಯಾನಂದ ಕಾಶಪ್ಪನವರ ಭೇಟಿ ಮಾಡಿದರು.

ವಿಮಾ ಹಗರಣ 12 ಕಡೆ ಸಿಬಿಐ ಶೋಧ

ಒಂದನೇ ಪುಟದಿಂದ...

ಹಣಕಾಸು ದಾಖಲೆಗಳು, ಡಿಜಿಟಲ್ ಪುರಾವೆ ಮತ್ತು ಪ್ರಕರಣದ ಆರೋಪಿಗಳು ಹಾಗೂ ಇತರೆ ವ್ಯಕ್ತಿಗಳ ಹೇಳಿಕೆಗಳ ವಿಶ್ಲೇಷಣೆ ನಂತರ ಶೋಧ ಕಾರ್ಯ ನಡೆದಿದೆ ಎಂದು ಸಿಬಿಐ ಹೇಳಿದೆ.

ಬಿಹಾರ, ಜಮ್ಮು ಮತ್ತು ಕಾಶ್ಮೀರ, ಗೋವಾ ಮತ್ತು ಮೇಘಾಲಯದಲ್ಲಿ ರಾಜ್ಯಪಾಲರ ಜವಾಬ್ದಾರಿ ಪೂರ್ಣಗೊಳಿಸಿದ ನಂತರ ಮಲಿಕ್ ಅವರ ಹೇಳಿಕೆಯನ್ನು ಕಳೆದ ಅಕ್ಟೋಬರ್‌ನಲ್ಲಿ ದಾಖಲಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ಕಿರು ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದ ₹2,200 ಕೋಟಿ ಸಿವಿಲ್ ಕಾಮಗಾರಿಗಳು ಮತ್ತು ಸರ್ಕಾರಿ ನೌಕರರಿಗೆ ಸಮೂಹ ವೈದ್ಯಕೀಯ ವಿಮಾ ಯೋಜನೆಯ ಗುತ್ತಿಗೆ ನೀಡುವಲ್ಲಿ ಮಲಿಕ್ ಮಾಡಿದ ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದಂತೆ ಸಿಬಿಐ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದೆ.

2018ರ ಆ. 23 ಮತ್ತು 2019ರ ಅ.30ರ ನಡುವೆ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿದ್ದ ಅವಧಿಯಲ್ಲಿ ಎರಡು ಕಡತಗಳನ್ನು ವಿಲೇವಾರಿ ಮಾಡಲು ತಮಗೆ ₹ 300 ಕೋಟಿ ಲಂಚದ ಆಮಿಷ ಒಡ್ಡಲಾಗಿತ್ತು ಎಂದು ಮಲಿಕ್ ಆರೋಪಿಸಿದ್ದರು.

ಜಮ್ಮು ಮತ್ತು ಕಾಶ್ಮೀರ ಸರ್ಕಾರಿ ನೌಕರರಿಗೆ ವಿವಾದಾತ್ಮಕ ಆರೋಗ್ಯ ವಿಮಾ ಯೋಜನೆಗೆ ಸಂಬಂಧಿಸಿದ ಎಫ್‌ಐಆರ್‌ನಲ್ಲಿ ರಿಲಯನ್ಸ್ ಜನರಲ್ ಇನ್ಶೂರೆನ್ಸ್ ಮತ್ತು ಟ್ರಿನಿಟಿ ರಿ-ಇನ್ಶೂರೆನ್ಸ್ ಬ್ರೋಕರ್ಸ್ ಲಿಮಿಟೆಡ್ ವಿರುದ್ಧ ತನಿಖಾ ಸಂಸ್ಥೆ ಪ್ರಕರಣ ದಾಖಲಿಸಿದೆ.

15 ಕೆ.ಜಿ ಮಾದಕ ದ್ರವ್ಯ ವಶ

ಜಲಂಧರ್(ಪಿಟಿಐ): ಪಂಜಾಬ್ ಗಡಿಯಲ್ಲಿ ಪಾಕಿಸ್ತಾನದ ಎರಡು ಡ್ರೋನ್ ಹೊಡೆದುರುಳಿಸಿರುವ ಗಡಿ ಭದ್ರತಾ ಪಡೆಯು(ಬಿಎಸ್‌ಎಫ್), ಅವುಗಳಲ್ಲಿದ್ದ 15 ಕೆ.ಜಿ.ಗೂ ಅಧಿಕ ಮಾದಕ ದ್ರವ್ಯ ಬುಧವಾರ ವಶಪಡಿಸಿಕೊಂಡಿದೆ.

ಅಮೃತಸರದ ರಾಮ್‌ಕೋಟ್ ಹಳ್ಳಿಯಲ್ಲಿ ಮಧ್ಯರಾತ್ರಿ ಡ್ರೋನ್ ಹಾರಾಟದ ಶಬ್ದ ಕೇಳಿಸಿದ್ದು, ತಕ್ಷಣವೇ ಎಚ್ಚೆತ್ತ ಬಿಎಸ್‌ಎಫ್ ಯೋಧರು ಅದರತ್ತ ಗುಂಡು ಹಾರಿಸಿದರು. ಅದೇ ವೇಳೆಗೆ ಡ್ರೋನ್‌ನಲ್ಲಿ ಕಳ್ಳಸಾಗಣೆ ಮಾಡುತ್ತಿದ್ದ ಮಾದಕ ಪದಾರ್ಥ ಸಂಗ್ರಹಿಸಲು ಮೂವರು ವ್ಯಕ್ತಿಗಳು ಯತ್ನಿಸುತ್ತಿದ್ದರು. ಡ್ರೋನ್ ಹೊಡೆದುರುಳಿಸಿದ ಯೋಧರು ಸ್ಥಳ ತಲುಪುವಷ್ಟರಲ್ಲಿ ಆ ಮೂವರೂ ಪರಾರಿಯಾಗಿದ್ದರು. ಸ್ಥಳದಿಂದ ಐದು ಪೊಟ್ಟಣ ಮಾದಕ ದ್ರವ್ಯ ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ, ಇದೇ ಜಿಲ್ಲೆಯ ಕಕ್ಕಡ್ ಗ್ರಾಮದಲ್ಲಿ ರಾತ್ರಿ 1.20ರವೇಳೆಗೆ ಪಾಕಿಸ್ತಾನದ ಮತ್ತೊಂದು ಡ್ರೋನ್ ಒಳನುಸುಳಿದ ಘಟನೆ ನಡೆಯಿತು. ಆಗ ಯೋಧರು ಅದನ್ನು ಹೊಡೆದುರುಳಿಸಿ, ಐದು ಪೊಟ್ಟಣ ಮಾದಕ ದ್ರವ್ಯ ವಶಪಡಿಸಿಕೊಂಡರು ಎಂದು ಬಿಎಸ್‌ಎಫ್ ವಕ್ತಾರರು ಬುಧವಾರ ತಿಳಿಸಿದ್ದಾರೆ.

ನಾಪೋಕ್ಲು ಪಟ್ಟಣದಲ್ಲಿ ಗಾಳಿಮಳೆಗೆ ತೆಂಗಿನ ಮರ ಮುರಿದು ಬಿದ್ದಿತ್ತು

ಗಾಳಿ, ಮಳೆಗೆ ಬಿದ್ದ ಮರ

ಪ್ರಜಾವಾಣಿ ವಾರ್ತೆ

ಮಡಿಕೇರಿ (ಕೊಡಗು): ಜಿಲ್ಲೆಯ ವಿವಿಧೆಡೆ ಬುಧವಾರ ಬಿರುಸಿನ ಮಳೆಯಾಗಿದ್ದು, ಹಲವೆಡೆ ಮರಗಳು ಧರೆಗುರುಳಿವೆ.

ನಾಪೋಕ್ಲು ಭಾಗದಲ್ಲಿ ಭಾರಿ ಗಾಳಿ ಮಳೆಗೆ ಮರಗಳು ಮುರಿದು ಬಿದ್ದು, ಸಂಚಾರಕ್ಕೆ ಅಡಚಣೆಯಾಗಿತ್ತು. ಸಮೀಪದ ಹಳೆ ತಾಲ್ಲೂಕಿನ ನಿವಾಸಿ ಬೊಪ್ಪೆರ ಕಾವೇರಪ್ಪ ಅವರ ಮನೆ ಎದುರಿನ ತೆಂಗಿನಮರ ಬುಡಸಹಿತ ರಸ್ತೆಗೆ ಅಡ್ಡಲಾಗಿ ಬಿದ್ದಿತ್ತು. ಪಟ್ಟಣದ ಹೊರವಲಯದಲ್ಲಿ ಮರ ಮುರಿದು ಬಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿತು. ನಾಲ್ಕು ವಿದ್ಯುತ್ ಕಂಬಗಳು ತುಂಡಾಗಿದ್ದು, ವಿದ್ಯುತ್ ಸಂಪರ್ಕವು ಕಡಿತಗೊಂಡಿತು.

ಸುಂಟಿಕೊಪ್ಪ ಪಟ್ಟಣ ಸೇರಿದಂತೆ ಹೋಬಳಿ ವ್ಯಾಪ್ತಿಯಲ್ಲಿ ಕೆಲವೆಡೆ ಸಂಜೆ ಧಾರಾಕಾರ ಮಳೆಯಾಯಿತು.

ಗೋಣಿಕೊಪ್ಪಲು ವರದಿ: ಆನೆಚೌಕೂರು ತಿತಿಮತಿ ರಾಜ್ಯ ಹೆದ್ದಾರಿಯ ಮಜ್ಜಿಗೆಹಳ್ಳದ ಬಾಳುಮನಿ ಎಸ್ಟೇಟ್ ಬಳಿ ಮಂಗಳವಾರ ಸಂಜೆ ಬಿರುಗಾಳಿಗೆ ಭಾರಿ ಗಾತ್ರದ ಮರ ಉರುಳಿ ಬಿದ್ದು, ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ದಾಲ್‌ನಲ್ಲಿ ಗಸ್ತು...

ಜಮ್ಮು ಮತ್ತು ಕಾಶ್ಮೀರದಲ್ಲಿ ಮುಂದಿನ ವಾರ ಜಿ20 ಸಭೆ ಆಯೋಜನೆ ಆಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಿಯೋಜಿಸಿರುವ ಭಾರತೀಯ ನೌಕಾಪಡೆಯ ‘ಮೆರೈನ್ ಕಮಾಂಡೋಸ್’ (ಮಾರ್ಕೋಸ್) ತಂಡವು ಶ್ರೀನಗರದ ದಾಲ್ ಸರೋವರದಲ್ಲಿ ಬುಧವಾರ ಗಸ್ತು ಕಾರ್ಯದಲ್ಲಿ ತೊಡಗಿತ್ತು — ಪಿಟಿಐ ಚಿತ್ರ

ರಾವುತ್ ಹೇಳಿಕೆ: ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿದ ಧನಕರ್

ನವದೆಹಲಿ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಕುರಿತು ಶಿವಸೇನಾ (ಉದ್ಧವ್ ಬಾಳಾಸಾಹೇಬ ಠಾಕ್ರೆ) ಸಂಸದ ಸಂಜಯ್ ರಾವುತ್ ನೀಡಿರುವ ಹೇಳಿಕೆ ವಿಷಯವನ್ನು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಹಕ್ಕುಬಾಧ್ಯತಾ ಸಮಿತಿಗೆ ಬುಧವಾರ ಒಪ್ಪಿಸಿದ್ದಾರೆ.

‘ರಾವುತ್ ಅವರು ಮಹಾರಾಷ್ಟ್ರ ವಿಧಾನಸಭೆಯನ್ನು ‘ಚೋರ್ ಮಂಡಲ’ (ಕಳ್ಳರ ಮನೆ) ಎಂದು ಕರೆಯುವ ಮೂಲಕ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ’ ಎಂದು ದೂರಿ ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ರಾವುತ್ ವಿರುದ್ಧದ ಹಕ್ಕುಚ್ಯುತಿ ನೋಟಿಸನ್ನು ಸಭಾಪತಿ ಧನಕರ್ ಅವರಿಗೆ ಸಲ್ಲಿಸಿದ್ದರು.



ಸಂಜಯ್ ರಾವುತ್

‘ಮಹಾರಾಷ್ಟ್ರ ವಿಧಾನಸಭೆ ಕುರಿತು ರಾವುತ್ ನೀಡಿರುವ ಹೇಳಿಕೆ ಕುರಿತು ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸ್ಪೀಕರ್ ಅವರು ಏಪ್ರಿಲ್ 6ರಂದು ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ್ದಾರೆ’ ಎಂದು ರಾಜ್ಯಸಭಾ ಸೆಕ್ರೆಟರಿಯೇಟ್ ಪ್ರಕಟಣೆ ತಿಳಿಸಿದೆ.

ಬಿ.ವಿ. ಶ್ರೀನಿವಾಸ್‌ಗೆ ಮಧ್ಯಂತರ ರಕ್ಷಣೆ

ನವದೆಹಲಿ (ಪಿಟಿಐ): ಭಾರತೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ಬಂಧನದಿಂದ ಮಧ್ಯಂತರ ರಕ್ಷಣೆ ನೀಡಿದೆ.

ಅಸ್ಸಾಂ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಸ್ಥಾನದಿಂದ ಉಚ್ಚಾಟನೆಯಾಗಿರುವ ಅಂಗ್‌ಕಿತಾ ದತ್ತ ಅವರಿಗೆ ಮಾನಸಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಶ್ರೀನಿವಾಸ್ ಅವರಿಗೆ ಇದೇ 5ರಂದು ಗುವಾಹಟಿ ಹೈಕೋರ್ಟ್ ನಿರೀಕ್ಷಣಾ ಜಾಮೀನು ನಿರಾಕರಿಸಿತ್ತು.

ಹೈಕೋರ್ಟ್ ತೀರ್ಪಿನ ವಿರುದ್ಧ ಶ್ರೀನಿವಾಸ್ ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸಂಜಯ್ ಕರೋಲ್ ಅವರಿದ್ದ ದ್ವಿಸದಸ್ಯ ಪೀಠ ಇದರ ವಿಚಾರಣೆ ನಡೆಸಿತು.

‘ಪ್ರಕರಣದಲ್ಲಿ ಒಂದು ತಿಂಗಳು ತಡವಾಗಿ ಎಫ್‌ಐಆರ್ ದಾಖಲಾಗಿದೆ. ಹೀಗಾಗಿ ಮೇಲ್ಮನವಿದಾರರು ಮಧ್ಯಂತರ ರಕ್ಷಣೆಗೆ ಅರ್ಹರಾಗಿದ್ದಾರೆ. ಒಂದೊಮ್ಮೆ ಅವರನ್ನು ಬಂಧಿಸಿದ್ದೇ ಆದಲ್ಲಿ ₹50 ಸಾವಿರ ಮೊತ್ತದ ವೈಯಕ್ತಿಕ ಭದ್ರತೆ ಮೇಲೆ ನಿರೀಕ್ಷಣಾ ಜಾಮೀನು ನೀಡಿ ಬಿಡುಗಡೆಗೊಳಿಸಬೇಕು’ ಎಂದು ನ್ಯಾಯಪೀಠ ಆದೇಶಿಸಿತು.

‘ಮೇಲ್ಮನವಿದಾರರು ತನಿಖೆಗೆ ಸಹಕರಿಸಬೇಕು. ಇದೇ 22ರೊಳಗೆ ಪೊಲೀಸರ ಎದುರು ಹಾಜರಾಗಬೇಕು. ರಾಷ್ಟ್ರೀಯ ಮಹಿಳಾ ಆಯೋಗ ಕೈಗೊಳ್ಳಲಿರುವ ತನಿಖೆಗೂ ಸಹಕಾರ ನೀಡಬೇಕು’ ಎಂದು ಪೀಠ ಶ್ರೀನಿವಾಸ್ ಅವರಿಗೆ ತಾಕೀತು ಮಾಡಿತು.

ಶ್ರೀನಿವಾಸ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ಮಹಿಳೆಯು ದೂರು ದಾಖಲಿಸುವ ಮುನ್ನ ಮಾಧ್ಯಮಗಳಿಗೆ ಆರು ಬಾರಿ ಸಂದರ್ಶನ ನೀಡಿದ್ದಾರೆ. ಆಗ ಒಮ್ಮೆಯೂ ಲೈಂಗಿಕ ಕಿರುಕುಳದ ವಿಚಾರ ಪ್ರಸ್ತಾಪಿಸಿಲ್ಲ’ ಎಂದರು.

ಮಧ್ಯಪ್ರವೇಶಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ವಾದ ಮಂಡಿಸಲು ಮುಂದಾದರು. ಅವರನ್ನು ತಡೆದ ನ್ಯಾಯಪೀಠ ‘ನೀವು ಸಿಬಿಐ ಅಥವಾ ಇ.ಡಿ ಪರವಾಗಿ ನ್ಯಾಯಾಪೀಠಕ್ಕೆ ಹಾಜರಾಗಿದ್ದೀರಾ’ ಎಂದು ಪ್ರಶ್ನಿಸಿತು. ಆಗ ರಾಜು ‘ಅಸ್ಸಾಂ ಸರ್ಕಾರದ ಪರವಾಗಿ ವಾದ ಮಂಡಿಸಲು ಬಂದಿದ್ದೇನೆ’ ಎಂದರು.

ಇದಕ್ಕೆ ನ್ಯಾಯಮೂರ್ತಿ ಗವಾಯಿ, ‘ಹಾಗಾದರೆ ಸಿಬಿಐ ಅಥವಾ ಇ.ಡಿ ಸದ್ಯಕ್ಕೆ ಮಧ್ಯಪ್ರವೇಶಿಸಿಲ್ಲ ಎಂದಾಯ್ತು’ ಎಂದು ಹಾಸ್ಯದ ಧಾಟಿಯಲ್ಲಿ ಪ್ರತಿಕ್ರಿಯಿಸಿದರು.

ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠವು ಈ ಸಂಬಂಧ ಜುಲೈ 10ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಅಸ್ಸಾಂ ಸರ್ಕಾರ ಹಾಗೂ ಇತರರಿಗೆ ನೋಟಿಸ್ ಜಾರಿಗೊಳಿಸಿತು.

ಸಂಕ್ಷಿಪ್ತ ಸುದ್ದಿ

ಸಿಯುಇಟಿ–ಯುಜಿ: ಕೆಲವೆಡೆ ಪರೀಕ್ಷಾ ದಿನ ವಿಸ್ತರಣೆ

ನವದೆಹಲಿ (ಪಿಟಿಐ): ‘ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ದಿನಗಳನ್ನು ಕೆಲ ನಗರಗಳಲ್ಲಿ ಮತ್ತೆ ನಾಲ್ಕು ದಿನ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳಿಗೂ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಟಿಎ) ಬುಧವಾರ ತಿಳಿಸಿದೆ.

ಎರಡನೇ ಆವೃತ್ತಿಯ ಸಿಯುಇಟಿ–ಯುಜಿ ಪರೀಕ್ಷೆಯು ಇದೇ 21 ರಿಂದ 31ರವರೆಗೆ ನಿಗದಿಯಾಗಿದೆ.

‘ಕೆಲವೆಡೆ ನೋಂದಾಯಿತ ಅಭ್ಯರ್ಥಿಗಳ ಸಂಖ್ಯೆ ಅಧಿಕವಾಗಿದೆ. ಇಂತಹ ನಗರಗಳಲ್ಲಿ ಜೂನ್ 1, 2 ಹಾಗೂ ಜೂನ್ 5, 6ರಂದೂ ಪರೀಕ್ಷೆ ನಡೆಸಲಾಗುತ್ತದೆ. ಜೊತೆಗೆ ಮೀಸಲು ದಿನಗಳೂ (ಜೂನ್ 7 ಮತ್ತು 8) ಇರಲಿವೆ. ಈ ಸಂಬಂಧ ಎನ್‌ಟಿಎ ‘ಸಿಟಿ ಇಂಟಿಮೇಷನ್ ಸ್ಲಿಪ್’ ವಿತರಿಸಲಿದೆ’ ಎಂದು ಎನ್‌ಟಿಎ ಹಿರಿಯ ನಿರ್ದೇಶಕಿ (ಪರೀಕ್ಷೆ) ಸಾಧನಾ ಪರಶಾರ್ ಹೇಳಿದ್ದಾರೆ.

ಬಾಲಾಜಿ ದೇಗುಲ: ಮಿನಿ ಸ್ಕರ್ಟ್ ನಿಷೇಧ

ಲಖನೌ: ಉತ್ತರಪ್ರದೇಶದ ಮುಜಾಫ್ಫರ್ ನಗರ ಜಿಲ್ಲೆಯಲ್ಲಿರುವ ಪ್ರಸಿದ್ಧ ಬಾಲಾಜಿ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರು ರಿಪ್ಡ್ ಜೀನ್ಸ್, ಬರ್ಮುಡಾ ಅಥವಾ ಮಿನಿ ಸ್ಕರ್ಟ್‌ಗಳನ್ನು ಧರಿಸುವಂತಿಲ್ಲ. ಅಂತಹ ಉಡುಪುಗಳು ಭಕ್ತರ ಗಮನವನ್ನು ಬೇರೆಡೆಗೆ ತಿರುಗಿಸುತ್ತದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಹೇಳಿದೆ.

ಡಿಕೆಶಿ ವಿರುದ್ಧ ಆದಾಯ ಮೀರಿ ಆಸ್ತಿ ಗಳಿಸಿರುವ ಪ್ರಕರಣ

ಸಿಬಿಐ ಅರ್ಜಿ ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ಆದಾಯ ಮೀರಿ ಆಸ್ತಿ ಗಳಿಸಿರುವ ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆ ನಡೆಸುವುದಕ್ಕೆ ಮಧ್ಯಂತರ ತಡೆ ನೀಡಿರುವ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಬುಧವಾರ ಮುಂದೂಡಿದೆ.

ಡಿ.ಕೆ.ಶಿವಕುಮಾರ್ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ಹೈಕೋರ್ಟ್ ಎದುರು ಇದೇ 23ರಂದು ಈ ಕುರಿತ ವಿಚಾರಣೆ ನಿಗದಿಯಾಗಿದೆ’ ಎಂದು ತಿಳಿಸಿದರು.

ಶಿವಕುಮಾರ್

ಆಗ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸಂಜಯ್ ಕರೋಲ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಅರ್ಜಿಯ ವಿಚಾರಣೆಯನ್ನು ಜುಲೈ 14ಕ್ಕೆ ಮುಂದೂಡಿರುವುದಾಗಿ ತಿಳಿಸಿತು.

ಸಿಬಿಐ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ‘ಒಂದೊಮ್ಮೆ ಮಧ್ಯಂತರ ಆದೇಶವನ್ನು ಮುಂದುವರಿಸಿದ್ದೇ ಆದರೆ ತನಿಖಾ ಸಂಸ್ಥೆಯು ಪೂರ್ವಗ್ರಹಕ್ಕೆ ಒಳಗಾಗಬಹುದು’ ಎಂದರು.

ಇದಕ್ಕೆ ಸಿಂಘ್ವಿ, ‘ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ಇದ್ದಿದ್ದರಿಂದ ಸಿಬಿಐ ಈ ಪ್ರಕರಣದ ಸಂಬಂಧ ಅರ್ಜಿ ಸಲ್ಲಿಸಿತ್ತು’ ಎಂದು ಹೇಳಿದರು.

‘ನಿಮಗೇನಾದರೂ ತುರ್ತು ಇದ್ದರೆ ಸುಪ್ರೀಂ ಕೋರ್ಟ್‌ನ ರಜಾಕಾಲದ ಪೀಠದ ಮೊರೆ ಹೋಗಬಹುದು’ ಎಂದು ಸಿಬಿಐ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿತು.

ಜೀವ ಬೆದರಿಕೆ: ಭಗವಂತ ಖೂಬಾ ವಿರುದ್ಧ ಪ್ರಭು ಚವಾಣ್ ಆರೋಪ

ಪ್ರಜಾವಾಣಿ ವಾರ್ತೆ

ಬೀದರ್: ‘ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹಾಗೂ ಅವರ ತಂಡದಿಂದ ನನಗೆ ಜೀವ ಭಯ ಇದೆ. ಈ ಬಗ್ಗೆ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸುವೆ’ ಎಂದು ಔರಾದ್‌ನ ಬಿಜೆಪಿ ವಿಜೇತ ಅಭ್ಯರ್ಥಿ ಪ್ರಭು ಚವಾಣ್ ಹೇಳಿದರು.

‘ಖೂಬಾ ಅವರು ನನಗೆ ಜಾತಿ ನಿಂದನೆ ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ಸೋಲಿಸಿ, ಕಬ್ಬು ಕಟಾವಿಗೆ ಕಳುಹಿಸಿಕೊಡುವುದಾಗಿ ತಮ್ಮ ಸಮೀಪವರ್ತಿಗಳ ಬಳಿ ಹೇಳಿಕೊಂಡಿದ್ದಾರೆ’ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.



‘ಬಿಜೆಪಿಯ ಸಂಸದ ಮತ್ತು ಸಚಿವರಾಗಿರುವ ಅವರು ಔರಾದ್ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ನನ್ನನ್ನು ಸೋಲಿಸಲು ಪ್ರಯತ್ನಿಸಿದರು. ಆದರೆ, ಅಭಿವೃದ್ಧಿ ಕೆಲಸ ಹಾಗೂ ಜನರ ಆಶೀರ್ವಾದದಿಂದ ಪುನರಾಯ್ಕೆಯಾದೆ’ ಎಂದರು.

ಇದರ ಕುರಿತು ಪ್ರತಿಕ್ರಿಯೆಗಾಗಿ ಸಂಪರ್ಕಿಸಿದಾಗ, ಭಗವಂತ ಖೂಬಾ ಅವರು ಲಭ್ಯವಾಗಲಿಲ್ಲ.

ರಿಲೀ ರುಸೊ ಅಬ್ಬರದ ಆಟ; ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 15 ರನ್‌ಗಳ ಗೆಲುವು

ಪಂಜಾಬ್ ಪ್ಲೇ ಆಫ್ ಹಾದಿ ಕಠಿಣ

ಧರ್ಮಶಾಲಾ (ಪಿಟಿಐ): ರಿಲೀ ರುಸೊ ಅವರ ಅಬ್ಬರದ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ, ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು 15 ರನ್‌ಗಳಿಂದ ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಡೇವಿಡ್ ವಾರ್ನರ್ ಬಳಗ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 213 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ರುಸೊ ಕೇವಲ 37 ಎಸೆತಗಳಲ್ಲಿ ಅಜೇಯ 82 ರನ್ ಗಳಿಸಿದರು.

ಪಂಜಾಬ್ ತಂಡ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 198 ರನ್ ಗಳಿಸಿತು. ಲಿಯಾಮ್ ಲಿವಿಂಗ್‌ಸ್ಟೋನ್ (94 ರನ್, 48 ಎ.) ಅವರ ವೀರೋಚಿತ ಹೋರಾಟ ವ್ಯರ್ಥವಾಯಿತು.

ಈಗಾಗಲೇ 'ಪ್ಲೇ ಆಫ್' ರೇಸ್‌ನಿಂದ ಹೊರಬಿದ್ದಿರುವ ಡೆಲ್ಲಿ ತಂಡ, ಪಂಜಾಬ್ ತಂಡದ ಪ್ಲೇ ಆಫ್ ಪ್ರವೇಶದ ಹಾದಿಯನ್ನು ಮತ್ತಷ್ಟು ಕಠಿಣಗೊಳಿಸಿತು. ರನ್‌ರೇಟ್‌ನಲ್ಲಿ (–0.308) ಹಿಂದೆ ಉಳಿದುಕೊಂಡಿರುವ ಧವನ್ ಬಳಗ ಅಂತಿಮ ಪಂದ್ಯ ಗೆದ್ದರೂ, ಮುಂದಿನ ಹಂತ ಪ್ರವೇಶಿಸುವ ಸಾಧ್ಯತೆ ತುಂಬಾ ಕಡಿಮೆ.

ಸವಾಲಿನ ಗುರಿ ಬೆನ್ನಟ್ಟಿದ ಪಂಜಾಬ್ ತಂಡವು ಖಾತೆ ತೆರೆಯುವ ಮುನ್ನವೇ ಧವನ್ ವಿಕೆಟ್ ಕಳೆದುಕೊಂಡಿತು. ಅವರು ಇಶಾಂತ್ ಶರ್ಮಾ ಬೌಲಿಂಗ್‌ನಲ್ಲಿ ಅಮನ್ ಹಕೀಮ್‌ಗೆ ಕ್ಯಾಚಿತ್ತರು.

ಪ್ರಭಸಿಮ್ರನ್ (22) ಮತ್ತು ಅಥರ್ವ ತೈಡೆ (55) ಎರಡನೇ ವಿಕೆಟ್‌ಗೆ 50 ರನ್ ಸೇರಿಸಿದರು. ಪ್ರಭಸಿಮ್ರನ್ ಔಟಾದ ಬಳಿಕ ಬಂದ ಲಿವಿಂಗ್‌ಸ್ಟೋನ್ ಮತ್ತು ತೈಡೆ ಉತ್ತಮವಾಗಿ ಆಡಿದರು. ಮೂರನೇ ವಿಕೆಟ್‌ಗೆ 78 ರನ್‌ಗಳು ಬಂದವು. ಈ ವೇಳೆ ತೈಡೆ ಗಾಯಗೊಂಡು ಹೊರನಡೆದರು. ಇದು ಪಂಜಾಬ್‌ಗೆ ಹಿನ್ನಡೆ ಉಂಟುಮಾಡಿತು. ಬಳಿಕ ಬಂದ ಎಲ್ಲ ಬ್ಯಾಟರ್‌ಗಳೂ ವಿಫಲರಾದರು. ಲಿಯಾಮ್ ಕೊನೆಯವರೆಗೂ ಹೋರಾಡಿದರೂ ಗೆಲುವ ದಕ್ಕಲಿಲ್ಲ. ಇಶಾಂತ್ ಶರ್ಮಾ ಮತ್ತು ಎನ್ರಿಕ್ ನಾಕಿಯಾ ತಲಾ ಎರಡು ವಿಕೆಟ್ ಪಡೆದರು.

ಉತ್ತಮ ಆರಂಭ: ಇದಕ್ಕೂ ಮುನ್ನ ಟಾಸ್ ಗೆದ್ದ ಪಂಜಾಬ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಡೆಲ್ಲಿ ತಂಡದ ಆರಂಭಿಕ ಜೋಡಿ ಡೇವಿಡ್ ವಾರ್ನರ್ (46; 31ಎ, 4X5, 6X2) ಹಾಗೂ ಪೃಥ್ವಿ ಶಾ (54; 38ಎ, 4X7, 6X1) ಉತ್ತಮ ಅಡಿಪಾಯ ಹಾಕಿದರು. 10 ಓವರ್‌ಗಳಲ್ಲಿ 94 ರನ್‌ಗಳ ಜೊತೆಯಾಟವಾಡಿದರು.

ಹನ್ನೊಂದನೇ ಓವರ್‌ನಲ್ಲಿ ಸ್ಯಾಮ್ ಕರನ್ ಅವರು ವಾರ್ನರ್ ವಿಕೆಟ್ ಗಳಿಸುವ ಮೂಲಕ ಜೊತೆಯಾಟ ಮುರಿದರು. ವಾರ್ನರ್ ಅಲ್ಪ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಅರ್ಧಶತಕ ಪೂರೈಸಿ ಆಟವಾಡುತ್ತಿದ್ದ ಪೃಥ್ವಿ ಶಾ ಅವರ ವಿಕೆಟ್ ಕೂಡ ಸ್ಯಾಮ್ ಪಾಲಾಯಿತು. ಆದರೆ ಇದರ ನಂತರದ ಆಟದಲ್ಲಿ ಪಂಜಾಬ್ ಪಾಳೆಯಕ್ಕೆ ವಿಕೆಟ್ ಗಳಿಸುವ ಅವಕಾಶ ಸಿಗಲಿಲ್ಲ.

ರಿಲೀ ರುಸೊ ಹಾಗೂ ಫಿಲಿಪ್ ಸಾಲ್ಟ್ ಅವರ ಅಬ್ಬರದ ಜೊತೆಯಾಟದ ಮುಂದೆ ಬೌಲರ್‌ಗಳು ಬಸವಳಿದರು. ಕೊನೆಯ ಐದು ಓವರ್‌ಗಳಲ್ಲಿ ಇವರಿಬ್ಬರೂ ಸೇರಿ 65 ರನ್‌ಗಳನ್ನು ಗಳಿಸಿದರು. ಇದರಿಂದಾಗಿ ತಂಡದ ಮೊತ್ತವು ಇನ್ನೂರರ ಗಡಿ ದಾಟಿತು.

ದಕ್ಷಿಣ ಆಫ್ರಿಕಾದ ರುಸೊ ಅವರು ಯಾವುದೇ ಹಂತದಲ್ಲಿಯೂ ವಿಚಲಿತರಾಗದೇ ಇನಿಂಗ್ಸ್ ಕಟ್ಟಿದರು. ಸಾಲ್ಟ್ 14 ಎಸೆತಗಳಲ್ಲಿ 26 ರನ್ ಗಳಿಸಿದರು. ಅದರಲ್ಲಿ ಎರಡು ಬೌಂಡರಿ ಹಾಗೂ ಎರಡು ಸಿಕ್ಸರ್‌ಗಳಿದ್ದವು.

ಈ ಇನಿಂಗ್ಸ್‌ನಲ್ಲಿ ಒಟ್ಟು 11 ಸಿಕ್ಸರ್ ಹಾಗೂ 20 ಬೌಂಡರಿಗಳು ದಾಖಲಾದವು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ರಿಲೀ ರುಸೊ ಮತ್ತು ಫಿಲ್ ಸಾಲ್ಟ್ –ಎಎಫ್‌ಪಿ ಚಿತ್ರ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	13	9	4	0	18	0.835
ಚೆನ್ನೈ	13	7	5	1	15	0.381
ಲಖನೌ	13	7	5	1	15	0.304
ಮುಂಬೈ	13	7	6	0	14	-0.128
ಬೆಂಗಳೂರು	12	6	6	0	12	0.166
ರಾಜಸ್ಥಾನ	13	6	7	0	12	0.140
ಕೋಲ್ಕತ್ತ	13	6	7	0	12	-0.256
ಪಂಜಾಬ್	13	6	7	0	12	-0.308
ಡೆಲ್ಲಿ	13	5	8	0	10	-0.572
ಹೈದರಾಬಾದ್	12	4	8	0	8	-0.575

ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 2ಕ್ಕೆ213 (20 ಓವರ್‌ಗಳಲ್ಲಿ)

ವಾರ್ನರ್ ಸಿ ಧವನ್ ಬಿ ಸ್ಯಾಮ್ 46 (31ಎ, 4X5, 6X2)
ಪೃಥ್ವಿ ಸಿ ಅಥರ್ವ ಬಿ ಸ್ಯಾಮ್ 54 (38ಎ, 4X7, 6X1)
ರಿಲೀ ಔಟಾಗದೆ 82 (37ಎ, 4X6, 6X6)
ಸಾಲ್ಟ್ ಔಟಾಗದೆ 26 (14ಎ, 4X2, 6X2)
ಇತರೆ: 5 (ವೈಡ್ 5)
ವಿಕೆಟ್ ಪತನ: 1–94 (ಡೇವಿಡ್ ವಾರ್ನರ್; 10.2), 2–148 (ಪೃಥ್ವಿ ಶಾ; 14.6)
ಬೌಲಿಂಗ್: ಸ್ಯಾಮ್ ಕರನ್ 4–0–36–2, ಕಗಿಸೊ ರಬಾಡ 3–0–36–0, ಅರ್ಷದೀಪ್ ಸಿಂಗ್ 2–0–21–0, ನೇಥನ್ ಎಲಿಸ್ 4–0–46–0, ರಾಹುಲ್ ಚಾಹರ್ 4–0–35–0, ಹರಪ್ರೀತ್ ಬ್ರಾರ್ 3–0–39–0

ಪಂಜಾಬ್ ಕಿಂಗ್ಸ್ 8ಕ್ಕೆ 198 (20 ಓವರ್‌ಗಳಲ್ಲಿ)

ಪ್ರಭಸಿಮ್ರನ್ ಸಿ ಧುಲ್ ಬಿ ಅಕ್ಷರ್ 22 (19 ಎ., 4X4)
ಧವನ್ ಸಿ ಅಮನ್ ಬಿ ಇಶಾಂತ್ 0 (1 ಎ)
ಅಥರ್ವ ಗಾಯಗೊಂಡು ನಿವೃತ್ತಿ 55 (42 ಎ., 4X5, 6X2)
ಲಿಯಾಮ್ ಸಿ ಪಟೇಲ್ ಬಿ ಇಶಾಂತ್ 94 (48 ಎ., 4X5, 6X9)
ಜಿತೇಶ್ ಸಿ ಖಲೀಲ್ ಬಿ ನಾಕಿಯಾ 0 (3 ಎ)
ಶಾರುಕ್ ಸಿ ಪಟೇಲ್ ಬಿ ಖಲೀಲ್ 6 (3 ಎ., 6X1)
ಕರನ್ ಬಿ ನಾಕಿಯಾ 11 (5 ಎ., 4X1, 6X1)
ಹರ್‌ಪ್ರೀತ್ ರನೌಟ್ (ಸಾಲ್ಟ್/ ನಾಕಿಯಾ) 0 (1 ಎ) ರಾಹುಲ್ ಔಟಾಗದೆ 0 (0 ಎ)
ಇತರೆ: 10 (ಲೆಗ್ ಬೈ 6, ನೋಬಾಲ್ 2, ವೈಡ್ 2)
ವಿಕೆಟ್ ಪತನ: 1–0 (ಶಿಖರ್ ಧವನ್; 1.1), 2–50 (ಪ್ರಭಸಿಮ್ರನ್ ಸಿಂಗ್; 6.4), 3–128 (ಅಥರ್ವ ತೈಡೆ; 14.6), 4–129 (ಜಿತೇಶ್ ಶರ್ಮಾ; 15.4), 5–147 (ಶಾರುಕ್ ಖಾನ್; 16.3), 6–180 (ಸ್ಯಾಮ್ ಕರನ್; 18.2), 7–180 (ಹರ್‌ಪ್ರೀತ್ ಬ್ರಾರ್; 18.3), 8–198 (ಲಿಯಾಮ್ ಲಿವಿಂಗ್‌ಸ್ಟೋನ್; 19.6)
ಬೌಲಿಂಗ್: ಖಲೀಲ್ ಅಹಮದ್ 3–1–20–1, ಇಶಾಂತ್ ಶರ್ಮಾ 3–0–36–2, ಎನ್ರಿಕ್ ನಾಕಿಯಾ 4–0–36–2, ಮುಕೇಶ್ ಕುಮಾರ್ 4–0–52–0, ಅಕ್ಷರ್ ಪಟೇಲ್ 3–0–27–1, ಕುಲದೀಪ್ ಯಾದವ್ 3–0–21–0
ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 15 ರನ್ ಗೆಲುವು

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	631

ಕ್ರಿಕೆಟ್: ಶಶಾಂಕ್, ವಿಷ್ಣು ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಪಿ.ಶಶಾಂಕ್ (127) ಮತ್ತು ಎ.ವಿಷ್ಣು (100) ಅವರು ಗಳಿಸಿದ ಶತಕಗಳ ನೆರವಿನಿಂದ ಸಿಲಿಕಾನ್ ಕ್ರಿಕೆಟ್ ಅಕಾಡೆಮಿ ತಂಡ, ಟೈಗರ್ ಕಪ್ ಕ್ರಿಕೆಟ್ ಟೂರ್ನಿಯಲ್ಲಿ (16 ವರ್ಷದೊಳಗಿನವರು) ಜಯ ಸಾಧಿಸಿತು.

ಬಿ.ಕೆ. ಕ್ರಿಕೆಟ್ ಮೈದಾನದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಸಿಲಿಕಾನ್ ಅಕಾಡೆಮಿ ತಂಡ 199 ರನ್‌ಗಳಿಂದ ಸ್ಕೂಲ್ ಆಫ್ ಕ್ರಿಕೆಟ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಸಿಲಿಕಾನ್ ಕ್ರಿಕೆಟ್ ಅಕಾಡೆಮಿ 30 ಓವರ್‌ಗಳಲ್ಲಿ 1 ವಿಕೆಟ್‌ಗೆ 301 (ಎಂ.ಪಿ.ಶಶಾಂಕ್ 127, ಎ.ವಿಷ್ಣು 100, ಶಿವು 43) ಸ್ಕೂಲ್ ಆಫ್ ಕ್ರಿಕೆಟ್ 29 ಓವರ್‌ಗಳಲ್ಲಿ 102 (ಯದು ನಾರಾಯಣನ್ 38, ಮದನ್ ಪಾಟೀಲ್ 11ಕ್ಕೆ 2) ಫಲಿತಾಂಶ: ಸಿಲಿಕಾನ್ ಅಕಾಡೆಮಿ ತಂಡಕ್ಕೆ 199 ರನ್ ಗೆಲುವು

ಡಿಪಿಎಸ್ ಸೌತ್ 27.3 ಓವರ್‌ಗಳಲ್ಲಿ 161 (ಸುಜಯ್ ಭೂಷಣ್ 69, ಎಚ್.ಎನ್.ಕಾರ್ತಿಕ್ 30, ಆಕರ್ಷ್ 24, ಸಕ್ಷಮ್ ಅಗರವಾಲ್ 23ಕ್ಕೆ 3, ಗರ್ವ್ ರಜಪೂತ್ 12ಕ್ಕೆ 3) ಆರ್‌ಎಕ್ಸ್‌ಸಿಎ 30 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 148 (ಕೌಸ್ತುಭ್ ಗುಪ್ತಾ 56, ಎಚ್.ಎನ್.ಕಾರ್ತಿಕ್ 28ಕ್ಕೆ 3) ಫಲಿತಾಂಶ: ಡಿಪಿಎಸ್ ಸೌತ್‌ಗೆ 13 ರನ್ ಜಯ

ಆರ್‌ಸಿಬಿಗೆ ಜಯ ಅನಿವಾರ್ಯ

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಹಣಾಹಣಿ ಇಂದು

ಹೈದರಾಬಾದ್ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಈಗ ಎರಡು ಪಂದ್ಯಗಳು ಬಾಕಿ ಉಳಿದಿವೆ. ಪ್ಲೇ ಆಫ್ ಪ್ರವೇಶಿಸಲು ಈ ಎರಡೂ ಹಣಾಹಣಿಗಳಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ.

ಈ ಪೈಕಿ ಮೊದಲ ಸವಾಲು ಗುರುವಾರ ಎದುರಾಗಲಿದೆ. ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಫಫ್ ಡುಪ್ಲೆಸಿ ಬಳಗವು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಆದರೆ ಬೆಂಗಳೂರು ತಂಡವು ನಾಯಕ ಡುಪ್ಲೆಸಿ, ವಿರಾಟ್ ಕೊಹ್ಲಿ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಬ್ಯಾಟಿಂಗ್ ಮೇಲೆ ಅವಲಂಬಿತವಾಗಿದೆ.

ಫಫ್ (631 ರನ್) ಈ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ವಿರಾಟ್ ಕೂಡ 438 ರನ್‌ಗಳನ್ನು ಕಲೆಹಾಕಿದ್ದಾರೆ. ಆದರೆ ಕಳೆದೆರಡು ಪಂದ್ಯಗಳಲ್ಲಿ ಅವರು ಮಿಂಚಿಲ್ಲ. ಇದು ತಂಡಕ್ಕೆ ಚಿಂತೆಯ ವಿಷಯವಾಗಿದೆ. ಅವರು ಇಲ್ಲಿ ಲಯಕ್ಕೆ ಮರಳುವ ಭರವಸೆ ಇದೆ. ಮ್ಯಾಕ್ಸ್‌ವೆಲ್ ಅವರೂ 384 ರನ್‌ಗಳನ್ನು ಪೇರಿಸಿದ್ದಾರೆ.

ಆದರೆ ಮಧ್ಯಮಕ್ರಮಾಂಕದ ಬ್ಯಾಟರ್‌ಗಳು ಇನ್ನೂ ನಿರೀಕ್ಷೆಗೆ ತಕ್ಕಂತೆ ಆಡುತ್ತಿಲ್ಲ. ಬೌಲರ್‌ಗಳಲ್ಲಿ ಮೊಹಮ್ಮದ್ ಸಿರಾಜ್, ವೇಯ್ನ್ ಪಾರ್ನೆಲ್ ಮತ್ತು ಬ್ರೇಸ್‌ವೆಲ್ ಮೇಲೆ ನಿರೀಕ್ಷೆ ಇಡಬಹುದು. ಕಳೆದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು 112 ರನ್‌ಗಳಿಂದ ಆರ್‌ಸಿಬಿ ಜಯಿಸಲು ಪಾರ್ನೆಲ್ ಕಾರಣರಾಗಿದ್ದರು. ತನ್ನಲ್ಲಿರುವ ಸೀಮಿತ ಬಲದೊಂದಿಗೇ ತಂಡವು ಪ್ಲೇ ಆಫ್ ಪ್ರವೇಶಿಸಲು ಪ್ರಯತ್ನಿಸಬೇಕಿದೆ.

ವಿರಾಟ್ ಕೊಹ್ಲಿ ಹಾಗೂ ಫಫ್ ಡುಪ್ಲೆಸಿ

ಆರ್‌ಸಿಬಿ 12 ಪಂದ್ಯಗಳನ್ನು ಆಡಿದೆ. ಅದರಲ್ಲಿ ಆರು ಜಯಿಸಿ, ಅಷ್ಟೇ ಸಂಖ್ಯೆಯ ಪಂದ್ಯಗಳನ್ನು ಸೋತಿದೆ. ಇದರಿಂದಾಗಿ 12 ಅಂಕಗಳನ್ನು ಗಳಿಸಿದೆ. ಇನ್ನೆರಡು ಪಂದ್ಯಗಳಲ್ಲಿ ಜಯಿಸಿದರೆ, 16 ಅಂಕಗಳೊಂದಿಗೆ ಪ್ಲೇ ಆಫ್ ಪ್ರವೇಶಿಸಲು ಹಾದಿ ಸುಗಮವಾಗಬಹುದು. ಏಕೆಂದರೆ ಈಗಾಗಲೇ 18 ಅಂಕ ಗಳಿಸಿರುವ ಗುಜರಾತ್ ಟೈಟನ್ಸ್ ನಾಲ್ಕರ ಘಟ್ಟ ಪ್ರವೇಶಿಸಿದೆ.

ಎರಡು ಹಾಗೂ ಮೂರನೇ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಲಖನೌ ಸೂಪರ್ ಜೈಂಟ್ಸ್ ತಲಾ 15 ಅಂಕ ಗಳಿಸಿವೆ. ನಾಲ್ಕನೇ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ 14 ಅಂಕಗಳಿಸಿದೆ. ಈ ಎಲ್ಲ ತಂಡಗಳೂ ತಲಾ 13 ಪಂದ್ಯಗಳಲ್ಲಿ ಆಡಿವೆ. ಒಂದೊಮ್ಮೆ ಆರ್‌ಸಿಬಿಯು ಎರಡರಲ್ಲಿ ಒಂದು ಪಂದ್ಯ ಸೋತರೆ, ಮುಂಬೈ ಇಂಡಿಯನ್ಸ್ ತಂಡವು 21ರಂದು ಸನ್‌ರೈಸರ್ಸ್ ಎದುರು ಪ ರಾ ಭ ವ ಗೊ ಳ್ಳು ವು ದ ನ್ನು ಕಾಯಬೇಕು.

ಏಡನ್ ಮರ್ಕರಂ ನಾಯಕತ್ವದ ಹೈದರಾಬಾದ್‌ಗೆ ಯಾವ ಒತ್ತಡವೂ ಇಲ್ಲ. ಏಕೆಂದರೆ ತಂಡವು ಈಗಾಗಲೇ ನಾಲ್ಕರ ಘಟ್ಟದ ಹಾದಿ ಯಿಂದ ಹೊರಬಿದ್ದಿದೆ. ಆದರೆ ಆರ್‌ಸಿಬಿಯ ಓಟಕ್ಕೆ ಅಡ್ಡಗಾಲು ಹಾಕುವ ಸಾಮರ್ಥ್ಯವನ್ನಂತೂ ಹೊಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನೆಮಾ ಆ್ಯಪ್

ಕುಸ್ತಿಪಟುಗಳು ಹನುಮಾನ್ ಮಂದಿರಕ್ಕೆ ಪಾದಯಾತ್ರೆ ನಡೆಸಿದರು –ಪಿಟಿಐ ಚಿತ್ರ

ಹನುಮಾನ್ ಮಂದಿರಕ್ಕೆ ಕುಸ್ತಿಪಟುಗಳ ಪಾದಯಾತ್ರೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಕುಸ್ತಿ ಪಟುಗಳು ಮತ್ತು ಅವರ ಬೆಂಬಲಿಗರು ಜಂತರ್ ಮಂಥರ್‌ನಿಂದ ಕನ್ನಾಟ್‌ಪ್ಲೇಸ್‌ನಲ್ಲಿರುವ ಹನುಮಾನ್ ಮಂದಿರಕ್ಕೆ ಮಂಗಳವಾರ ಪಾದಯಾತ್ರೆ ನಡೆಸಿದರು.

ಈ ಸಂದರ್ಭದಲ್ಲಿ ಭೀಮ್ ಆರ್ಮಿ ಅಧ್ಯಕ್ಷ ಚಂದ್ರಶೇಖರ್ ಆಜಾದ್ ಜೊತೆ ನೂರಾರು ಬೆಂಬಲಿಗರು ಕುಸ್ತಿಪಟುಗಳ ಜೊತೆಗೂಡಿದರು. ಬುಧವಾರ ಅವರು ಬಾಂಗ್ಲಾಸಾಹಿಬ್ ಗುರುದ್ವಾರಕ್ಕೆ ಭೇಟಿ ನೀಡುವ ಕಾರ್ಯಕ್ರಮವಿತ್ತು.

ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ಒದಗಿಸುವಂತೆ ಖಾತರಿಪಡಿಸಬೇಕು ಎಂದು ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತ ಬಜರಂಗ್ ಪೂನಿಯಾ, ದೇಗುಲ ದರ್ಶನದ ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮನವಿ ಮಾಡಿದರು.

'ನಮ್ಮ ಧ್ವನಿ ಪ್ರಧಾನಿ ಮೋದಿ ಅವರನ್ನು ತಲುಪಿಲ್ಲ. ಅವರು ಮತ್ತು ಗೃಹ ಸಚಿವರು ನಮಗೆ ನ್ಯಾಯ ಒದಗಿಸಬೇಕು. ಅವರು 'ಬೇಟಿ ಬಚಾವೊ, ಬೇಟಿ ಪಢಾವೊ' ಎಂಬ ಘೋಷಣೆ ನೀಡಿದವರು. ಹೀಗಾಗಿ ಈ ಹೆಣ್ಣು ಮಕ್ಕಳಿಗೆ ನ್ಯಾಯ ಒದಗಿಸಬೇಕು' ಎಂದು ಹೇಳಿದರು.

ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿ

ಆಸ್ಟ್ರೇಲಿಯಾ ಮಣಿಸಿದ ಭಾರತ

ಸುಜೌ, ಚೀನಾ (ಪಿಟಿಐ): ಭಾರತ ತಂಡ ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 4–1 ರಲ್ಲಿ ಮಣಿಸಿ ಅಲ್ಪ ಸಮಾಧಾನಪಟ್ಟುಕೊಂಡಿತು.

'ಸಿ' ಗುಂಪಿನ ಮೊದಲ ಎರಡು ಪಂದ್ಯಗಳಲ್ಲಿ ಚೀನಾ ತೈಪೆ ಮತ್ತು ಮಲೇಷ್ಯಾ ತಂಡಗಳ ಎದುರು ಕ್ರಮವಾಗಿ 1–4 ಹಾಗೂ 0–5 ರಲ್ಲಿ ಸೋತಿದ್ದ ಭಾರತ ತಂಡ ಈಗಾಗಲೇ ನಾಕೌಟ್ ರೇಸ್‌ನಿಂದ ಹೊರಬಿದ್ದಿತ್ತು.

ಆಸ್ಟ್ರೇಲಿಯಾ ವಿರುದ್ಧದ ಹಣಾಹಣಿಯಲ್ಲಿ ಮೊದಲ ಪಂದ್ಯವನ್ನು ಸೋತರೂ, ಭಾರತದ ಆಟಗಾರರು ಬಳಿಕ ಪುಟಿದೆದ್ದು ನಿಂತರು. ಮೊದಲು ಕಣಕ್ಕಿಳಿದ ಮಿಶ್ರ ಡಬಲ್ಸ್ ಜೋಡಿ ಸಾಯಿ ಪ್ರತೀಕ್– ತನೀಷಾ ಕ್ರಾಸ್ಟೊ 21–17, 14–21, 18–21 ರಲ್ಲಿ ಕೆನೆತ್ ಜೆ– ಗ್ರೊನ್ಯಾ ಸಮರ್‌ವಿವ್ ಎದುರು ಸೋತಿತು.

ಬಳಿಕ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಎಚ್.ಎಸ್. ಪ್ರಣಯ್ 21–8, 21–8 ರಲ್ಲಿ ಜಾಕ್ ಯು ಅವರನ್ನು ಮಣಿಸಿ 1–1 ರಲ್ಲಿ ಸಮಬಲಕ್ಕೆ ಕಾರಣರಾದರು. ಬಳಿಕದ ಮೂರೂ ಪಂದ್ಯಗಳನ್ನು ಭಾರತ ಗೆದ್ದುಕೊಂಡಿತು.

ಪಿ.ವಿ. ಸಿಂಧು ಬದಲು ಮಹಿಳೆಯರ ಸಿಂಗಲ್ಸ್‌ನಲ್ಲಿ ಆಡಿದ ಅನುಪಮಾ ಉಪಾಧ್ಯಾಯ 21–16, 21–18 ರಲ್ಲಿ ಟಿಫಾನಿ ಹೊ ಅವರನ್ನು ಸೋಲಿಸಿದರು. ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್– ಧ್ರುವ್ ಕಪಿಲಾ ಜೋಡಿ 21–11, 21–12 ರಲ್ಲಿ ರಿಕಿ ಟಾಂಗ್– ರಿಯಾನೆ ವಾಂಗ್ ಎದುರು ಗೆದ್ದಿತು.

ಕೊನೆಯಲ್ಲಿ ನಡೆದ ಮಹಿಳೆಯರ ಡಬಲ್ಸ್‌ನಲ್ಲಿ ತನೀಷಾ ಕ್ರಾಸ್ಟೊ– ಅಶ್ವಿನಿ ಪೊನ್ನಪ್ಪ 21–19, 21–13 ರಲ್ಲಿ ಕೈಟ್ಲಿನ್ ಎಯಾ– ಏಂಜೆಲಾ ಯು ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಗೆದ್ದ ಎಚ್.ಎಸ್.ಪ್ರಣಯ್

ಟಿಟಿ: ಯಶಸ್ವಿನಿಗೆ ಎರಡು ಚಿನ್ನ

ಇಟಾನಗರ (ಪಿಟಿಐ): ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಇಲ್ಲಿ ನಡೆಯುತ್ತಿರುವ ದಕ್ಷಿಣ ಏಷ್ಯಾ ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ವಿಭಾಗಗಳಲ್ಲಿ ಚಿನ್ನ ಗೆದ್ದರು.

ಬುಧವಾರ ನಡೆದ ಬಾಲಕಿಯರ 19 ವರ್ಷದೊಳಗಿನ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಯಶಸ್ವಿನಿ ಮತ್ತು ಹರಿಯಾಣದ ಸುಹಾನಾ ಸೈನಿ ಜೋಡಿ 11-8, 11-5, 11-4 ರಲ್ಲಿ ಮಾಲ್ಡೀವ್ಸ್‌ನ ಮಿಷ್ಕಾ ಮೊಹಮ್ಮದ್ ಇಬ್ರಾಹಿಂ– ಫಾತಿಮತ್ ಧೀಮಾ ಅಲಿ ಅವರನ್ನು ಮಣಿಸಿ ಚಾಂಪಿಯನ್ ಆಯಿತು. ಮಿಶ್ರ ಡಬಲ್ಸ್‌ನಲ್ಲಿ ಯಶಸ್ವಿನಿ– ಪಾಯಸ್ ಜೈನ್ ಜೋಡಿ 11-4, 11-2, 6-11, 11-8 ಗೇಮ್‌ಗಳಿಂದ ಮಾಲ್ಡೀವ್ಸ್‌ನ ಅಖಿಯಾರ್ ಅಹ್ಮದ್ ಖಾಲಿದ್– ಫಾತಿಮತ್ ಧೀಮಾ ಅಲಿ ಎದುರು ಗೆದ್ದಿತು.

ಯಶಸ್ವಿನಿ ಘೋರ್ಪಡೆ

ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಸುಹಾನಾ 11-8, 11-9, 13-11, 6-11, 11-8 ರಲ್ಲಿ ಯಶಸ್ವಿನಿ ಅವರನ್ನು ಸೋಲಿಸಿದರು.

ಕೊನೆಯ ದಿನ ಪಣಕ್ಕಿಟ್ಟಿದ್ದ ಎಲ್ಲ ಚಿನ್ನದ ಪದಕಗಳನ್ನು ಭಾರತದ ಸ್ಪರ್ಧಿಗಳು ಗೆದ್ದುಕೊಂಡರು.

ಆರ್ಚರಿ: ಕ್ವಾರ್ಟರ್ ಫೈನಲ್‌ನಲ್ಲಿ ಎಡವಿದ ಭಾರತ

ಶಾಂಘೈ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ವಿಶ್ವಕಪ್ ಕಪ್ ಸ್ಟೇಜ್–2 ಆರ್ಚರಿಯ ಕಾಂಪೌಂಡ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದವು.

ಜ್ಯೋತಿ ಸುರೇಖಾ ವೆನ್ನಂ, ಅದಿತಿ ಸ್ವಾಮಿ ಮತ್ತು ಅವನೀತ್ ಕೌರ್ ಅವರನ್ನೊಳಗೊಂಡ ಭಾರತ ಮಹಿಳಾ ತಂಡ ಬುಧವಾರ ನಡೆದ ಪಂದ್ಯದಲ್ಲಿ 228–231 ರಲ್ಲಿ ಟರ್ಕಿಯ ಎದುರು ಪರಾಭವಗೊಂಡಿತು.

ಓಜಸ್ ದೇವತಾಳೆ, ರಿಷಭ್ ಯಾದವ್ ಮತ್ತು ಪ್ರಥಮೇಶ್ ಜಾವ್ಕರ್ ಅವರನ್ನೊಳಗೊಂಡ ಪುರುಷರ ತಂಡ 231–234 ರಲ್ಲಿ ಮೆಕ್ಸಿಕೊ ಎದುರು ಸೋತಿತು.

ಫೆಡರೇಷನ್ ಕಪ್ ಅಥ್ಲೆಟಿಕ್ಸ್: 100 ಮೀ ಹರ್ಡಲ್ಸ್

ಜ್ಯೋತಿ ಯರ್ರಾಜಿ ಕೂಟ ದಾಖಲೆ

ರಾಂಚಿ (ಪಿಟಿಐ): ವಿಶಾಖಪಟ್ಟಣದ ಜ್ಯೋತಿ ಯರ್ರಾಜಿ, ಫೆಡರೇಷನ್ ಕಪ್ ಅಥ್ಲೆಟಿಕ್ ಕೂಟದ ಮೂರನೇ ದಿನ ಮಹಿಳೆಯರ 100 ಮೀ. ಹರ್ಡಲ್ಸ್ ಓಟದಲ್ಲಿ ತಮ್ಮದೇ ಹೆಸರಿನಲ್ಲಿದ್ದ ಕೂಟ ದಾಖಲೆಯನ್ನು ಸುಧಾರಿಸಿದರು. ಮಳೆಯಿಂದ ಬುಧವಾರ ಕೆಲವು ಸ್ಪರ್ಧೆಗಳಿಗೆ ಅಡ್ಡಿಯಾಯಿತು.

ಮಂಗಳವಾರ ನಡೆದ ಹೀಟ್ಸ್ ವೇಳೆ 13.18 ಸೆ.ಗಳಲ್ಲಿ ಓಡಿ ಕೂಟ ದಾಖಲೆ ಸ್ಥಾಪಿಸಿದ್ದ ಜ್ಯೋತಿ, ಬುಧವಾರ ಚಿನ್ನ ಗೆಲ್ಲುವ ಹಾದಿಯಲ್ಲಿ ಈ ಓಟವನ್ನು 12.89 ಸೆ.ಗಳಲ್ಲಿ ಪೂರೈಸಿ ಗಮನಸೆಳೆದರು. ಈ ಮೂಲಕ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಭಾರತ ಅಥ್ಲೆಟಿಕ್ಸ್ ಫೆಡರೇಷನ್ ನಿಗದಿಪಡಿಸಿರುವ 13.63 ಸೆ.ಗಳ ಅರ್ಹತಾ ಮಾನದಂಡ ಮೀರಿದರು. ಏಷ್ಯನ್ ಕೂಟ ಜುಲೈ 12 ರಿಂದ 16ರವರೆಗೆ ಬ್ಯಾಂಕಾಕ್‌ನಲ್ಲಿ ನಡೆಯಲಿದೆ. ತಮಿಳುನಾಡಿನ ನಿತ್ಯಾ ರಾಮರಾಜ್ (13.44 ಸೆ.) ಮತ್ತು ಜಾರ್ಖಂಡ್‌ನ ಸಪ್ನಾ ಕುಮಾರಿ (13.59 ಸೆ.) ಅಷ್ಟೇನೂ ಪೈಪೋಟಿ ನೀಡಲಿಲ್ಲ.

ಪುರುಷರ 110 ಮೀ. ಹರ್ಡಲ್ಸ್ ಓಟದ ಚಿನ್ನ ನಿರೀಕ್ಷೆಯಂತೆ ಮಹಾರಾಷ್ಟ್ರದ ತೇಜಸ್ ಅಶೋಕ್ ಶಿರ್ಸೆ (13.72 ಸೆ.) ಪಾಲಾಯಿತು.

ಮಹಿಳೆಯರ 800 ಮೀ. ಓಟದಲ್ಲಿ ಪಂಜಾಬ್‌ನ ಟ್ವಿಂಕಲ್ ಮೇಲೆ ಕಣ್ಣು ನೆಟ್ಟಿದೆ. ಹೀಟ್ಸ್‌ನಲ್ಲಿ 2ನಿ.05.39 ಸೆ.ಗಳಲ್ಲಿ ದೂರ ಕ್ರಮಿಸಿದ ಅವರು ಅರ್ಹತಾ ಮಾನದಂಡದ (2ನಿ.05.74ಸೆ.) ಗುರಿ ಮೀರಿದ್ದಾರೆ.

ರಾಜ್ಯಕ್ಕೆ 3 ಪದಕ: ಮಂಗಳವಾರ, ಕೂಟದ ಎರಡನೇ ದಿನ ಕರ್ನಾಟಕದ ಪ್ರಿಯಾ ಮೋಹನ್ ಮಹಿಳೆಯರ 400 ಮೀ. ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಅವರು 53.40 ಸೆ.ಗಳಲ್ಲಿ ದೂರ ಕ್ರಮಿಸಿದ್ದರು. ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಜೆಸ್ಸಿ ಸಂದೇಶ್ 2.18 ಮೀ. ಎತ್ತರ ಜಿಗಿದು ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡರು. ಮಹಿಳೆಯರ 100 ಮೀ. ಓಟದಲ್ಲಿ ದಾನೇಶ್ವರಿ ಕೆ.ಟಿ. 11.69 ಸೆ.ಗಳ ಕಾಲಾವಧಿಯೊಡನೆ ಕಂಚು ಗಳಿಸಿದರು.

'ಮೋಹನ್ ಬಾಗನ್ ಸೂಪರ್ ಜೈಂಟ್' ಜೂನ್ 1ರಿಂದ ಕ್ಲಬ್ ಹೆಸರು ಬದಲು

ಕೋಲ್ಕತ್ತ (ಪಿಟಿಐ): ಅಭಿಮಾನಿಗಳ ದೀರ್ಘಕಾಲದ ಬೇಡಿಕೆಗೆ ಮಣಿದ ಮೋಹನ್ ಬಾಗನ್ ಆಡಳಿತ ಮಂಡಳಿ ತಂಡದ ಹೆಸರಿನ ಮುಂದೆ ಇದ್ದ 'ಎಟಿಕೆ' ಪದ ತೆಗೆದುಹಾಕಿದೆ.

ಈ ಕ್ಲಬ್ ಹೆಸರು ಜೂನ್ 1ರಿಂದ 'ಮೋಹನ್ ಬಾಗನ್ ಸೂಪರ್ ಜೈಂಟ್' ಆಗಲಿದೆ ಎಂದು ಕ್ಲಬ್‌ನ ಒಡೆತನ ಹೊಂದಿರುವ ಆರ್‌ಪಿ ಸಂಜೀವ್ ಗೋಯಂಕಾ ಗ್ರೂಪ್ ಬುಧವಾರ ಘೋಷಿಸಿದೆ. ಕೋಲ್ಕತ್ತ ಮೂಲದ ಫುಟ್‌ಬಾಲ್ ದೈತ್ಯ ಮೋಹನ್ ಬಾಗನ್ 133 ವರ್ಷಗಳ ಇತಿಹಾಸ ಹೊಂದಿದೆ.

ಆರ್‌ಪಿಜಿ ಗ್ರೂಪ್, ತನ್ನ ಒಡೆತನದ ಕ್ರೀಡಾ ತಂಡಗಳ ಹೆಸರಿನ ಮುಂದೆ ಸೂಪರ್‌ಜೈಂಟ್ಸ್ ಹೆಸರು ಇಡುತ್ತಿದೆ. ಐಪಿಎಲ್ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ಕೂಡ ಈ ಆರ್‌ಪಿಜಿ ಸಮೂಹದ್ದು. ಈ ಹಿಂದೆ ಅದು ಪುಣೆ ಸೂಪರ್‌ಜೈಂಟ್ಸ್ ಹೆಸರಿನ ಐಪಿಎಲ್ ತಂಡ ಹೊಂದಿತ್ತು.

'ಬುಧವಾರ ನಡೆದ ಆಡಳಿತ ಮಂಡಳಿ ಸಭೆಯ ನಂತರ ಕ್ಲಬ್‌ನ ಹೆಸರನ್ನು ಮೋಹನ್ ಬಾಗನ್ ಸೂಪರ್‌ಜೈಂಟ್ಸ್ (ಎಂಬಿಎಸ್‌ಜಿ) ಎಂದು ಬದಲಾಯಿಸಲು ನಿರ್ಧರಿಸಲಾಗಿದೆ' ಎಂದು ಕ್ಲಬ್ ಘೋಷಿಸಿದೆ.

ಎಟಿಕೆ ಮೋಹನ್ ಬಾಗನ್ ತಂಡ ಈ ವರ್ಷದ ಐಎಸ್‌ಎಲ್ ಲೀಗ್‌ನಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು ಸೋಲಿಸಿ ಮೊದಲ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು.

ಸ್ಯಾಫ್ ಫುಟ್‌ಬಾಲ್: ಜೂನ್ 21 ರಂದು ಹಣಾಹಣಿ

ಭಾರತದ ಮೊದಲ ಎದುರಾಳಿ ಪಾಕ್

ನವದೆಹಲಿ (ಪಿಟಿಐ): ಸ್ಯಾಫ್ ಫುಟ್‌ಬಾಲ್ ಟೂರ್ನಿಯಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಜೂನ್ 21 ರಂದು ಪರಸ್ಪರ ಹಣಾಹಣಿ ನಡೆಸಲಿವೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಜೂನ್ 21 ರಿಂದ ಜುಲೈ 4ರ ವರೆಗೆ ಆಯೋಜನೆಯಾಗಿರುವ ಟೂರ್ನಿಯ ವೇಳಾಪಟ್ಟಿಯನ್ನು ಬುಧವಾರ ಪ್ರಕಟಿಸಲಾಯಿತು.

ಭಾರತ, ಪಾಕಿಸ್ತಾನ, ಕುವೈತ್ ಮತ್ತು ನೇಪಾಳ ತಂಡಗಳು 'ಎ' ಗುಂಪಿನಲ್ಲಿ ಸ್ಥಾನ ಪಡೆದುಕೊಂಡಿವೆ. ಲೆಬನಾನ್, ಮಾಲ್ಡೀವ್ಸ್, ಬಾಂಗ್ಲಾದೇಶ ಮತ್ತು ಭೂತಾನ್ ತಂಡಗಳು 'ಬಿ' ಗುಂಪಿನಲ್ಲಿವೆ. ಈ ಬಾರಿ ನಡೆಯಲಿರುವ 14ನೇ ಆವೃತ್ತಿಯ ಟೂರ್ನಿಗೆ ಇನ್ನಷ್ಟು ಸ್ಪರ್ಧಾತ್ಮಕತೆ ತರುವ ನಿಟ್ಟಿನಲ್ಲಿ 'ಸ್ಯಾಫ್' ಹೊರಗಿನ ದೇಶಗಳಾದ ಲೆಬನಾನ್ ಮತ್ತು ಕುವೈತ್ ತಂಡಗಳನ್ನು ಆಹ್ವಾನಿಸಲಾಗಿದೆ.

ಜೂನ್ 21 ರಂದು ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಕುವೈತ್–ನೇಪಾಳ ಎದುರಾಗಲಿದ್ದು, ಅದೇ ದಿನ ನಡೆಯುವ ಎರಡನೇ ಪಂದ್ಯದಲ್ಲಿ ಭಾರತ– ಪಾಕಿಸ್ತಾನ ಹಣಾಹಣಿ ನಡೆಯಲಿದೆ.

ಭಾರತ ಮತ್ತು ಪಾಕಿಸ್ತಾನದ ತಂಡಗಳು ಐದು ವರ್ಷಗಳ ಬಳಿಕ ಎದುರಾಗಲಿವೆ. 2018ರ ಸ್ಯಾಫ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇವರೆಡು ತಂಡಗಳು ಕೊನೆಯದಾಗಿ ಪೈಪೋಟಿ ನಡೆಸಿದ್ದವು. ಢಾಕಾದಲ್ಲಿ ನಡೆದಿದ್ದ ಪಂದ್ಯವನ್ನು ಭಾರತ 3–1 ರಲ್ಲಿ ಜಯಿಸಿತ್ತು.

ಸ್ಯಾಫ್ ಟೂರ್ನಿಯ 'ಡ್ರಾ' ಎತ್ತುವ ಸಮಾರಂಭದಲ್ಲಿ ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ (ಎಡ) ಮತ್ತು ಕಾರ್ಯದರ್ಶಿ ಶಾಜಿ ಪ್ರಭಾಕರನ್ ಪಾಲ್ಗೊಂಡರು – ಎಐಎಫ್‌ಎಫ್ ಟ್ವಿಟರ್ ಚಿತ್ರ

ಒಟ್ಟಾರೆಯಾಗಿ ಭಾರತ– ಪಾಕಿಸ್ತಾನ ತಂಡಗಳು 20ಕ್ಕೂ ಅಧಿಕ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿವೆ. ಅದರಲ್ಲಿ 12ಕ್ಕೂ ಅಧಿಕ ಪಂದ್ಯಗಳಲ್ಲಿ ಭಾರತ ಗೆದ್ದಿದೆ. ಭಾರತ ತಂಡವು ಫಿಫಾ ರ‍್ಯಾಂಕಿಂಗ್‌ನಲ್ಲಿ 101ನೇ ಸ್ಥಾನದಲ್ಲಿದ್ದರೆ, ಪಾಕಿಸ್ತಾನವು 195ನೇ ಸ್ಥಾನದಲ್ಲಿದೆ.

ಭಾರತವು 8 ಸಲ ಸ್ಯಾಫ್ ಕಪ್ ಗೆದ್ದುಕೊಂಡಿದ್ದು, ನಾಲ್ಕು ಸಲ ರನ್ನರ್ಸ್ ಅಪ್ ಆಗಿದೆ. 2003 ರಲ್ಲಿ ಢಾಕಾದಲ್ಲಿ ನಡೆದಿದ್ದ ಐದನೇ ಆವೃತ್ತಿಯ ಟೂರ್ನಿ ಹೊರತುಪಡಿಸಿ, ಇತರ ಎಲ್ಲ 12 ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದೆ. 2003ರ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿತ್ತು.

ವೇಳಾಪಟ್ಟಿ

ಜೂನ್ 21: ಕುವೈತ್– ನೇಪಾಳ (ಆರಂಭ: ಮಧ್ಯಾಹ್ನ 3.30); ಭಾರತ– ಪಾಕಿಸ್ತಾನ (ಆರಂಭ: ರಾತ್ರಿ 7.30)
ಜೂನ್ 22: ಲೆಬನಾನ್– ಬಾಂಗ್ಲಾದೇಶ (3.30); ಮಾಲ್ಡೀವ್ಸ್– ಭೂತಾನ್ (7.30)
ಜೂನ್ 24: ಪಾಕಿಸ್ತಾನ– ಕುವೈತ್ (3.30); ನೇಪಾಳ–ಭಾರತ (7.30)
ಜೂನ್ 25: ಬಾಂಗ್ಲಾದೇಶ– ಮಾಲ್ಡೀವ್ಸ್ (3.30); ಭೂತಾನ್– ಲೆಬನಾನ್ (7.20)
ಜೂನ್ 27: ನೇಪಾಳ– ಪಾಕಿಸ್ತಾನ (3.30); ಭಾರತ– ಕುವೈತ್ (7.30) ಜೂನ್ 28: ಲೆಬನಾನ್– ಮಾಲ್ಡೀವ್ಸ್ (3.30); ಭೂತಾನ್– ಬಾಂಗ್ಲಾದೇಶ (7.30)
ಜುಲೈ 1: ಸೆಮಿಫೈನಲ್ ಪಂದ್ಯಗಳು
ಜುಲೈ 4: ಫೈನಲ್

ಕಿಪ್ರುಟೊಗೆ ತಾತ್ಕಾಲಿಕ ನಿಷೇಧ

ಪ್ಯಾರಿಸ್ (ರಾಯಿಟರ್ಸ್): ಕೀನ್ಯಾದ ದೂರ ಅಂತರದ ಓಟಗಾರ, 10 ಕಿ.ಮೀ. ರೋಡ್ ರೇಸ್‌ನಲ್ಲಿ ವಿಶ್ವದಾಖಲೆ ಹೊಂದಿರುವ ರೊನೆಕ್ಸ್ ಕಿಪ್ರುಟೊ ಅವರನ್ನು ಉದ್ದೀಪನ ಮದ್ದುಸೇವನೆ ನಿಯಮ ಉಲ್ಲಂಘನೆಗಾಗಿ ತಾತ್ಕಾಲಿಕವಾಗಿ ಅಮಾನತುತೊಳಿಸಲಾಗಿದೆ ಎಂದು ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್ (ಎಐಯು) ಬುಧವಾರ ತಿಳಿಸಿದೆ.

ಕಿಪ್ರೊಟೊ ಅವರು 2019ರ ವಿಶ್ವ ಚಾಂಪಿಯನ್‌ಷಿಪ್‌ನ 10,000 ಮೀಟರ್ ಓಟದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ನಿಷೇಧಿತ ಮದ್ದು ಬಳಕೆಗಾಗಿ (ಎಬಿಪಿ) ಅಮಾನತುಗೊಳಿಸಲಾಗಿದೆ ಎಂದು ಎಐಯು ಟ್ವಿಟರ್‌ನಲ್ಲಿ ತಿಳಿಸಿದೆ. ಎಬಿಪಿ ಎಂದರೆ ಅಥ್ಲೀಟ್ ಬಯಾಲಜಿಕಲ್ ಪಾಸ್‌ಪೋರ್ಟ್. ಅಥ್ಲೀಟುಗಳ ಮದ್ದು ಸೇವನೆ ಮಾಡಿದಲ್ಲಿ ಕಾಲಾಂತರದಲ್ಲಿ ಆಗುವ ಜೈವಿಕ ಬದಲಾವಣೆಗಳ ಪರಿಣಾಮಗಳು ಎಬಿಪಿಯಲ್ಲಿ ಗೋಚರವಾಗುತ್ತದೆ.

ಈ ಲೋಪದ ಬಗ್ಗೆ ನೋಟಿಸ್ ಅನ್ನು 23 ವರ್ಷದ ಕಿಪ್ರುಟೊ ಅವರಿಗೆ ನೀಡಲಾಗಿದೆ ಎಂದು ಎಐಯು ತಿಳಿಸಿದೆ.

ಟಿಸಿಎಸ್ ಟೆನ್ ಕೆ ರನ್: ಸಂಚಾರ ದಟ್ಟಣೆ ಸವಾಲು ಎದುರಿಸಲು ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆಯಲಿರುವ ವಿಶ್ವ ಟೆನ್ ಕೆ ರಸ್ತೆ ಓಟದ ಸ್ಪರ್ಧೆಗಳಿಗೆ ನೂತನ ಮಾರ್ಗನಕ್ಷೆ ಹಾಗೂ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಸಂಚಾರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ಈ ವೇಳಾಪಟ್ಟಿ ರೂಪಿಸಲಾಗಿದೆ ಎಂದು ರೇಸ್ ನಿರ್ದೇಶಕ ಹ್ಯುಗ್ ಜೋನಸ್ ತಿಳಿಸಿದ್ದಾರೆ.

'ಓಟದಿಂದಾಗಿ ವಾಹನ ಸಂಚಾರಕ್ಕೆ ಅಡಚಣೆಯಾಗಿ ದಟ್ಟಣೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಅದರಿಂದಾಗಿ ದಟ್ಟಣೆ ಕಡಿಮೆ ಇರುವ ಸಮಯದಲ್ಲಿ ಅಥ್ಲೀಟ್‌ಗಳಿಗೆ ಅನುಕೂಲವಾಗುವಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ' ಎಂದರು.

'ಅಥ್ಲೀಟ್‌ಗಳ ಓಟ ಮತ್ತು ವಾಹನ ಸಂಚಾರಗಳೆರಡಕ್ಕೂ ಯಾವುದೇ ಅಡಚಣೆಯಾಗದಂತೆ ಮಾರ್ಗವನ್ನು ಅಚ್ಚುಕಟ್ಟಾಗಿ ಗುರುತಿಸಲಾಗಿದೆ. 15ನೇ ಬಾರಿ ಈ ಓಟವು ಸಂಘಟನೆಯಾಗುತ್ತಿದೆ. ಅದರಿಂದಾಗಿ ಈ ಹಿಂದಿನ ಓಟಗಳಲ್ಲಿ ಆಗಿರುವ ಅನುಭವದ ಆಧಾರದಲ್ಲಿ ವೇಳಾಪಟ್ಟಿ ಹಾಗೂ ಮಾರ್ಗ ರೂಪಿಸಲಾಗಿದೆ' ಎಂದರು.

ಮೇ 21ರಂದು ಕಂಠೀರವ ಕ್ರೀಡಾಂಗಣದಲ್ಲಿ ಸ್ಪರ್ಧೆಯು ಆರಂಭಗೊಳ್ಳುವುದು. ನಗರದ ಪ್ರಮುಖ ರಸ್ತೆಗಳ ಮೂಲಕ ಓಟಗಾರರು ಸಾಗುವರು. 27 ಸಾವಿರ ಓಟಗಾರರು ಸ್ಪರ್ಧಿಸಲಿದ್ದಾರೆ.

ರೊನೆಕ್ಸ್ ಸ್ಪರ್ಧೆ ಇಲ್ಲ: ಉದ್ದೀಪನ ಮದ್ದು ಸೇವನೆ ನಿಯಮ ಉಲ್ಲಂಘನೆಗಾಗಿ ತಾತ್ಕಾಲಿಕವಾಗಿ ಅಮಾನತುಗೊಂಡಿರುವ ರೊನೆಕ್ಸ್ ಕಿಪ್ರುಟೊ ಅವರು ಇದೇ ಭಾನುವಾರ ನಗರದಲ್ಲಿ ನಡೆಯಲಿರುವ ಟಿಸಿಎಸ್ ಟೆನ್ ಕೆ ಓಟದಲ್ಲಿ ಭಾಗವಹಿಸುವುದಿಲ್ಲ ಎಂದು ಸಂಘಟಕರು ಖಚಿತಪಡಿಸಿದ್ದಾರೆ.

ಅವರು ಈ ಓಟದಲ್ಲಿ ಪ್ರಮುಖ ಆಕರ್ಷಣೆಯಾಗಿದ್ದರು. ಆದರೆ ಬುಧವಾರ ಅವರ ಅಮಾನತು ಕುರಿತು ವರದಿಯಾಗಿದೆ.

ರೇಸ್ ವಿಭಾಗಗಳು: ಓಪನ್ 10ಕೆ: (ಆರಂಭ: ಬೆಳಿಗ್ಗೆ 5.30) ವಿಶ್ವ 10ಕೆ ಮಹಿಳೆಯರು (7.10); ವಿಶ್ವ 10ಕೆ ಪುರುಷರು (8.00); ಅಂಗವಿಕಲರು, ಚಾಂಪಿಯನ್ಸ್ ಹಾಗೂ ಹಿರಿಯ ನಾಗರಿಕರು (8.05) ಮಜಾ ರನ್ (8.50)

ಬೆಂಗಳೂರಿನಲ್ಲಿ ನಡೆಯಲಿರುವ ಟಿಸಿಎಸ್ ಟೆನ್ ಕೆ ಓಟದಲ್ಲಿ ಅಥ್ಲೀಟ್‌ಗಳು ಸಾಗುವ ಮಾರ್ಗದ ಕುರಿತು ಮಾಹಿತಿ ನೀಡಿದ ನಿರ್ದೇಶಕ ಹ್ಯೂಗ್ ಜೋನಸ್